ಪುರುಷ ಸಲಿಂಗ ಕಾಮಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಮಂಗಳೂರು ನಗರದ ಅಧ್ಯಯನ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ. ಫಿಲ್. ಪದವಿಗಾಗಿ ಸಾದರ ಪಡಿಸಿದ

ಸಂಪ್ರಬಂಧ

ಸಂಶೋಧಕರು

ಹರೀಶ ಎ.

ಮಾರ್ಗದರ್ಶಕರು

ಡಾ। ರಿಚರ್ಡ್ ಪಾಯಸ್

ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ

ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ)

ಮಂಗಳೂರು – 575003

2011

ಕರ್ನಾಟಕ ತಿಯೊಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು – 575001

ಪುರುಷ ಸಲಿಂಗ ಕಾಮಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ
ಮಂಗಳೂರು ನಗರದ ಅಧ್ಯಯನ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ. ಫಿಲ್. ಪದವಿಗಾಗಿ ಸಾದರ ಪಡಿಸಿದ

ಸಂಪ್ರಬಂಧ

ಸಂಶೋಧಕರು

ಹರೀಶ ಎ.

ಮಾರ್ಗದರ್ಶಕರು

ಡಾ। ರಿಚರ್ಡ್ ಪಾಯಸ್

ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ

ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ)

ಮಂಗಳೂರು – 575003

2011

ಕರ್ನಾಟಕ ತಿಯೊಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು – 575001

ಯೋಗ್ಯತಾ ಪತ್ರ

ಹರೀಶ ಎ. ರವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ "*ಪುರುಷ ಸಲಿಂಗ ಕಾಮಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಮಂಗಳೂರು ನಗರದ ಅಧ್ಯಯನ*" ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ. ಫಿಲ್. ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲ ಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ದಿನಾಂಕ: 08.06.2011

ಡಾ। ರಿಚರ್ಡ್ ಪಾಯಸ್

ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ

ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ)

ಮಂಗಳೂರು – 575003

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಸಾದರ ಪಡಿಸಿದ *"ಪುರುಷ ಸಲಿಂಗ ಕಾಮಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಮಂಗಳೂರು ನಗರದ ಅಧ್ಯಯನ"* ಎಂಬ ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ) ಇದರ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ। ರಿಚರ್ಡ್ ಪಾಯಸ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಡಪಡಿಸುತ್ತೇನೆ.

ದಿನಾಂಕ: 08.06.2011

Hareesha A
ಹರೀಶ ಎ.
ಸಂಶೋಧಕರು
ಕರ್ನಾಟಕ ತಿಯೊಲಾಜಿಕಲ್ ಸಂಶೋಧನಾ ಕೇಂದ್ರ
ಮಂಗಳೂರು

ಅಧ್ಯಯನದ ವಿವರಗಳು

ಕೋಷ್ಟಕಗಳ ಪಟ್ಟಿ

ಅಧ್ಯಾಯ ೧

ಪೀಠಿಕೆ

೧.೧ ಲೈಂಗಿಕತೆ

ಹಸಿವನ್ನು ತೀರಿಸಿಕೊಳ್ಳುವುದು, ಬಾಯಾರಿಕೆಯನ್ನು ತಣಿಸುವುದು, ಲೈಂಗಿಕ ತೃಪ್ತಿ ಹೊಂದುವುದು – ಇವು ಮೂರೂ ನಮ್ಮ ಪ್ರಾಥಮಿಕ ಅಗತ್ಯಗಳು. ನಮಗೆ ಮಾತ್ರವಲ್ಲ, ಈ ಭೂಮಿಯ ಮೇಲೆ ವಾಸಿಸುವ ಪ್ರಾಣಿಕೋಟಿಗಳಿಗೂ ಈ ಮೂರೂ ಪ್ರಮುಖ ಅಗತ್ಯಗಳು. ಜೀವಿ ಹುಟ್ಟಿದಾಗಿನಿಂದ ಬೆಳೆಯುವುದು, ಬದುಕನ್ನು ಅನುಭವಿಸುವುದು, ನಂತರ ನಿರ್ವಾಣ ಹೊಂದುವವರೆಗೂ ನಡೆಯುವ ಜೀವನ ಪ್ರಕ್ರಿಯೆಗೆ ಈ ಪ್ರಾಥಮಿಕ ಅಗತ್ಯಗಳನ್ನು ತೀರಿಸಿಕೊಳ್ಳುವುದು ತುಂಬಾ ಅಗತ್ಯ. ಆದರೆ ಈ ಜೀವನ ಪ್ರಕ್ರಿಯೆ ಸರಾಗವಾಗಿ ನಡೆಯಲು ಹಿಡಿ ಅನ್ನ, ಬೊಗಸೆ ನೀರು, ಸ್ವಲ್ಪ ಹೊತ್ತಿನ ಸಂಪರ್ಕ ಇದ್ದರೆ ಸಾಕು. ಪ್ರಾಣಿಗಳೆಲ್ಲ ಇಷ್ಟಕ್ಕಾಗಿ ಹುಡುಕಾಡುತ್ತವೆ. ಅವು ಲಭಿಸಿದಷ್ಟರಲ್ಲೇ ಸಂತೃಪ್ತಿ ಹೊಂದಿ, ಜೊತೆಯ ಪ್ರಾಣಿಗಳೊಡನೆ ಸಹಜೀವನವನ್ನು ನಡೆಸುತ್ತವೆ. ಮನುಷ್ಯನೊಬ್ಬನನ್ನು ಬಿಟ್ಟು, ಅವನು ಹಿಡಿಯಷ್ಟು ಹೃದಯದಲ್ಲಿ ಆಕಾಶದಷ್ಟು ಆಸೆ, ಆಕಾಂಕ್ಷೆ, ಅನುಭವಗಳನ್ನು ಹೊಂದಲು ಹಾತೊರೆಯುತ್ತಿರುತ್ತಾನೆ. ಇದರಿಂದ ಸಂತೃಪ್ತಿ ಪಡೆಯಲು ತನ್ನ ಸೃಜನಶೀಲತೆಯನ್ನು ಉಪಯೋಗಿಸುತ್ತಾನೆ.

ಇಲ್ಲಿ ಮನುಷ್ಯ ರಸವನ್ನು ಆಸ್ವಾದಿಸುವ ಸ್ಥಿತಿಯಿಂದ ಆ ರಸವನ್ನು ಸೃಷ್ಟಿಸುವ ಒಂದು ಶ್ರೇಷ್ಠ ಲಕ್ಷಣವನ್ನು ಹೊಂದಿರುತ್ತಾನೆ. ಹಿಡಿ ಅನ್ನವೇ ಆದರೂ ನೇರವಾಗಿ ಬಾಯೊಳಗೆ ಹಾಕಿಕೊಂಡು ಅಗಿದುಬಿಡುವ ಬದಲು ಮೊಸರಲ್ಲಿ ಕಲಸಿಕೊಂಡು, ಜೊತೆಗೆ ಉಪ್ಪಿನಕಾಯಿಯನ್ನು ಚೀಪುತ್ತಾ ತಿಂದರೆ ... ಆಹಾ ಆ 'ರುಚಿ' ಎಷ್ಟು ಹಿತವಾಗಿರುತ್ತದೆಂದು ಮನುಷ್ಯ ಅನುಭವಿಸಬಲ್ಲ. ಇಲ್ಲಿ ಮನುಷ್ಯನ ವಿಷಯದಲ್ಲಿ 'ಪ್ರಾಥಮಿಕ ಅಗತ್ಯ' ಒಂದು ಒಳ್ಳೆಯ 'ಅಭಿರುಚಿ' ಆಗಿದೆ.ಇದಕ್ಕೆ ಆಧಾರಭೂತವಾದ ಮೌಲಿಕ ಪ್ರವೃತ್ತಿ ಲೈಂಗಿಕ ಅಗತ್ಯವನ್ನು ತೀರಿಸಿಕೊಳ್ಳುವುದರ ಮೂಲಕ ಮನುಷ್ಯ ಹೊಂದುವ ಸಂತೃಪ್ತಿ ಬೆಳೆಯುತ್ತದೆ. ಪ್ರತಿಯೊಬ್ಬರೂ ತನ್ನದೇ ಆದ ವಿನೂತನ, ಸೃಜನಶೀಲತೆಯಿಂದ ಈ ಲೈಂಗಿಕ ಭಾವನೆಗಳನ್ನು ಏರ್ಪಡಿಸುತ್ತಾನೆ. ಅವನ ಮನೋಭಾವಗಳ ಮೇಲೆ ಅವನ ಮನೋವೈಖರಿಗಳು, ವೈಯಕ್ತಿಕ ನಾಚಿಕೆಗಳು ದೃಢವಾದ ಅಭಿಪ್ರಾಯಗಳನ್ನು ಏರ್ಪಡಿಸುತ್ತದೆ. ಈ ವಿಷಯದಲ್ಲಿ ಪ್ರತಿಯೊಬ್ಬರ ಲೈಂಗಿಕಾನುಭವವೂ ವಿಭಿನ್ನವೇ, ಅವರವರೇ ಇದನ್ನು ಸ್ವತಃ ಸಂಪಾದಿಸಿಕೊಳ್ಳುವ ವಿಜ್ಞಾನ ವಾದ್ದರಿಂದ ಇಷ್ಟೊಂದು ವಿಭಿನ್ನತೆಯನ್ನು ಪಡೆದಿರುತ್ತದೆ. ಈ ಸ್ವವಿಜ್ಞಾನವನ್ನು ಅಂತರಂಗ, ವೈಯಕ್ತಿಕ ಅನುಭವಗಳಿಂದ ಮತ್ತು ಬಹಿರಂಗ ಸಾಮಾಜಿಕ ಪರಿಸ್ಥಿತಿಗಳಿಂದ ಮನುಷ್ಯ ಗ್ರಹಿಸುತ್ತಾನೆ, ಹಾಗಾಗಿ

ಮಾನವ ಲೈಂಗಿಕತೆಯನ್ನು, ಅದರ ಒಟ್ಟು ಬಾಹ್ಯಸ್ವಭಾವವನ್ನು ತಿಳಿದುಕೊಳ್ಳುವುದು, ಅರ್ಥ ಮಾಡಿಕೊಳ್ಳುವುದು ಕಷ್ಟವೇ.........

ಸೆಕ್ಸ್ ಎನ್ನುತ್ತಿದ್ದಂತೆ ಎಲ್ಲರಿಗೂ ಒಮ್ಮೆಗೇ ಆಸಕ್ತಿ ಮೂಡುತ್ತದೆ. ಹಾಗಾಗಿಯೇ ಸೆಕ್ಸ್ ಈಸ್ ಎ ಯುನಿವರ್ಸಲ್ ಮೋಟಿವ್ ಎಂದಿದ್ದಾರೆ ಶಾಸ್ತ್ರಜ್ಞರು (ಕಮಲಾಕರ ೨೦೧೦: ೨). ಪ್ರಾಚೀನ ಕಾಲದಿಂದಲೂ, ಇದುವರೆಗೂ ಲೈಂಗಿಕ ಬದುಕು ಮನುಷ್ಯನನ್ನು ಅನೇಕ ಕ್ಷೇತ್ರಗಳಲ್ಲಿ ಆಕರ್ಷಣೀಯವಾಗಿಯೇ ಉಳಿಸಿಕೊಂಡಿದೆ. ಕಲೆ, ಸಾಹಿತ್ಯಗಳಲ್ಲೂ ಲೈಂಗಿಕ ವಿಷಯಗಳೇ ಪ್ರಧಾನ ವಿಷಯಗಳಾಗಿವೆ. ಮಾನವ ಪ್ರವರ್ತನೆಯ ರೂಪು ಕಲ್ಪನೆ ಮಾಡುವಲ್ಲಿ, ಮತಸಿದ್ಧಾಂತಗಳನ್ನು, ವೇದಾಂತ ಸಿದ್ಧಾಂತಗಳನ್ನು, ಕಾನೂನು ವಿಧಾನಗಳನ್ನು ತಯಾರಿಸುವುದರ ಹಿಂದೆ, ನೈತಿಕತೆಯ ಹೆಸರಿನಲ್ಲಿ ಲೈಂಗಿಕ ವಿಷಯಗಳನ್ನು, ಅದರ ಒಟ್ಟು ನಿಷೇಧಗಳನ್ನು ವ್ಯವಸ್ಥೆ ಮಾಡಲು ಹೆಚ್ಚು ಪ್ರಯತ್ನ ನಡೆದಿದೆ. ಚರಿತ್ರೆಗೆ ಸೇರಿದ ಹಲವು ಹಂತಗಳಲ್ಲಿ ರುಗ್ಮತೆಗೆ, ಸೃಜನಶೀಲತೆಗೆ, ಕೋಪೋದ್ರಿಕ್ತ ಭಾವಗಳಿಗೆ, ಉದ್ವೇಗ ಸಮಸ್ಯೆಗಳಿಗೆ ಇನ್ನೂ ಹೇಳಬೇಕೆಂದರೆ ಒಂದು ಸಂಸ್ಕೃತಿ ಅಭಿವೃದ್ಧಿ ಹೊಂದುವುದಕ್ಕೆ ಅಥವ ಪತನಗೊಳ್ಳುವುದಕ್ಕೆ ಸೆಕ್ಸ್ ಕಾರಣವೆಂದು ಹೇಳಲಾಗಿದೆ.

ಅಪರಿಮಿತವಾದ ಲೈಂಗಿಕ ಕ್ರಿಯೆಗಳು, ಅತ್ಯಲ್ಪ ಲೈಂಗಿಕತೆಗಳು ಅಥವ ಅಸಾಧಾರಣವಾದ ಲೈಂಗಿಕ ಚಟುವಟಿಕೆಗಳೇ ಮೇಲಿನ ಪರಿಸ್ಥಿತಿ ಸೃಷ್ಟಿಸುತ್ತದೆಂದು ಜ್ಞಾನಿಗಳು ಹೇಳುತ್ತಾರೆ (ಕಮಲಾಕರ ೨೦೧೦: ೨).

ಯಾವಾಗ ಸೆಕ್ಸಿಗೆ ಮುಸುಕು ಹಾಕಲಾರಂಭಿಸಿತೋ, ಇದರ ಬಗ್ಗೆ ಮನುಷ್ಯನಿಗೆ ಮತ್ತಷ್ಟು ಆಸಕ್ತಿ ಬೆಳೆಯಲು ಆರಂಭಿಸಿತು. ಹಿಡಿದುಕೊಳ್ಳಬೇಕೆಂಬ ಕಾತರ ಹೆಚ್ಚಾಯಿತು. ಸೆಕ್ಸ್‌ಗೆ ಪರಿತಪಿಸುವುದಕ್ಕೂ ಆಹಾರಕ್ಕಾಗಿ ಮನುಷ್ಯ ಪರಿತಪಿಸುವುದಕ್ಕೂ ಸಾಂದ್ರತೆಯಲ್ಲಿ ವಿಸ್ತೃತವಾದ ವೈರುಧ್ಯ ಏರ್ಪಟ್ಟಿತು. ಸಾಮಾಜಿಕ ಕಟ್ಟುಪಾಡುಗಳ ಹೆಸರಿನಲ್ಲಿ ಲೈಂಗಿಕತೆಯನ್ನು ಹಿಡಿಯಲ್ಲಿ ಬಂಧಿಸಬೇಕಾದ ಪರಿಸ್ಥಿತಿ ನಾಗರೀಕತೆಯಲ್ಲಿ ಭಾಗ ಮಾಡಿಕೊಡುತ್ತಿದ್ದಂತೆ, ಆ ಹಿಡಿಯನ್ನು ತೆರೆಯಬೇಕೆಂದು, ಅದರಲ್ಲಿ ಏನಿದೆಯೋ ಎಂದು ನೋಡಬೇಕೆಂದು ಮನುಷ್ಯ ಕಾತರಗೊಂಡ. ಸುಲಭವಾಗಿ 'ಎಟುಕ'ದ ಈ ಸುಖದ ಬಗ್ಗೆ ವಿಪರೀತವಾದ ಆಕರ್ಷಣೆ ಹೊಂದಲಾರಂಭಿಸಿದ. ಈ ಸೌಖ್ಯದಲ್ಲಿ ಗರಿಷ್ಟ ಮಟ್ಟದಲ್ಲಿ ತಾನು ಸಂತೃಪ್ತಿ ಹೊಂದಬೇಕೆಂದು ಆಶಿಸತೊಡಗಿದ. ಈ ಅಭಿಲಾಷೆಯ ಮೇರೆಗೆ ವೈಖರಿಗಳು, ವಿಶ್ವಾಸಗಳು,

ಭಿನ್ನಾಭಿಪ್ರಾಯಗಳು ಜಾಗ ಮಾಡಿಕೊಂಡವು. ಮನುಷ್ಯ ಯಾವ ವಯಸ್ಸಿನಲ್ಲಿ, ಯಾವ ಹಂತದಲ್ಲಿದ್ದರೂ ಲೈಂಗಿಕತೆಯ ಬಗ್ಗೆ ಅಪರಿಮಿತವಾದ ಮೋಜನ್ನು ಪ್ರದರ್ಶಿಸಲಾರಂಭಿಸಿದ. ದಿನವೂ ತಾನು ಬಯುಸಿದವರ ಜೊತೆ ಲೈಂಗಿಕ ಸುಖವನ್ನು ಹೊಂದುತ್ತಾ, ಮನಃಪೂರ್ವಕವಾಗಿ ಈ ಸ್ವರ್ಗವನ್ನು ಕೈವಶ ಮಾಡಿಕೊಳ್ಳಬೇಕೆಂದು, ರತಿಕ್ರೀಡಾ ಸಾಮ್ರಾಜ್ಯಕ್ಕೆ ಮಹಾರಾಜನಾಗಿ ಮೆರೆಯಬೇಕೆಂದು ಆಶಿಸಿದ. ಅದಕ್ಕೆ ಮನುಷ್ಯನಿಗೆ ಸೆಕ್ಸ್ ಒಂದು ಶಕ್ತಿಯುತವಾದ ಪ್ರೇರಣೆಯಾಯಿತು. ಸಾರ್ವತ್ರಿಕ (ಯೂನಿವರ್ಸಲ್) ಪ್ರೇರಣೆಯಾಗಿ ಅವತರಿಸಿತು.

೧.೨ ಲೈಂಗಿಕ ದೃಷ್ಟಿಕೋನ–ಕೆಲವು ವಿವರಗಳು

'ಲೈಂಗಿಕ' ಎನ್ನುವ ಪದವನ್ನು ಕೇಳುತ್ತಿದ್ದಂತೆ ಅದರ ಅರ್ಥವೇನೋ ಸಂದೇಹಾಸ್ಪದವಾಗೇ ಕೇಳಿಸುತ್ತದೆ. ಅಷ್ಟರಲ್ಲೇ ಎಲ್ಲವೂ ಅರ್ಥವಾದಂತೆಯೂ ಅನ್ನಿಸುತ್ತದೆ. ನಮಗೆ ಚೆನ್ನಾಗಿ ಅರ್ಥವಾದದ್ದು, ಮೊದಲ ವಿವರವೇನೆಂದರೆ, ಲೈಂಗಿಕತೆ ಮುಕ್ತವಾಗಿ ಮಾತನಾಡಬಾರದ್ದು ಎಂದು. ಸೆಕ್ಸ್ ಅಂದರೆ ಕೇವಲ ಶಾರೀರಿಕ ಬಂಧ ಮಾತ್ರವಲ್ಲ. ಪ್ರೀತಿ, ಪ್ರೀತಿಸುವುದು, ಮದುವೆ, ಕುಟುಂಬ ಮುಂತಾದ ವ್ಯವಸ್ಥೆಗಳಿಗೆ ಮೂಲಧಾತು. ಇದೊಂದು ಕಲೆಯಾಗಿಯೂ ಹೇಳಲಾಗುವುದು. ಇದು ಸಾಮಾಜಿಕ, ಸಾಂಸ್ಕೃತಿಕ ಮಹತ್ವ ಪಡೆದದ್ದು (ಮಾರಿನೊವೆಸ್ಕಿ ೧೯೨೯). ಪುರುಷ ಸಂಭೋಗಿಸಲು ಇಷ್ಟಪಡುತ್ತಾನೆ. ಹಾಗೆಯೇ ಸ್ತ್ರಿ ಕೂಡಾ. ಇದು ಶರೀರಕ್ಕೆ ಯಾವ ಹಾನಿಯನ್ನೂ ಮಾಡುವುದಿಲ್ಲ. ಇದರರ್ಥ ಸಂಭೋಗಿಸಿದ ವ್ಯಕ್ತಿಯನ್ನು ನೀನು ಪ್ರೀತಿಸಲೇಬೇಕೆಂದಿಲ್ಲ (ಮಿಲ್ಲರ್ ೧೯೮೧).

೧.೩ ಲೈಂಗಿಕತೆ ಅಂದರೇನು?

ಮೇಲೆ ಹೇಳಿದ ವಿವರಗಳನ್ನು ಆಧರಿಸಿ ನೋಡಿದರೆ ಈ ಪ್ರಶ್ನೆಗೆ ಅಷ್ಟು ಸುಲಭವಾಗಿ ಉತ್ತರ ಹೇಳಲಾಗುವುದಿಲ್ಲ. ಜೀವಶಾಸ್ತ್ರ, ಮಾನಸಿಕ ಶಾಸ್ತ್ರದ ರೀತ್ಯ ಸೆಕ್ಸ್ ಒಂದು ಶಕ್ತಿಯುತವಾದ ಶಕ್ತಿಯೆಂದು ಭಾವಿಸಿದ್ದಾನೆ ಫ್ರಾಯ್ಡ್.ಮಾಲಿನೋವೆಸ್ಕಿ ಇದನ್ನು ಸಾಮಾಜಿಕ, ಸಾಂಸ್ಕೃತಿಕ ಕೋನದಿಂದ ಕಂಡಿದ್ದಾನೆ (ಕಮಲಾಕರ, ೨೦೧೦:೫). ಹೆನ್ರಿ ಮಿಲ್ಲರ್ ಸೆಕ್ಸ್ ಬಗ್ಗೆ ಮನುಷ್ಯನಿಗಿರುವ ದೃಷ್ಟಿಕೋನವನ್ನು ತನ್ನ ಕಾದಂಬರಿಗಳಲ್ಲಿ ಸೂಕ್ಷ್ಮವಾಗಿ ವಿವರಿಸಿದ್ದಾನೆ.

ನಿತ್ಯ ಜೀವನದಲ್ಲಿ ಈ ಸೆಕ್ಸ್ ಎನ್ನುವ ಪದವನ್ನು ಅಂಗಭೇದವನ್ನು ತಿಳಿಸಲು ಬಳಸುತ್ತೇವೆ ಅಥವ ಜನನೇಂದ್ರಿಯಗಳ ಜೊತೆ ನಡೆಸುವ ರತಿಕ್ರಿಯೆಯನ್ನು ತಿಳಿಸಲು ಬಳಸುತ್ತೇವೆ. ಲೈಂಗಿಕತೆ ಎಂದರೆ

ವ್ಯಕ್ತಿತ್ವದ ದೃಷ್ಟಿಕೋನ. ಸೆಕ್ಸ್ ಬಗ್ಗೆ, ಲೈಂಗಿಕತೆ ಬಗ್ಗೆ ನಾವು ಮಾತಾಡಿಕೊಳ್ಳಲು ಭಾಷೆ ತುಂಬಾ ಪರಿಮಿತಿಯದು ಆದ್ದರಿಂದ ಅದೊಂದು ದುರದೃಷ್ಟಕರ ಸಂಗತಿಯೇ. ಲೈಂಗಿಕತೆಯ ಅಂಚುಗಳನ್ನು ತಾಕದೇ ಲೈಂಗಿಕ ಚೇಷ್ಟೆಗಳನ್ನು (ಹಸ್ತಮೈಥುನ, ಚುಂಬನ, ರತಿಕ್ರೀಡೆ) ಲೈಂಗಿಕ ಪ್ರವರ್ತನೆಗಳಿಗೆ (ಸರಸ ಸಲ್ಲಾಪ ಆಡುವುದು, ಹುಡುಗಿಯರ ಜೊತೆ ಕಳೆಯುವುದು) ವ್ಯತ್ಯಾಸಗಳನ್ನು ಹೇಳುತ್ತೆವೆ.

೧.೪ ಲೈಂಗಿಕತೆಗೆ ಮೊದಲ ಸಿದ್ಧಾಂತಗಳು

ಸಿಗ್ಮಂಡ್ ಫ್ರಾಯ್ಡ್ (೧೮೫೬-೧೯೩೯) ವಿಯೆನ್ನಾಗೆ ಸೇರಿದ ಮನಶ್ಶಾಸ್ತ್ರಜ್ಞ ಮಾನವ ಬದುಕಿಗೆ ಲೈಂಗಿಕ ಪ್ರಾಧಾನ್ಯತೆಯ ಬಗ್ಗೆ ಸಿದ್ಧಾಂತವನ್ನು ರೂಪಿಸಿದ. ಅದಕ್ಕೆ ಮೊದಲಾಗಲೀ, ನಂತರವಾಗಲೀ ಫ್ರಾಯ್ಡ್ ನಷ್ಟು ಯಾವ ಮನೋವಿಜ್ಞಾನಿಯೂ ಈ ವಿಷಯಗಳ ಬಗ್ಗೆ ಆಳವಾಗಿ ವಿಶ್ಲೇಷಿಸಲಿಲ್ಲ. ಇವತ್ತು ಫ್ರಾಯ್ಡ್‌ನ ಮೇಧಾಶಕ್ತಿಗೆ ಸಾಕ್ಷಿಯಾಗಿ ಸೃಜನಶೀಲ ಪರಿಶೋಧನೆಯಂತೆಯೂ, ಪ್ರಸ್ತುತ ಪರಿಸ್ಥಿತಿಯಲ್ಲಿ ತಲೆಯೆತ್ತಿದ ಭಾವಗಳನ್ನು ಅರ್ಥವಾಗುವಂತೆ ಮಾಡಲು, ನಂಬಿಸಲು ಅವನಿಗಿದ್ದ ಸಮರ್ಥ್ಯ ಎತ್ತಿ ತೋರುತ್ತದೆ. ಮಾನವ ಪ್ರವರ್ತನೆಗೂ, ಮನೋದೌರ್ಬಲ್ಯಕ್ಕೂ ಲೈಂಗಿಕ ಕಾರಣಗಳೇ ಪ್ರಾಥಮಿಕ ಶಕ್ತಿಯೆಂದು ಫ್ರಾಯ್ಡ್ ಭಾವಿಸಿದ. ನ್ಯೂರೋಸಿಸ್ ಲಕ್ಷಣಗಳಿಗೂ ಇವೇ ದಾರಿಯಾಗುತ್ತಿದೆಯೆಂದು ಹೇಳಿದ. ೧೮೮೦-೧೯೦೫ರ ನಡುವಿನಲ್ಲಿ ಹಲವು ನಿಪುಣರ ದೃಷ್ಟಿಕೋನವನ್ನು ಆಸರೆಯಾಗಿ ತೆಗೆದುಕೊಂಡು ಫ್ರಾಯ್ಡ್ ಶೈಶವ, ಬಾಲ್ಯ ಹಂತದಲ್ಲಿ ಕಾಮುಕತೆ (ಲಿಬಿಡ್) ಯ ಇರುವಿಕೆಯನ್ನು ಗುರುತಿಸಿದ. ವಿಶ್ಲೇಷಣಾಪೂರ್ವಕ್ವಾದ ಮಾನಸಿಕ,ಲೈಂಗಿಕ ಅಭಿವೃದ್ಧಿ ಸಿದ್ಧಾಂತವನ್ನು ಪ್ರತಿಪಾದಿಸಿದ.

ಸಿಗ್ಮಂಡ್ ಅನೇಕ ಸಿದ್ಧಾಂತಗಳನ್ನು ರೂಪಿಸಿದ. ಅದರಲ್ಲಿ ಮುಖ್ಯವಾಗಿ 'ಈಡಿಪಸ್ ಕಾಂಪ್ಲೆಕ್ಸ್' ಬಾಲ್ಯದ ಹಂತದಲ್ಲಿ ತಂದೆಯ ಬಗ್ಗೆ ಪ್ರೇಮ, ದ್ವೇಷ, ಭಯ, ಪ್ರತಿಭಟನೆಯ ಭಾವನೆಗಳನ್ನು ಮೈಗೂಡಿಸಿಕೋಂಡಿರುವ ಮಗು, ತಾಯಿಯ ಬಗ್ಗೆ ಲೈಂಗಿಕಾಕರ್ಷಣೆಗೆ ಅನಿವಾರ್ಯ ಪರಿಸ್ಥಿತಿಯಲ್ಲಿ ಗುರಿಯಾಗುವುದನ್ನು 'ಈಡಿಪಸ್ ಕಾಂಪ್ಲೆಕ್ಸ್' ಅನ್ನುತ್ತಾರೆ.ಗಂಡು ಮಕ್ಕಳು ತಾವು ಮಾಡುವ ತಪ್ಪುಗಳಿಗೆ ಶಿಕ್ಷೆಯಾಗಿ ಶಿಶ್ನವನ್ನು ಕಳೆದುಕೊಳ್ಳಬೇಕಾಗುತ್ತದೆಂದು ತೀವ್ರವಾಗಿ ಆತಂಕಕ್ಕೆ ಒಳಗಾಗುತ್ತಾರೆ. ಹೆಣ್ಣೂಮಕ್ಕಳು ಇವರ ವಿರುದ್ಧವಾಗಿ ಎಲೆಕ್ಟ್ರಾ ಕಾಂಪ್ಲೆಕ್ಸ್‌ಗೆ ಒಳಗಾಗುತ್ತಾರೆಂದು, ತಮಗೆ ಶಿಶ್ನವಿಲ್ಲದಿರುವುದರಿಂದ ತಾವು ದುರ್ಬಲರು ಎನ್ನುವ ಭಾವನೆಯನ್ನು ಬೆಳೆಸಿಕೊಳ್ಳುತ್ತಾರೆ. ವ್ಯಕ್ತಿತ್ವದಲ್ಲಿಯ ಚೇತನಾವಸ್ಥೆಗಿಂತಲೂ ಒಳಪೊರೆಗಳಲ್ಲಿರುವ ಅಚೇತನಾವಸೆಯಲ್ಲಿ ಇದು ಹೊರಬೀಳುವುದನ್ನು ಫ್ರಾಯ್ಡ್ ಮನೋವಿಶ್ಲೇಷಣೆಯೆನ್ನುವ ವೈದ್ಯವಿಜ್ಞಾನಕ್ಕೆ ತೆರೆ ತೆಗೆದ. ಮಾನಸಿಕ

ಸಮಸ್ಯೆಗಲಿಗೆ ದಾರಿಯಾಗುವ ಅಚೇತನಾ ಸಂಘರ್ಷಣೆಗಳನ್ನುಅಂದಾಜು ಮಾಡಿ, ಚಿಕಿತ್ಸೆ ನೀಡಲು ಈ ಪದ್ದತಿಯನ್ನು ವಿನಿಯೋಗಿಸಿದ. ಆಧುನಿಕ ಲೈಂಗಿಕ ತಜ್ಞರು ಫ್ರಾಯ್ಡ್ ಸಿದ್ಧಾಂತಗಳೊಡನೆ ಹೊಂದಿಕೊಳ್ಳದೇಹೋದರೂ ಅವನು ನೀಡಿದ ವಿಶ್ಲೇಷಣಾ ಪದ್ಧತಿಗಳನ್ನು, ಲೈಂಗಿಕ ಸಮಸ್ಯೆಗಳ ಚಿಕಿತ್ಸೆಗೆ ಅದನ್ನು ಉಪಯೋಗಿಸುತ್ತಿದ್ದಾರೆ (ಕಮಲಾಕರ ೨೦೧೦: ೨೧).

೧.೫ ಮಾನವ ಲೈಂಗಿಕ ಚರಿತ್ರೆ

ನಮ್ಮ ವೈಯಕ್ತಿಕ ಲೈಂಗಿಕ ತತ್ವವನ್ನು ತಿಳಿದುಕೊಳ್ಳಲು ಒಂದು ಮುಖ್ಯವಾದ ಅಡ್ಡಿಯೇನೆಂದರೆ, ಸೆಕ್ಸ್ ಪರವಾದ ನಮ್ಮ ಪ್ರಾಚೀನ, ಸಾಮಾಜಿಕ ವ್ಯವಸ್ಥೆಯಲ್ಲಿ ಕೈದಿಗಳಾಗಿರುವುದೇ ಎನ್ನುತ್ತಾನೆ ಬುಲ್ಲವ್ (೧೯೭೬). ಪ್ರಸ್ತುತ ವಿಶ್ವವ್ಯಾಪಿಯಾಗಿರುವ ಲೈಂಗಿಕತೆಯ ಒಟ್ಟು ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ನಾವು ಮೊದಲಿನಿಂದ ನೋಡಬೇಕು. ಮನುಷ್ಯನ ಸಾಂಸ್ಕೃತಿಕ ಚರಿತ್ರೆ ೫,೦೦೦ ವರ್ಷಗಳಿಂದ ವಿಕಸಿತಗೊಳ್ಳುತ್ತಾ ಬಂದಿದ್ದರೂ, ಲೈಂಗಿಕ ಪ್ರವರ್ತನೆ, ವೈಖರಿಗಳನ್ನು ಕ್ರಿಸ್ತಪೂರ್ವ ೧೦೦೦ ವರ್ಷಗಳವರೆಗೂ ಯಾರೂ ವಿವರಿಸಲಿಲ್ಲ. ಆದರೆ ಆಗಿನ ಸಮಾಜದಲ್ಲಿ ಲೈಂಗಿಕತೆಯ ಬಗ್ಗೆ ಅವಗಾಹನೆಯಿಲ್ಲವೆಂದು ಹೇಳಲಾರೆವು. ಮನಶ್ಯಾಸ್ತ್ರಜ್ಞ ನಿಪುಣರ ಪ್ರಕಾರ ರಕ್ತಸಂಬಂಧಿಗಳೊಡನೆ ರತಿಕ್ರೀಡೆಯನ್ನು ಅದಕ್ಕೂ ಮೊದಲೇ ನಿಷೇಧಿಸಲಾಗಿತ್ತು. ಅದೇ ರೀತಿ ಹೆಣ್ಣು ಗಂಡಸಿಗೆ ಸುಖವನ್ನು ಮಾತ್ರ ನೀಡುವ ಆಸ್ತಿಯಾಗಿ ಪರಿಗಣಿಸಲಾಗಿತ್ತು. ಹೆಣ್ಣನ್ನು ಪುನರುತ್ಪತ್ತಿ ಮಾಡುವ ಯಂತ್ರದಂತೆ ಕಾಣಲಾಗುತ್ತಿತ್ತು. ಗಂಡಿಗೆ ಮಾತ್ರ ಲೈಂಗಿಕ ಸ್ವಾತಂತ್ರ್ಯ ಹೆಚ್ಚಾಗಿತ್ತೆಂದು ತಿಳಿದುಬರುತ್ತದೆ. ಬಹುಪತ್ನಿತ್ವ, ವ್ಯಭಿಚಾರ ಸ್ವಾತಂತ್ರ್ಯಗಳಿತ್ತೆಂದು ಆಧಾರಗಳು ತೋರಿಸುತ್ತಿದ್ದವು. ಅದೇನೇ ಆದರೂ ಲೈಂಗಿಕತೆ ಮನುಷ್ಯನ ಬದುಕಿನಲ್ಲಿ ಒಂದು ಸತ್ಯವೆಂದು ಪರಿಗಣಿಸಲ್ಪಟ್ಟಿತ್ತು.

೧.೬ ಅತಿ ಪ್ರಾಚೀನ ಹಿನ್ನಲೆ

ಜೂದೋಯಿಸಂ ಪ್ರವೇಶಿಸಿದ ಕಾಲದಲ್ಲಿ ಮಾನವ ಲೈಂಗಿಕ ವೈಖರಿಗಲಲ್ಲಿ, ಅಂತರ್ಲೀನವಾಗಿ ಒಂದು ನಾಟಕೀಯವಾದ ಪರಿಣಾಮ ಜಾಗ ಮಾಡಿಕೊಂದಿತ್ತು. ಟೆನ್ ಕಮಾಂಡ್‌ಮೆಂಟ್ಸ್ ಎನ್ನುವ ಹತ್ತು ಶಾಸನಗಲಲ್ಲಿ ವ್ಯಭಿಚಾರ ನಿಷೇಧಿಸಲ್ಪತ್ತು. ಅದೇ ಸಮಯದಲ್ಲಿ ನಾವೆಲ್ಲಾ ಗುರುತಿಸಿಕೊಳ್ಳಬೇಕಾದ ರೀತಿ ಯಲ್ಲಿ ಸೆಕ್ಸ್ ಆನಂದವಾದದ್ದೆಂದೂ, ಇದೊಂದು ಸೃಜನಾತ್ಮಕ ಕ್ರಿಯೆಯೆಂದು ಈ ಶಾಸನಗಳಲ್ಲಿ ವರ್ಣಿಸಲಾಗಿತ್ತು. ಅಷ್ಟೇ ಅಲ್ಲ, ಸೆಕ್ಸ್ ಒಂದು ಪಾಪದ ಕೆಲಸವೆಂದಾಗಲೀ, ಕೇವಲ ಪುನರುತ್ಪತ್ತಿಗಾಗಿಯೇ ಉದ್ದೇಶಿಸಲಾಗಿ ಇರುವುದಲ್ಲವೆಂದು ತಿಳಿಸಲಾಗಿತ್ತು.

೧.೭ ಲೈಂಗಿಕತೆಯ ಮೇಲೆ ಪರಿಶೋಧನಾ ದೃಷ್ಟಿ

ಆಲ್‌ಫ್ರೆಡ್ ಸಿ. ಕಿನ್ಸೆ (೧೮೯೪-೧೯೫೬) ಇಂಡಿಯಾನಾ ಯೂನಿವರ್ಸಿಟಿಯಲ್ಲಿ ಪ್ರಾಣಿಶಾಸ್ತ್ರಜ್ಞ ೧೯೩೮ರಲ್ಲಿ ಇವನನ್ನು ವಿವಾಹದ ಬಗ್ಗೆ ಭೊಧಿಸುವಂತೆ ಕೇಳಿದರು. ಮಾನವ ಲೈಂಗಿಕ ಪ್ರವರ್ತನೆಗಳ ಬಗ್ಗೆ ವೈಜ್ಞಾನಿಕ ದೃಷ್ಟಿಕೋನವಿಲ್ಲದಿರುವುದರಿಂದ, ಕಿನ್ಸೆ ಒಂದು ಪ್ರಶ್ನಾವಳಿಯನ್ನು ರೂಪಿಸಿದ. ತನ್ನ ವಿದ್ಯಾರ್ಥಿಗಳ ಲೈಂಗಿಕ ಚರಿತ್ರೆಯನ್ನು ತಿಳಿದುಕೊಳ್ಳಲು ಮೊದಲು ಇದನ್ನು ಉಪಯೋಗಿಸಿದ. ಈ ರೀತಿ ವ್ಯಕ್ತಿಗಳನ್ನು ಪ್ರಶ್ನಿಸಿ ವಿಷಯ ಸಂಗ್ರಹಿಸುವ ರೀತಿಯಲ್ಲಿ ವಿವರಣಾತ್ಮಕವಾದ, ವಾಸ್ತವವಾದ ವಿಷಯಗಳು ಹೊರಬರುವ ಅವಕಾಶವಿದೆ. ಆದ್ದರಿಂದ ಕೂಡಲೇ ಸಾವಿರಾರು ಸ್ತ್ರೀಪುರುಷರನ್ನು ಸಂದರ್ಶನ ಮಾಡುವ ಕಾರ್ಯಕ್ರಮ ಪ್ರಾರಂಭಿಸಿದ. ಇವನು ತನ್ನ ಸಮೀಕ್ಷೆಯನ್ನು ೧೯೪೮ ರಲ್ಲಿ ಪುರುಷರ ಲೈಂಗಿಕತೆಯ ಮೇಲೂ, ೧೯೫೩ರಲ್ಲಿ ಮಹಿಳೆಯರ ಲೈಂಗಿಕತೆಯ ಮೇಲೂ, ಪ್ರಚರಿಸಿದ. ಇದರಲ್ಲಿ ಕೀನ್ಸೆ ೧೨,೦೦೦ ಜನರನ್ನು ಮುಖಾಮುಖಿಯಾಗಿ ಸಂದರ್ಶನ ಮಾಡಿದ. ಸಮಾಜದ ಎಲ್ಲಾ ವರ್ಗದವರನ್ನೂ ಭೇಟಿಯಾದ.ಈ ಸಮೀಕ್ಷೆಯ ಫಲಿತಾಂಶ ಜಗತ್ತಿನಾದ್ಯಂತ ಸಂಭ್ರಮಾಶ್ಚರ್ಯಗಳನ್ನು ಮೂಡಿಸಿತು. ೮೫% ಸ್ತ್ರೀಯರು ಅಂಗಜ ಹೊಂದದಿರುವುದು, ૩೭% ಪುರುಷರು ಬದುಕಿನ ಯವುದೋ ಹಂತದಲ್ಲಿ ಸಲಿಂಗಕಾಮಕ್ಕೊಳಗಾಗಿದ್ದು, ೪೦% ಗಂಡಸರು ತಮ್ಮ ಹೆಂಡತಿಯರಿಗೆ ಅವಿಶ್ವಾಸ ಪಾತ್ರರಾಗಿದ್ದು, ೬೨% ಮಹಿಳೆಯರು ಹಸ್ತಮೈಥುನದಿಂದ ತೃಪ್ತಿ ಹೊಂದುತ್ತಿದ್ದುದು-ಇಂತಹ ಅನೇಕ ಅಚ್ಚರಿಯ ಅಭಿಪ್ರಾಯಗಳು ಬೆಳಕಿಗೆ ಬಂತು.

ಪುರುಷ- ಪುರುಷ ಸಲಿಂಗ ಕಾಮವನ್ನು ಇಂಗ್ಲೀಷ್‌ನಲ್ಲಿ 'ಗೇ' ಎಂದು ಕರೆಯುವರು. ಸ್ತ್ರೀ ಸಲಿಂಗಕಾಮ ಹಾಗು ಪುರುಷಸಲಿಂಗಕಾಮವು ಅನಾದಿ ಕಾಲದಿಂದಲೂ ಅಸ್ತಿತ್ವದಲ್ಲಿದೆ ಎಂದು ಹೇಳಬಹುದು. ಸ್ತ್ರೀಸಲಿಂಗಕಾಮಿಗಳೇ ವಾಸಿಸುತ್ತಿದ್ದ 'ಲೆಸ್ಬಾಸ್' .ದ್ವೀಪದ ವರ್ಣನೆ ದೊರೆಯುತ್ತದೆ. ಹಾಗು ಲೆಸ್ಬಾಸ್ ದ್ವೀಪ ವಾಸಿಗಳನ್ನು ಲೆಸ್ಬಿಯನ್ಸ್ ಎಂದು ಕರೆದರು. ಈ ದ್ವೀಪದಲ್ಲಿ ಗ್ರೀಕ್ ಮಹಾಕವಯತ್ರಿ ಸ್ಯಾಪ್ಪೋ, ಸ್ತ್ರೀಸಲಿಂಗಕಾಮದ ಮುಕ್ತವಾಗಿ ಕಾವ್ಯವನ್ನು ಬರೆದಿರುವಳು. ಸ್ತ್ರೀ ಸಲಿಂಗಕಾಮವನ್ನು ವೈಭವೀಕರಿಸಿ ಬರೆದಿರುವಳು (ಸೋಮೇಶ್ವರ ೨೦೧೦: ೭૩).

೧.೮ ಶಿಲಾಯುಗದಲ್ಲೂ ಸಲಿಂಗಕಾಮಿ ಇದ್ದರು

ಪುರಾತತ್ವ ಶಾಸ್ತ್ರಜ್ಞರು ೫,೦೦೦ ವರ್ಷದ ಹಿಂದಿನ ಮಾನವನ ಅಸ್ಥಿಪಂಜರವನ್ನು ಪತ್ತೆ ಮಾಡಿದ್ದು ಈತ ಜಗತ್ತಿನ ಮೊತ್ತಮೊದಲ ಸಲಿಂಗಕಾಮಿ ಗುಹಾಂತರ್ಗತವಾಸಿ ಎಂದು ಭಾವಿಸಿದ್ದಾರೆ.

ಆತನನ್ನು ಹೂಳಿರುವ ರೀತಿಯಿಂದ ಆತ ವಿಭಿನ್ನ ಪ್ರಕಾರದ ಲೈಂಗಿಕ ಅಭ್ಯಾಸ ಹೊಂದಿದ್ದ ಎಂಬುದು ತಿಳಿದು ಬರುತ್ತದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ ಎಂದು ಡೈಲಿ ಮೇಲ್ ವರದಿ ಮಾಡಿದೆ. (ಎ ನ್ ಐ ಲಂಡನ್ ವಿಜಯ ಕರ್ನಾಟಕ. ೨೦೧೧) ಶಿಲಾಯುಗದ ಈ ಮಾನವನ ಅಸ್ಥಿಪಂಜರ, ಚೆಕ್ ಗಣರಾಜ್ಯದಲ್ಲಿ ಉತ್ಖನನದ ಸಮಯದಲ್ಲಿ ಪತ್ತೆಯಾಗಿದೆ. ಇದು ಕ್ರಿ. ಪೂ. ೨೯೦೦ರಿಂದ ಕ್ರಿ.ಪೂ. ೨೫೦೦ ಕಾಲಕ್ಕೆ ಸೇರಿರಬಹುದು. ಈತನನ್ನು ಮಹಿಳೆಯರಿಗಾಗಿ ಮೀಸಲಿಡುವ ಸ್ಥಳದಲ್ಲಿ ಹೂಳಲಾಗಿರುವುದು ಕಂಡು ಬಂದಿದೆ. ಆ ಸಮಯದಲ್ಲಿ ಪುರುಷರನ್ನು ಬಲಬದಿಗೆ ಹೊರಳಿಸಿ ತಲೆ ಪಶ್ಚಿಮಕ್ಕೆ ಇರುವಂತೆ ಮತ್ತು ಮಹಿಳೆಯರನ್ನು ಎಡಕ್ಕೆ ಹೊರಳಿಸಿ ತಲೆ ಪೂರ್ವಕ್ಕೆ ಚಾಚಿರುವಂತೆ ಹೂಳಲಾಗುತ್ತಿತ್ತು. ಆದರೆ ಈ ಪ್ರಕರಣದಲ್ಲಿ ದೊರೆತ ಅಸ್ಥಿ ಪಂಜರವನ್ನು ಎಡಬದಿಗೆ ಹೊರಳಿಸಿ ತಲೆ ಪಶ್ಚಿಮಕ್ಕೆ ಬರುವಂತೆ ಹೂಳಲಾಗಿದೆ.

ಇದರ ಜತೆಗೆ ಆ ಕಾಲದಲ್ಲಿ ಸತ್ತವರನ್ನು ಶಸ್ತ್ರಗಳು, ಸುತ್ತಿಗೆ, ಹೊಳೆಯುವ ಕತ್ತಿ ಹಾಗೂ ಒಂದಷ್ಟು ವೈವಿದ್ಯಮಯ ಆಹಾರ ಹಾಗೂ ಒಂದಷ್ಟು ವೈವಿಧ್ಯಮಯ ಆಹಾರ ಹಾಗೂ ಪಾನೀಯಗಳನ್ನು ಜತೆಗಿರಿಸಿ ಹೂಳಲಾಗುತ್ತಿತ್ತು. ಇದು ಈತ ಸಲಿಂಗಕಾಮಿ ಆಗಿರಬಹುದು ಎಂಬುದಕ್ಕೆ ಇನ್ನೊಂದು ಉದಾಹರಣೆ.

ಮಹಿಳೆಯರನ್ನು ಹಲ್ಲುಗಳಿಂದ ಮಾಡಿದ ಕಂಠೀಹಾರ, ಸಾಕು ಪ್ರಾಣಿಗಳು ಹಾಗೂ ತಾಮ್ರದ ಕಿವಿಯೋಲೆ ಮುಂತಾದವುಗಳನ್ನು ಇಟ್ಟು ಹೂಳಲಾಗುತ್ತಿತ್ತು. ಅಷ್ಟೇಅಲ್ಲ, ಮನೆಯಲ್ಲಿ ಬಳಸಲಾಗುವ ಹೂಜಿ ಹಾಗೂ ಅಂಡಾಕಾರದ ಮಡಕೆಯನ್ನು ಕಾಲ ಬಳಿ ಇಡಲಾಗುತ್ತಿತ್ತು. ಗವಿಯಲ್ಲಿ ನೆಲೆಸಿದ್ದ ಶಿಲಾಯುಗದ ಮಾನವನನ್ನು ಮನೆಬಳಕೆಯ ಹೂಜಿಗಳ ಜತೆ ಹೂಳಲಾಗಿತ್ತು. ಆದರೆ ಯಾವುದೇ ಶಸ್ತ್ರಗಳಿರಲಿಲ್ಲ. ಗಾಜು ಅಥವಾ ಪಿಂಗಾಣಿಯ ಪಾತ್ರೆಗಳ ಉತ್ಪಾದನೆ ಗೊತ್ತಿದ್ದು ಅದರ ಬಳಿಕೆ ಆ ಕಾಲದಲ್ಲಿ ಇತ್ತು. ಅಲ್ಲದೆ ಆ ಕಾಲದಲ್ಲಿ ಶವ ಸಂಸ್ಕಾರಕ್ಕೆ ಅತಿ ಹೆಚ್ಚು ಪ್ರಾಧಾನ್ಯತೆ ನೀಡಲಾಗುತ್ತಿತ್ತು. ಹಾಗಾಗಿ ಇಲ್ಲೇನೋ ತಪ್ಪು ನಡೆದಿದೆ ಅಥವಾ ಇದು ಕಾಕತಾಳೀಯ ಎಂದು ವಿಜ್ಞಾನಿಗಳು ಭಾವಿಸಿಲ್ಲ.

೧.೯ ಇತಿಹಾಸ ಹಾಗೂ ಧರ್ಮಗಳಲ್ಲಿ ಸಲಿಂಗಕಾಮ

ಹಿಂದೂ ಧರ್ಮ

ಹತ್ತನೇ ಶತಮಾನದ ಮಧ್ಯ ಭಾರತದ ದೇವಾಲಯಗಳಾದ ವಿಶ್ವನಾಥ, ಖಜುರಾಹೋ, ಚಿತ್ರಶಿಲ್ಪಗಳಲ್ಲಿ ಒಬ್ಬ ಬಿಕ್ಷು ಸನ್ಯಾಸಿ ಒಬ್ಬ ಇನ್ನೊಬ್ಬನನ್ನು ಮುದ್ದಿಸುವ ಶಿಲ್ಪವನ್ನು ಕಾಣಬಹುದು. ಹಾಗೆಯೇ ಮಧ್ಯ ಯುಗದ ಮುಘಲ್ ಸಾಹಿತ್ಯ ಮತ್ತು ಚಿತ್ರ ಕಲಾಕೃತಿಗಳಲ್ಲಿ ಸಲಿಂಗ ಅನುರಕ್ತಿಯ ವ್ಯಾಪಕ ಉಲ್ಲೇಖಗಳು ಇವೆ. ಚರಿತ್ರೆ ಪೂರ್ವ ಯುಗದ ಗುಹೆಗಳಲ್ಲಿನ ಚಿತ್ರಗಲ್ಲಿ ಸಲಿಂಗ ಅನುರಕ್ತಿಯನ್ನು ತೋರಿಸುವ ಚಿತ್ರಗಳನ್ನು ಪುರಾತತ್ವ ಶಾಸ್ತ್ರಕಾರರು ಗುರುತಿಸಿದ್ದಾರೆ.

ಭಾರತದ ಪ್ರಾಚೀನ ರಾಜನೀತಿ ಗ್ರಂಥವಾದ ಕೌಟಿಲ್ಲನ ಅರ್ಥಶಾಸ್ತ್ರದಲ್ಲಿ ವಿವಿಧ ರೀತಿಯ ಯೋನಿಯೇತರ ಲೈಂಗಿಕ ಕ್ರಿಯೆಗಳ ಬಗ್ಗೆ ಉಲ್ಲೇಖವಿದೆ ಯೋನಿಯೇತರ ಲೈಂಗಿಕ ಕ್ರಿಯೆಗಳನ್ನು ಕಡಿಮೆ ಪ್ರಮಾಣದ ದಂಡ ಶುಲ್ಕದೊಂದಿಗೆ ಶಿಕ್ಷಿಸಲಾಗುತ್ತಿತ್ತು. ಸಲಿಂಗಕಾಮವನ್ನು ನಿರಾಕರಿಸುವ ಸಂದರ್ಭದಲ್ಲಿ ಅದನ್ನು ಕನಿಷ್ಠ ದಾವೆಯೆಂದು ಪರಿಗಣಿಸಲ್ಪಡುತ್ತಿತ್ತು. ಆದರೆ ಅನ್ಯಲಿಂಗೀಯ ಜೊತೆಗಿನ ಲೈಂಗಿಕ ಸಂಪರ್ಕ ಬಹುತೇಕ ಸಂದರ್ಭಗಳಲ್ಲಿ ಶಿಕ್ಷಿಸಲಾಗುತ್ತಿತ್ತು.

ಭಾರತದ ಪ್ರಾಚೀನ ಗ್ರಂಥವಾದ ಮನುಶಾಸ್ತ್ರದಲ್ಲೂ ಕೂಡ ಸಲಿಂಗಕಾಮದ ಆಚರಣೆಗೆ ಸಂಬಂಧಿಸಿದ ನೀತಿಸಂಹಿತೆ ಉಲ್ಲೇಖವಿದೆ. ಅದರ ಪ್ರಕಾರ ಸಲಿಂಗಕಾಮವನ್ನು ಲೈಂಗಿಕಕ್ರಿಯೆಯ ಭಾಗವೆಂದು ಪರಿಗಣಿಸಲ್ಪಟ್ಟಿತ್ತು. ಆದರೂ ಸಲಿಂಗಕಾಮ ನಡವಳಿಕೆಗೂ ಕೆಲವೊಂದು ಶಿಕ್ಷೆಗಳನ್ನು ನಿಗದಿಪಡಿಸಲಾಗುತ್ತಿತ್ತು, ಉದಾಹರಣೆಗೆ ವಯಸ್ಸಾದ ಹೆಂಗಸು ಮತ್ತು ನವಯುವತಿ ಜೊತೆಗೆ ಸಲಿಂಗ ಸಂಪರ್ಕದ ಸಂದರ್ಭದಲ್ಲಿ ಆಕೆಯ ತಲೆ ಬೋಳಿಸಿ, ಎರಡು ಬೆರಳುಗಳನ್ನು ತುಂಡರಿಸಿ ಕತ್ತೆಯ ಮೇಲೆ ಕೂರಿಸಿ ಮೆರವಣಿಗೆ ಮಾಡಿಸಲಾಗುತ್ತಿತ್ತು.

ಇಬ್ಬರು ಕನ್ಯೆಯರ ನಡುವಣ ಲೈಂಗಿಕ ಸಂಬಂಧದ ಬಗ್ಗೆ ಒಂದು ಶ್ಲೋಕವು ಹೇಳುವ ಪ್ರಕಾರ "ಯಾವ ಕನ್ಯೆ ಇನ್ನೊಬ್ಬ ಕನ್ಯೆಯನ್ನು ಮಲಿನ ಮಾಡುತ್ತಾಳೋ" ಅವಳಿಗೆ ೨೦೦ 'ಪಣ'ದ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು.

ಆದರೆ ಇಬ್ಬರು ಪುರುಷರ ನಡುವಣ ಸಲಿಂಗೀಯ ಸಂಪರ್ಕವನ್ನು ನಿಯಮಗಳ ಮೂಲಕ ಖಂಡಿಸಲಾಗುತ್ತಿತ್ತು. ಬಟ್ಟೆ ಬಿಚ್ಚಿ ಸ್ನಾನ ಮಾಡಿಸುವುದು. ದನದ ಪಂಚಗವ್ಯದ ಸೇವನೆ ಜೊತೆಗೆ ಒಂದು ದಿನದ ಉಪವಾಸದ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು. ಸಲಿಂಗೀಯ ಲೈಂಗಿಕ ಸಂಪರ್ಕವನ್ನು ಸಾಂಪ್ರದಾಯಿಕ ನಿಯಮಗಳ ಪ್ರಕಾರ ಜಾತಿಯಿಂದ ಹೊರಹಾಕುವ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು.

ಇತಿಹಾಸದಲ್ಲಿ, ಅನಾದಿಕಾಲದಿಂದಲೂ ಶಿಖಂಡಿ, ನಪುಂಸಕ ಎಂದು ಕರೆಯಿಸಿಕೊಳ್ಳುತ್ತಿದ್ದ ವ್ಯಕ್ತಿಗಳು ಇರುವುದನ್ನು ಕಂಡಿದ್ದೇವೆ, ಕೇಳಿದ್ದೇವೆ. ರಾಜ ಮಹಾರಾಜರ ಅಂತಃಪುರಗಳನ್ನು ಕಾಯಲು ನಪುಂಸಕರನ್ನು ನೇಮಿಸಿಕೊಳ್ಳುತ್ತಿದ್ದುದು ಅವರಿಂಗ ಅಂತಃಪುರದಲ್ಲಿನ ರಾಣಿಯರ ಲೈಂಗಿಕ ಅತ್ಯಾಚಾರವಾಗುವುದಿಲ್ಲವೆಂಬ ನಂಬಿಕೆಯಿಂದ. ಪಾಶ್ಚಾತ್ಯರು ನಪುಂಸಕರನ್ನು ಹಾಡು ಹೇಳುವ ಗುಂಪುಗಳಲ್ಲಿ ಸೇರಿಸಿಕೊಳ್ಳುತ್ತಿದ್ದರು. ನಮ್ಮ ದೇಶದಲ್ಲಿನ ಹಲವಾರು ಶಿಲ್ಪಕಲೆಗಳಲ್ಲಿ ಶಿಖಂಡಿಗಳ ಚಿತ್ರಣವಿರುವುದನ್ನು ನೋಡಬಹುದು. ಇಂಥ ಶಿಖಂಡಿಗಳಿಗೆ ಯಾವುದೋ ಅಗೋಚರ ಶಕ್ತಿ ಇದೆ. ಅದರಿಂದ ಅವರು ಸಾಮಾನ್ಯ ಜನರನ್ನು ಆಶೀರ್ವದಿಸುವ ಸಾಮರ್ಥ್ಯವನ್ನು ಪಡೆದಿರುತ್ತಾರೆ ಎಂದೆಲ್ಲಾ ನಂಬಿದ್ದರು.

ಹಿಂದೂ ಧರ್ಮದ ಪ್ರಮುಖ ವೇಧಗಳಲ್ಲಿ ಒಂದಾದ ಋಗ್ವೇದವು ಹೇಳುವ ಪ್ರಕಾರ 'ಪ್ರಕೃತಿ ಏವಂ ವಿಕೃತಿ' (ನಾವು ಕಾಣುವ ಅನೈಸರ್ಗಿಕಗಳು ಒಂದಲ್ಲ ಒಂದು ರೀತಿಯಲ್ಲಿ ನೈಸರ್ಗಿಕ ವಾಗಿರುತ್ತದೆ.) ಕೆಲವು ವಿದ್ವಾಂಸರ ನಂಬಿಕೆಯಂತೆ ಮಾನವ ಜೀವನದಲ್ಲಿ ಸಲಿಂಗಕಾಮ / ಅಂತರ್‌ಲಿಂಗೀಯಗಳ ಚಕ್ರೀಯ ಆಯಾಮಗಳು ಎಲ್ಲಾ ವಿಧದ ಸಾರ್ವತ್ರಿಕ ವೈವಿದ್ಯವಾಗಿದೆ.

ಇತಿಹಾಸಿಕ ಬರವಣಿಗೆಗಳ ಪುರಾವೆಯಂತೆ ಸಲಿಂಗೀಯತೆಯು ಭಾರತೀಯ ಇತಿಹಾಸದ್ಯಾಂತ ಹರಡಿದೆ ಜೊತೆಗೆ ಸಲಿಂಗಕಾಮಿಗಳು ಉದ್ದೇಶಪೂರ್ವಕವಾಗಿ ಎಲ್ಲೂ ಕೀಳು ಮಟ್ಟದಲ್ಲಿ ಕಾಣಲಿಲ್ಲ.

ಮುಸ್ಲಿಂ ಧರ್ಮ

ಪವಿತ್ರ ಖುರ್‌ಆನ್, ಹದೀಸ್ ಗ್ರಂಥಗಳು ಮತ್ತು ಇಸ್ಲಾಮೀ ಚರಿತ್ರೆ ಗ್ರಂಥಗಳಲ್ಲಿ ಸಲಿಂಗಕಾಮವನ್ನು ಪ್ರಾರಂಭಿಸಿದವರು ಯಾರು ಎಂಬುವುದನ್ನು ಸ್ಪಷ್ಟವಾಗಿ ಪ್ರತಿಪಾದಿಸಲಾಗಿದೆ. ಪ್ರಕೃತಿ ವಿರುದ್ಧವಾದ ಸಲಿಂಗಕಾಮ ಅಥವಾ ಸಲಿಂಗರತಿಯನ್ನು ಪ್ರಾರಂಭಿಸಿದ್ದು ಪ್ರವಾದಿ ಲೂತ್ವ್ (ಅ) ರವರ

ಸತ್ಯನಿಷೇಧಿಗಳಾದ ಜನತೆಯಾಗಿತ್ತು. ಇಂದಿನ ಜೋರ್ಡಾನ್ ಮತ್ತು ಫೆಲಸ್ತೀನ್‌ನ ನಡುವೆ ನೆಲೆಸಿರುವ ಸದೂಮ್ ಎಂಬ ನಾಡಿನಿಂದ ಈ ಪ್ರಕೃತಿ ವಿರುದ್ದವಾದ ದುಷ್ಕೃತ್ಯವು ಪ್ರಾರಂಭವಾಯಿತು.

ಸಲಿಂಗಕಾಮವನ್ನು ಮೊಟ್ಟಮೊದಲು ಹುಟ್ಟು ಹಾಕಿದವರು ಯಾರು? ಮತ್ತು ಅದು ಎಲ್ಲಿ ಪ್ರಾರಂಭವಾಯಿತು ಎಂಬುವುದರ ಬಗ್ಗೆ ಮುಸ್ಲಿಮರಿಗೆ ಅದರಲ್ಲೂ ಧಾರ್ಮಿಕ ಜ್ಞಾನವುಳ್ಳವರಿಗೆ ಸ್ಪಷ್ಟವಾಗಿ ತಿಳಿದಿದೆ. ಪವಿತ್ರ ಖುರ್‌ಆನ್, ಹದೀಸ್ ಗ್ರಂಥಗಳು ಮತ್ತು ಇಸ್ಲಾಮೀ ಚರಿತ್ರೆ ಗ್ರಂಥಗಳಲ್ಲಿ ಸಲಿಂಗಕಾಮವನ್ನು ಪ್ರಾರಂಭಿಸಿದವರು ಯಾರು ಎಂಬುವುದನ್ನು ಸ್ಪಷ್ಟವಾಗಿ ಪ್ರತಿಪಾದಿಸಲಾಗಿದೆ.

ಸಲಿಂಗರತಿಯನ್ನು ಪ್ರಾರಂಭಿಸಿದ್ದು ಪ್ರವಾದಿ ಲೂತ್ವ್(ಬಿ) ರವರ ಸತ್ಯನಿಷೇಧಿಗಳಾದ ಜನತೆಯಾಗಿತ್ತು. ಇಂದಿನ ಜೋರ್ಡಾನ್ ಮತ್ತು ಫೆಲಸ್ತೀನ್ ನಡುವೆ ನೆಲೆಸಿರುವ ಸದೂಮ್ ಎಂಬ ನಾಡಿನಿಂದ ಈ ಪ್ರಕೃತಿ ವಿರುದ್ಧವಾದ ದುಷ್ಕೃತ್ಯವು ಪ್ರಾರಂಭವಾಯಿತು. ಇಂದು ಜನರು ಆ ಪ್ರದೇಶದಲ್ಲಿ ಡೆಡ್ ಸೀ (ಮೃತ್ಯು ಸಮುದ್ರ) ಎಂಬ ವಿಚಿತ್ರವನ್ನು ನೋಡಲು ಹೋಗುತ್ತಾರೆ.

ಪ್ರವಾದಿ ಲೂತ್ವ್(ಅ) ರವರು ಪ್ರವಾದಿ ಇಬ್ರಾಹಿಂ(ಅ) ರವರ ಸಹೋದರ ಹಾರಾನ್ ರವರ ಪುತ್ರರಾಗಿದ್ದಾರೆ. ಪ್ರವಾದಿ ಲೂತ್ವ್(ಅ) ರವರಿಗೆ ಪ್ರವಾದಿತ್ವ ಲಭಿಸುವುದಕ್ಕಿಂತ ಮುಂಚೆ ಅವರು ಪ್ರವಾದಿ ಇಬ್ರಾಹಿಂರವರ ಜೊತೆಯಲ್ಲೇ ವಾಸಿಸುತ್ತಿದ್ದರು. ಪ್ರವಾದಿ ಇಬ್ರಾಹಿಂ(ಅ)ರವರು ಫೆಲಸ್ತೀನ್ ಗೆ ವಲಸೆ ಬಂದ ಬಳಿಕ ಅವರಿಗೆ ಪ್ರವಾದಿತ್ವ ಲಭಿಸಿತು. ಅಲ್ಲಿಂದಲೇ ಅವರನ್ನು ಸದೂಮ್ ಜನಾಂಗಕ್ಕೆ ಪ್ರವಾದಿಯಾಗಿ ನಿಯೋಗಿಸಲಾಯಿತು. ಸದೂಮ್ ನಾಡಿನಲ್ಲಿ ನೆಲೆಸಿದ್ದ ಜನರು ಧಿಕ್ಕಾರಿಗಳೂ ನೀಚರೂ ಆಗಿದ್ದರು. ವಿಗ್ರಹಾರಾಧನೆ, ಕೊಲೆ, ಸುಲಿಗೆಯೊಂದಿಗೆ ಗುದ ಸಂಭೋಗದಂತಹ ಹೇಯ ಕೃತ್ಯವನ್ನು ಅವರು ಎಸಗುತ್ತಿದ್ದರು. ಸುಂದರ ಹುಡುಗರನ್ನೋ ತರುಣರನ್ನೋ ಕಂಡರೆ ಅವರ ಮೇಲೆ ಎಗರಿಬಿದ್ದು ತಮ್ಮ ಕಾಮ ತೃಷೆಯನ್ನು ತೀರಿಸುತ್ತಿದ್ದರು. ಇದು ಕೆಲವೊಮ್ಮೆ ಏಕಾಂಗಿಯಾಗಿಯೂ ಸಾಮೂಹಿಕವಾಗಿಯೂ ನಡೆಯುತ್ತಿತ್ತು.

ಪ್ರಸ್ತುತ ಸಲಿಂಗರತಿಯನ್ನು ಸದೂಮ್ ಜನಾಂಗವೇ ಹುಟ್ಟು ಹಾಕಿತ್ತೇ? ಅದಕ್ಕಿಂತ ಮುಂಚಿನವರು ಈ ದುಷ್ಕೃತ್ಯವನ್ನು ಎಸಗಿರುವ ಸಾಧ್ಯತೆಯಿಲ್ಲವೇ? ಅಷ್ಟಕ್ಕೂ ಈ ಜನಾಂಗದಿಂದಲೇ ಪ್ರಾರಂಭವಾಯಿತು ಎನ್ನುವುದಕ್ಕೆ ಪುರಾವೆಯೇನು? ಎಂಬ ಪ್ರಶ್ನೆಗಳಿಗೆ ಪವಿತ್ರ ಖುರ್‌ಆನಿನಲ್ಲಿ ಸ್ಪಷ್ಟವಾದ

ಉತ್ತರವಿದೆ. "ಇನ್ನು ಲೂತ್‌ರನ್ನು (ನಾವು ಪ್ರವಾದಿಯನ್ನಾಗಿ ಕಳುಹಿಸಿದೆವು) ಅವರು ತನ್ನ ಜನಾಂಗದವರಿಗೆ ಹೇಳಿದ ಸಂದರ್ಭ. ನೀವು ಅನೈತಿಕತೆ ಎಸಗುತ್ತಿರುವಿರಾ? ಲೋಕದಲ್ಲಿ ಹಿಂದೆಂದೂ ಯಾವೊಬ್ಬನಿಂದಲೂ ನಡೆಯದ ದುಷ್ಕೃತ್ಯವಿದು. ಸ್ತ್ರೀಯರ ಬದಲಿಗೆ ನಿಜವಾಗಿಯೂ ಕಾಮೋದ್ರಿಕ್ತರಾಗಿ ಪುರುಷರನ್ನು ಸಂಪರ್ಕಿಸುತ್ತಿರುವಿರಿ. ನೀವು ಹದ್ದು ಮೀರಿದ ಜನಾಂಗವಾಗಿರುವಿರಿ" (ಅಲ್‌ರಾಫ್ ೮೦) ಪ್ರಸ್ತುತ ಸೂಕ್ತದಿಂದ ಸದೂಮ್ ಜನಾಂಗವೇ ಮನುಕುಲಕ್ಕೆ ಅದುವರೆಗೂ ಪರಿಚಯವಿಲ್ಲದ ಸಲಿಂಗಕಾಮವನ್ನು ಪ್ರಾರಂಭಿಸಿತ್ತೆಂದು ತಿಳಿದು ಬರುತ್ತದೆ.

ಕ್ರಿಶ್ಚಿಯನ್ ಧರ್ಮ

ಬೈಬಲ್ಲಿನ ಬುಕ್ ಆಫ್ ಜೆನೆಸಿಸ್ ನಲ್ಲಿ ಸೋಡಮ್ ಮತ್ತು ಗೋಮೊರ ನಗರಗಳ ಪ್ರಸ್ತಾಪ ಬರುತ್ತದೆ. ಈ ನಗರವಾಸಿಗಳು ಪುರುಷ ಸಲಿಂಗಕಾಮದಲ್ಲಿ ತೊಡಗಿದ್ದರು. ಈ ಅಸಹಜ ನಡವಳಿಕೆಯನ್ನು ನೋಡಿ ದೇವರು ಈ ಎರಡೂ ನಗರಗಳ ಮೇಲೆ ಬೆಂಕಿಯ ಮಳೆಗರೆದು ನಾಶಗೊಳಿಸುತ್ತಾನೆ (ಸೋಮೇಶ್ವರ ೨೦೧೦: ೭೩).

೧.೧೦ ಗ್ರೀಕ್ ದೇಶದಲ್ಲಿ ಹೀಗಿರುತ್ತಿತ್ತು

ಪ್ರಾಚೀನ ಗ್ರೀಕ್ ದೇಶಗಳಲ್ಲಿ ಸಲಿಂಗಕಾಮ ಅಂಗೀಕಾರವೇ ಅಲ್ಲದೆ, ಪ್ರೋತ್ಸಾಹವನ್ನು ಕೂಡಾ ಹೊಂದಿತ್ತು. ಬೆಳೆದವರಿಗೂ, ಆಗ ತಾನೇ ಯೌವನದಲ್ಲಿ ಹೆಜ್ಜೆಯಿರಿಸಿದ ಹುಡುಗರಿಗೂ ಮಧ್ಯೆ ಸಲಿಂಗ ಸಂಪರ್ಕ ಸಾಮಾನ್ಯವಾದ ವಿಷಯವಾಗಿತ್ತು. ಯುವಕರ ನೈತಿಕತೆಯ ಬಗ್ಗೆ ಹೇಳಬೇಕಾಗಿದ್ದ ವಯಸ್ಕ ಈ ಸಲಿಂಗಕಾಮದಲ್ಲಿ ಮುಕ್ತವಾಗಿ ನಡೆದುಕೊಳ್ಳುತ್ತಿದ್ದ. ಆ ಕಾಲದಲ್ಲಿ ಈ ವಿಷಯವನ್ನು ಒಂದು ಶೈಕ್ಷಣಿಕಕ್ಕೆ ಸಂಬಂಧಿಸಿದಂತೆಯೇ ಕಾಣಲಾಗುತ್ತಿತ್ತು. ಅದೇ ಸಮಯದಲ್ಲಿ ಬೇರೆ ಇಬ್ಬರು ವ್ಯಕ್ತಿಗಳ ನಡುವೆ ಸಲಿಂಗ ಕಾಮವನ್ನು ಅನುಮೋದಿಸುತ್ತಿರಲಿಲ್ಲ (ಟನ್ನಾ ಹಿಲ್ ೧೯೮೦).

೧.೧೧ ಭಾರತದಲ್ಲಿ ಸಲಿಂಗಕಾಮ

ಸಲಿಂಗಕಾಮವು, ಭಾರತೀಯ ನಾಗರೀಕ ಸಮಾಜ ಹಾಗೂ ಸರಕಾರ ಈ ಎರಡರಿಂದಲೂ ಬಹಿಷ್ಕರಿಸಲ್ಪಟ್ಟ ವಿಷಯವಾಗಿದೆ. ಇದು ಸಾರ್ವಜನಿಕ ಚರ್ಚೆಯಿಂದ ತಡೆಯಲ್ಪಟ್ಟಿದೆ, ಏಕೆಂದರೆ 'ಲೈಂಗಿಕತೆ'ಯು ಯಾವುದೇ ವಿಧದಲ್ಲಿ ಬಹಳ ವಿರಳವಾದ ಮುಕ್ತ ಚರ್ಚೆಯಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಸಲಿಂಗಕಾಮತ್ವದ ಬಗೆಗಿನ ಧೋರಣೆ ನಿಧಾನವಾಗಿ ಬದಲಾಗಿದೆ. ಬಾಲಿಹುಡ್ ಹಾಗೂ

ಭಾರತೀಯ ಮಾಧ್ಯಮಗಳಲ್ಲಿ ವರ್ಣರಂಜಿತ ಚರ್ಚೆಗಳು ಸಲಿಂಗಕಾಮದ ಬಗ್ಗೆ ನಡೆಯುತ್ತಿದೆ. ಜುಲೈ ೨, ೨೦೦೯ ರ ದೆಹಲಿ ಹೈಕೋರ್ಟು ತೀರ್ಪಿನ ಅನ್ವಯ ಪರಸ್ಪರ ಸಮ್ಮತಿಸಿದ ವಯಸ್ಕರಲ್ಲಿ ಸಲಿಂಗೀಯ ಸಂಬಂಧವು ಭಾರತದ್ಯಂತ ಅಪರಾಧವಲ್ಲ ಎಂದು ಹೇಳಿದೆ. ಎಲ್ಲಿ ನಮ್ಮ ಭಾರತೀಯ ಪೀನಲ್ ಕೋಡ್ ಸೆಕ್ಷನ್ ೩೭೭ವು ಭಾರತೀಯ ಸಂವಿಧಾನವು ಭರವಸೆ ನೀಡಿದ, ಮೂಲಭೂತ ಹಕ್ಕುಗಳಾದ ಜೀವಿಸುವ ಮತ್ತು ಸ್ವಾತಂತ್ರ್ಯ ಹಾಗೂ ಸಮಾನತೆಯ ಹಕ್ಕಿನ ಉಲ್ಲಂಘನೆ ಮಾಡಿದೆ ಎಂದು ದೆಹಲಿ ಉಚ್ಚನ್ಯಾಯಾಲಯ ಹೇಳಿದೆ.

ಕೆಲವಾರು ಸಂಸ್ಥೆಗಳಾದ ನಾಜ್ ಪೌಂಡೇಶನ್ (ಇಂಡಿಯಾ) ಟ್ರಸ್ಟ್, ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆ, ಭಾರತೀಯ ಕಾನೂನು ಆಯೋಗ, ಕೇಂದ್ರೀಯ ಆರೋಗ್ಯ ಸಚಿವಾಲಯ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಹಾಗೂ ಭಾರತೀಯ ಯೋಜನಾ ಆಯೋಗವು ಸಲಿಂಗಕಾಮವನ್ನು ನಿರಪರಾದಿಗೊಳಿಸುವ ಬಗ್ಗೆ ಸೂಚಿತ ತಿಳಿಯಪಡಿಸಿದ ಬೆಂಬಲವನ್ನು ಭಾರತದಲ್ಲಿ ನೀಡಿದೆ ಮತ್ತು ಲೆಸ್ಬಿಬಿಯನ್ಸ್, ಗೇ, ದ್ವಿಲಿಂಗಕಾಮಿ ಹಾಗೂ ಲಿಂಗಪರಿವರ್ತಿತ ಜನರ ತಾಳ್ಮೆ ಹಾಗೂ ಸಾಮಾಜಿಕ ಸಮಾನತೆಗಾಗಿ, ಮೂರನೇ ಲಿಂಗದವರ ಸಾಮಾಜಿಕ ಮೂಲ ಬಗ್ಗೆ ಭಾರತ ಹಾಗೂ ಮಧ್ಯ ದೇಶಗಳೊಂದಿಗೆ ಧರ್ಮವು ಭಾರತೀಯ ರೂಡಿ ಸಂಪ್ರದಾಯಗಳಲ್ಲಿ ಪಾತ್ರವಹಿಸಿದೆ ಎಲ್ಲಾ ಕಾಲದಲ್ಲೂ ಸಲಿಂಗ ಲೈಂಗಿಕತೆಯು ಹಿಂದೂ ಧರ್ಮದ ಪ್ರಮುಖ ಗ್ರಂಥಗಳಲ್ಲಿ ಸ್ಪಷ್ಟವಾಗಿ ಕಾಣಸಿಗುವುದಿಲ್ಲ. ಭಾರತದ ಹಿರಿಯ ಧರ್ಮವಾದ ಹಿಂದೂ ಧರ್ಮವು ವಿವಿಧ ಸ್ಥಾನಮಾನ, ಹಂತಗಳಲ್ಲಿ ಸಲಿಂಗಕಾಮದ ಬಗ್ಗೆ ಧನಾತ್ಮಕತೆಯಿಂದ ತಟಸ್ಥ ಅಥವಾ ಪ್ರತಿರೋಧಿಸಿದೆ ಎನ್ನಬಹುದು.

"ನಾವೂ ಮನುಷ್ಯರೇಎಲ್ಲರಂತೆ ನಾವೂ ಸಹ ಓದು ಬರಹ, ಹೆಂಡತಿ, ಮಕ್ಕಳು, ಸಂಪಾದನೆ, ಸಂಸಾರದ ಜವಾಬ್ದಾರಿ... ಇವ್ಯಾವುರಲ್ಲಿಯೂ ನಾವು ಬೇಜವಾಬ್ದಾರಿತನದಿಂದಿಲ್ಲ. ತಕ್ಕ ವಯಸ್ಸಿಗೆ ಬಂದ ಪ್ರತಿಯೊಬ್ಬ ಯುವಕನಿಗೂ ಅದೇ ವಯಸ್ಸಿನ ಯುವತಿಯನ್ನು ನೋಡಿದರೆ ಆಕರ್ಷಣೆ ಉಂಟಾಗುವುದು ಸಹಜ. ಆದರೆ ನಮ್ಮ ವಿಷಯದಲ್ಲಿ ಹಾಗಲ್ಲ. ನಮಗೆ ಸ್ತ್ರಿಯರನ್ನು ನೋಡಿದರೆ ಎಂತಹ ಕಾಮೋದ್ರೇಕವೂ ಉಂಟಾಗುವುದಿಲ್ಲ. ಒಬ್ಬ ಪುರುಷನನ್ನು ನೋಡಿದರೆ ಇಷ್ಟವಾಗುತ್ತದೆ. ಆತನೊಂದಿಗಿನ ಜೀವನವೇ ನಮಗೆ ಬೇಕೆನಿಸುತ್ತದೆ. ಆತ ಜೊತೆಯಲ್ಲಿದ್ದರೆ ಏನನ್ನು ಬೇಕಾದರೂ ಸಾಧಿಸಬಹುದು ಎಂಬ ಧೈರ್ಯ ಬರುತ್ತದೆ. ಯಾಕೆ ಹೀಗೆ... ಗೊತ್ತಿಲ್ಲ. ತಿಳಿದುಕೊಳ್ಳಲು ನಡೆಸಿದ ಪರಿಶೋಧನೆಗಳೂ ಏನೂ

ಮಾಡಲಾರದಾಯಿತು. ನಾವು ಅಪರಾಧಿಗಳಲ್ಲದಿದ್ದರೂ, ಇತರರಿಗೆ ಯಾವುದೇ ರೀತಿಯ ಹಾನಿಯುಂಟು ಮಾಡದೇ ಇದ್ದರೂ, ಸಮಾಜದಲ್ಲಿ ನಾವು ಅತ್ಯಂತ ದಾರುಣವಾಗಿ ನಿರ್ಲಕ್ಷ್ಯಕ್ಕೆ ಗುರಿಯಾಗಿದ್ದೇವೆ.

ಭಾರತ ದೇಶದಲ್ಲಿ ಐ.ಪಿ.ಸಿ ೩೭೭ ನೇಸೆಕ್ಷನ್ ಪ್ರಕಾರ ನಾವು ಅಪರಾಧಿಗಳು. ಈ ಸೆಕ್ಷನ್ ಅಡಿ ಅಸಹಜ ಲೈಂಗಿಕ ಕ್ರಿಯೆಗಳಿಗೆ ಜೀವಾವಧಿ ಶಿಕ್ಷೆ ವಿಧಿಸಬಹುದಾಗಿದೆ. ಯಾಕೆ ಇಷ್ಟೊಂದು ವ್ಯತ್ಯಾಸ? ವಾತ್ಸಾಯನನ ಕಾಲದಲ್ಲಿ ನಮ್ಮ ದೇಶದಲ್ಲಿ ಸ್ವಲಿಂಗ ಸಂಪರ್ಕವಿತ್ತು ಎಂದು ಕೆಲವು ದೇವಾಲಯಗಳ ಗೋಡೆಗಳ ಮೇಲೆ ಕಾಣಿಸುವ ಪುರುಷ ಸಂಭೋಗ ಶಿಲ್ಪಗಳು ತಿಳಿಸುತ್ತಿವೆ. ಆ ನಂತರ ಅದನ್ನು ಯಾಕೆ ಅಪರಾಧವನ್ನಾಗಿ ಪರಿಗಣಿಸಲಾಯಿತು? ಯಾಕಿದನ್ನು ಕತ್ತಲ ವ್ಯವಹಾರವಾಗಿ ಭಾವಿಸುತ್ತಾರೆ?

ಈಗಲಾದರು ಹೀಗೆ ಹೊರಬಂದು ಮಾತನಾಡಲು ಕಾರಣ ಎಚ್.ಐ.ವಿ. /ಏಡ್ಸ್. ಇದು ಇಲ್ಲದಿದ್ದಲ್ಲಿ ಬಹುಶಃ ಈ ದಿನ ಸಹ ಇಂತಹ ಸಂದರ್ಭ ಸಿಗುತಿರಲಿಲ್ಲ. ಇದು ಒಳ್ಳೆಯದಕ್ಕೊ, ಕೆಟ್ಟದಕ್ಕೋ? ಕಾಲವೇ ನಿರ್ಣಯಿಸಬೇಕು. ಒಂದು ವಿಷಯದಲ್ಲಿ ಮಾತ್ರ ನಾವು ಸ್ಪಷ್ಟವಾಗಿದ್ದೇವೆ. ನಮ್ಮ ಜೀವನಕ್ಕಾಗಿ ಇತರರಿಗೆ ಯಾವುದೇ ರೀತಿಯ ನಷ್ಟ ಉಂಟಾಗದಿರಲು ನಾವು ಈಗ ಈ ರೀತಿ ಹೊರ ಬಂದಿದ್ದೇವೆ. ಅರ್ಥಮಾಡಿಕೊಳ್ಳುತ್ತಾರೆಂಬಾಸೆ... ನಾವು ನಿಮ್ಮ ಜೊತೆ ಸಾಧಾರಣ ಪೌರರಾಗಿ ಬೆರೆತು ಬದುಕಬೇಕೆಂಬ ನಮ್ಮ ಆಸೆ, ಆಕಾಂಕ್ಷೆ ನಮ್ಮನ್ನು ಇವತ್ತು ಹೀಗೆ ಮಾತನಾಡಲು ಪ್ರೇರೇಪಿಸಿದೆ". ಹೈದರಾಬಾದ್ ನಲ್ಲಿ ಪುರುಷ ಸ್ವಲಿಂಗ ಸಂಪರ್ಕವಿರುವವರು ತಮ್ಮ ನೋವನ್ನು ಹೇಳಿಕೊಳ್ಳಲು ಏರ್ಪಾಡುಮಾಡಿದ ಸಮಾವೇಷದ ಮಾತುಗಳು (ಕ್ರೈಂನ್ಯೂಸ್ ಸೆಪ್ಟಂಬರ್: ೨೦೦೯).

'ಮದುವೆ'ಯು ಯಾವುದೇ ಸಮಾಜದಲ್ಲಿ ಪ್ರಾಮುಖ್ಯವಾದ ಸಂಸ್ಥೆಯಾಗಿದ್ದು, ಕಾಮವು ಇದರ ಪ್ರಮುಖವಾದ ಭಾಗವಾಗಿದೆ. ಕಾಮದ ಮೂಲ ಉದ್ದೇಶ ಸಂತಾನವರ್ಧನೆ. ಆದರೆ ಮನುಷ್ಯರಲ್ಲಿ ಕಾಮವು ಸುಖಿಸುವ ಒಂದು ಮಾಧ್ಯಮವಾಗಿದೆ. ಸಲಿಂಗಕಾಮವು ಗಂಡು ಗಂಡನ್ನು ಪ್ರೀತಿಸುವ ಹಾಗೂ ಕಾಮಕ್ರೀಡೆಯಲ್ಲಿ ತೊಡಗುವ, ಮತ್ತು ಹೆಣ್ಣು ಹೆಣ್ಣನ್ನು ಪ್ರೀತಿಸುವ ಹಾಗೂ ಕಾಮಕ್ರೀಡೆಯಲ್ಲಿ ತೊಡಗುವ ಒಂದು ವಿಚಿತ್ರ ವರ್ತನೆ. ಸಲಿಂಗಕಾಮದಲ್ಲಿ ಸಂತಾನವರ್ಧನೆಯ ಪ್ರಶ್ನೆಯೇ ಬರುವುದಿಲ್ಲ. ಹಾಗಾಗಿ ಇದು ಸುಖಿಸುವ ಕೇವಲ ಮಾಧ್ಯಮ. ಗಂಡು – ಹೆಣ್ಣಿನ ನಡುವೆ ದೊರೆಯದಂತಹ ಯಾವ ಸುಖವು ಸಲಿಂಗಕಾಮದಲ್ಲಿ ದೊರೆಯುತ್ತದೆ ಎನ್ನುವುದನ್ನು ವಿವರಿಸುವುದು ಕಷ್ಟ. ಆದರೆ ಸಲಿಂಗಕಾಮವೆನ್ನುವುದು ನಮ್ಮ ಸಮಾಜದಲ್ಲಿ ಇದೆ ಎಂಬ ಸತ್ಯವನ್ನು ಮನಗಾಣಬೇಕು. ಜಗತ್ತಿನ ಎಲ್ಲ

ದೇಶಗಳಲ್ಲಿಯೂ ಸಲಿಂಗಕಾಮವಿದೆ. ಸಲಿಂಗಕಾಮಿಗಳ ಪ್ರಮಾಣ ೨%-೨೦% ರಷ್ಟು ಇದೆ ಎಂದು ತಿಳಿಸುತ್ತದೆ (ಸೋಮೇಶ್ವರ ೨೦೧೦: ೭೨). ಆದರೆ ಸಲಿಂಗಕಾಮಿಗಳ ನಿಜಪ್ರಮಾಣ ತಿಳಿಯುವುದು ಕಷ್ಟ. ಏಕೆಂದರೆ ತಾವು ಸಲಿಂಗಕಾಮಿಗಳು ಎಂದು ಬಹಿರಂಗವಾಗಿ ಘೋಷಿಸಿಕೊಳ್ಳಿ ಜನ ತೀರಾ ಕಡಿಮೆ. ಏಕೆಂದರೆ ಭಾರತವನ್ನೂ ಒಳಗೊಂಡಂತೆ ಜಗತ್ತಿನ ಹಲವು ದೇಶಗಳು ಸಲಿಂಗಕಾಮವನ್ನು ಅಪರಾಧ ಎಂದು ಪರಿಗಣಿಸುತ್ತದೆ. ಕೆಲವು ದೇಶಗಳು ಮರಣದಂಡನೆಯನ್ನೂ ವಿಧಿಸುತ್ತವೆ. ಹಾಗಾಗಿ ಸಲಿಂಗಕಾಮದ ನಿಖರ ಸಂಖ್ಯೆಯನ್ನು ತಿಳಿಯುವುದು ಅಸಾಧ್ಯ.

ಬಹಳ ಕಾಲದವರೆಗೆ, ಮನಃಶಾಸ್ತ್ರಜ್ಞರು ಸಲಿಂಗಕಾಮವನ್ನು ಒಂದು ಮನೋವ್ಯಾಧಿಯನ್ನಾಗಿ ಪರಿಗಣಿಸಿದ್ದರು. ಆದರೆ ಹರ್ಶ್ ಫೀಲ್ಡ್ (ಜರ್ಮನಿ) ಮತ್ತು ಸಲಿಂಗಕಾಮವನ್ನು ಅಪರಾಧಿಕಗೊಳಿಸುವುದರ ವಿರುದ್ಧ ಮಾತನಾಡಿದರು. ಅವರ ಸೆಕ್ಸುವಲ್ ಇನ್ವರ್ಶನ್ ಎಂಬ ಪುಸ್ತಕವು, ಸಲಿಂಗಕಾಮದ ಬಗೆಗಿನ ಮೊಟ್ಟಮೊದಲ ಪುಸ್ತಕವಾಗಿದ್ದು, ಅದರಲ್ಲಿ ಅವರು ಸಲಿಂಗಕಾಮವನ್ನು ಒಂದು ರೋಗವನ್ನಾಗಿಯಾಗಲೀ ಅಥವಾ ಅಪರಾಧವಾಗಿಯಾಗಲೀ ಪರಗಣಿಸಿಲ್ಲ ಅಮೇರಿಕದ ಮನೋರೋಗ ತಜ್ಞರ ಸಂಘವು, ಅದನ್ನು ಗುಣಪಡಿಸಬಲ್ಲ ಸ್ಥಿತಿಯಿಂದಾಚೆಗಿಟ್ಟು, ಅದನ್ನು, ಲೈಂಗಿಕ ಆಸಕ್ತಿಯ ಮತ್ತೊಂದು ರೂಪದಲ್ಲಿ ಪ್ರಕಟಿಸಲ್ಪಟ್ಟ ಸ್ವಾಭಾವಿಕ ಪ್ರಕಟಣೆ ಎಂದು ಒಪ್ಪಿಕೊಂಡರು. ಭಾರತೀಯ ವೈದ್ಯಕೀಯ ಸಂಘವೂ ಇದನ್ನು ಒಪ್ಪಿಕೊಳ್ಳುತ್ತದೆ. ವೈಜ್ಞಾನಿಕ ಪರಿಶೋಧನೆಗಳು, ಸಲಿಂಗಕಾಮದ ನಡತೆ ಕೇವಲ ಮನುಷ್ಯರಿಗೆ ಮಾತ್ರ ಸೀಮಿತವಾಗಿಲ್ಲ, ಇದು ಪ್ರಾಣಿಗಳಲ್ಲೂ ಕಂಡು ಬರುತ್ತದೆ ಎಂದು ತಿಳಿಸುತ್ತವೆ. ಲೈಂಗಿಕ ನಡವಳಿಕೆಯ ಬಗೆಗಿನ ಮೊಟ್ಟಮೊದಲ ವ್ಯವಸ್ಥಿತ ಅದ್ಯಯನವಾದ ಕಿನ್ಸಿ ರಿಪೋರ್ಟ್, ಪುರುಷ ಜನಸಂಖ್ಯೆಯಲ್ಲಿನ ಸರಾಸರಿ ೪% ರಷ್ಟು ಜನರು ಸಲಿಂಗಕಾಮಿಗಳಾಗಿರುತ್ತಾರೆ ಎಂಬುದನ್ನು ಕಂಡುಕೊಂಡಿತು.

ಯೂನಿವರ್ಸಿಟಿ ಆಫ್ ಕೊಲಂಬಿಯಾದಲ್ಲಿಅಧ್ಯಾಪಕನಾಗಿ ಕೆಲಸ ಮಾಡಿದ ಬ್ರೂಸ್ ಬಾಗ್‌ಮಿಲ್ ಬಯಾಲಾಜಿಕಲ್ ಎಕ್ಸೂಬರೆನ್ಸ್ ಅನಿಮಲ್ ಹೋಮೋ ಸೆಕ್ಸುವಾಲಿಟಿ ಅಂಡ್ ನ್ಯಾಚುರಲ್ ಡೈವರ್ಸಿಟಿ ಎಂಬ ಪುಸ್ತಕದಲ್ಲಿ ೪೫೦ ವಿವಿಧ ಹಾಲು ನೀಡುವ ಪ್ರಾಣಿಗಳ, ಪಕ್ಷಿಗಳ, ಕೀಟಗಳ ಬಗ್ಗೆ ವೈಜ್ಞಾನಿಕವಾಗಿ ಪರಿಶೋಧನೆ ನಡೆಸಿ ಅವುಗಳಲ್ಲಿನ ಸ್ವಲಿಂಗ ಸಂಪರ್ಕ ಧೋರಣೆಯನ್ನು ಸವಿವರವಾಗಿ ಚರ್ಚಿಸಿದ್ದಾರೆ. ಈ ಧೋರಣೆ ಕೇವಲ ಮಾನವರಿಗೇ ಪರಿಮಿತಗೊಂಡಿಲ್ಲ ಎಂದು ವೈಜ್ಞಾನಿಕವಾಗಿ ಹೇಳಿರುವ ಪುಸ್ತಕವಿದು.

ವಿಶ್ವ ಆರೋಗ್ಯ ಸಂಸ್ಥೆ ೧೯೭೭ರಲ್ಲಿ ಪ್ರಕಟಿಸಿದ ತನ್ನ ೯ನೇಯ ಅಂತಾರಾಷ್ಟ್ರೀಯ ವ್ಯಾಧಿಗಳ ವರ್ಗೀಕರಣಪಟ್ಟಿಯಲ್ಲಿ ಸ್ವಲಿಂಗಸಂಪರ್ಕವನ್ನು 'ಈಗೋ ಡಿಸ್‌ಟಾನಿಕ್' ವಿಭಾಗದಲ್ಲಿರಿಸಿತು.ಈ ವಿಭಾಗ ನ್ಯೂರೋಟಿಕ್ ಮೆಂಟಲ್ ಡಿಸ್ ಆರ್ಡರ್ ರೋಗಗಳಿಗೆ ಸೇರಿದ್ದಾಗಿದೆ. ಆ ನಂತರ ೧೯೮೭ರಲ್ಲಿ ಅಮೇರಿಕನ್ ಸೈಕಾಲಜಿಕಲ್ ಅಸೋಸಿಯೇಷನ್ ಇಂತಹ ವ್ಯಕ್ತಿಗಳನ್ನು ಕರೆಯುವ ಪದಗಳನ್ನು ಗೌರವಾರ್ಥಕವಾಗಿ ಬದಲಿಸಿತು. ೧೯೯೦ ರ ಮೇನಲ್ಲಿ ನಡೆದ ೪೩ನೇ ವಿಶ್ವ ಆರೋಗ್ಯ ಸಮಾರಂಭದಲ್ಲಿ ಸ್ವಲಿಂಗ ಸಂಪರ್ಕವನ್ನು ರೋಗಗಳ ಪಟ್ಟಿಯಿಂದ ತೆಗೆದು ಹಾಕಲಾಯಿತು. ವಿಶ್ವದ ಎಲ್ಲಾ ದೇಶಗಳೂ ಅದನ್ನು ಆಚರಣೆಗೆ ತರುವಂತೆ ಕೋರಲಾಯಿತು.

ಸಲಿಂಗ ಕಾಮವು ಅಸಹಕವಾದದ್ದು, ಹಾಗಾಗಿ ಇದು ಶಿಕ್ಷಾರ್ಹ ಎಂದು ಜಗತ್ತಿನ ಬಹಳ ದೇಶಗಳು ಭಾವಿಸಿವೆ. ನಮ್ಮ ದೇಶದಲ್ಲೂ ಇದು ಶಿಕ್ಷಾರ್ಹ, ಆದರೆ ದೆಹಲಿ ಉಚ್ಚನ್ಯಾಯಲವು ಜುಲೈ ೨೦೦೯ ರಲ್ಲಿ ಸಲಿಂಗಕಾಮವು ಅಪರಾಧವಲ್ಲ ಎಂದು ತೀರ್ಮಾನಿಸಿದೆ. ಇದಕ್ಕೆ ಸಂಬಂಧಿಸಿದ ಆರ್ಟಿಕಲ್-೩೭೭ ನ್ನು ಅನೂರ್ಜಿತಗೊಳಿಸಿದೆ. ಇದರಿಂದ ೧೮೬೦ರಲ್ಲಿ ರೂಪಗೊಂಡ ಕಾನೂನು ಈಗ ವಿಸ್ತೃತವಾದ ಚರ್ಚೆಗೆ ಒಳಗಾಗಿದೆ. ಆದರೆ ಕೆಲವು ವಿದೇಶಗಳಲ್ಲಿ ಸಲಿಂಗ ಕಾಮವನ್ನು ಮಾನ್ಯ ಮಾಡಲಾಗಿದೆ. ಸಲಿಂಗಕಾಮಿಗಳ ವಿವಾಹವನ್ನು ಕಾನೂನು ಬದ್ದಗೊಳಿಸಲಾಗಿದೆ.

ಪುರುಷ ಸಲಿಂಗಕಾಮಿಗಳು ಎಂಬ ಪದ ಕಿವಿಗೆ ಬಿದ್ದ ಕ್ಷಣ ಇಂತಹ ಒಂದು ಸಮುದಾಯ ಇರಬಹುದೇ ಎಂಬ ಸಂಶಯ ಮಾಡುವುದು ಸಹಜ. ಪಾಶ್ಚಿಮಾತ್ಯ ದೇಶಗಳಲ್ಲಿ ಈ ಸಮುದಾಯ ಇರುವಿಕೆಯನ್ನು ತಿಳಿದುಕೊಂಡಿದ್ದೇವೆ. ಆದರೆ ಮಂಗಳೂರು ನಗರ ಪ್ರದೇಶದಲ್ಲಿ ಈ ಸಮುದಾಯದ ಇರುವಿಕೆಯನ್ನು ಪತ್ತೆ ಹಚ್ಚುವ ಕಾರ್ಯ ೨೦೦೪ ರಿಂದ ಪ್ರಾರಂಭವಾಯಿತು.

ಎಚ್. ಐ.ವಿ. ಹರಡುವಿಕೆ ಅಪಾಯ ಸಲಿಂಗಕಾಮಿಗಳಲ್ಲಿ ಹೆಚ್ಚಾಗಿರುವುದರಿಂದ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೇನ್‌ಶನ್ ಸೊಸೈಟಿಯಾ ಹೆಚ್.ಐ. ವಿ. / ಎಸ್. ಟಿ. ಐ. ತಡೆಗಟ್ಟುವಿಕೆ ಯೋಜನೆಯ ಮೂಲಕ ಪ್ರಥಮವಾಗಿ ಈ ಸಮುದಾಯ ಮಂಗಳೂರು ನಗರದಲ್ಲಿ ಇರುವಿಕೆಯನ್ನು ಪತ್ತೆಮಾಡಲಾಯಿತು. ಹಿಂದ್ ಕುಷ್ಠ ನಿವಾರಣಾ ಸಂಘ ಸಂಸ್ಥೆಯ ಮೂಲಕ ಯೋಜನೆ ಅನುಷ್ಠಾನಕ್ಕಾಗಿ ಕಾರ್ಯಾರಂಭಗೊಂಡಂದಿನಿಂದ ಇಂದಿನವರೆಗೆ ಸುಮಾರು '೬೦೦' ಪುರುಷ ಸಲಿಂಗ ಕಾಮಿಗಳು ಮಂಗಳೂರು ನಗರದಲ್ಲಿ ಇರುವುದನ್ನು ಪತ್ತೆಮಾಡಲಾಯಿತು. ಪ್ರಸ್ತುತ ಈ ಯೋಜನೆಯ ಅಡಿಯಲ್ಲಿ,

ಈ ಸಮುದಾಯವು ಸಘಟಿತರಾಗಿ 'ಸಹಜ ಸಮುದಾಯ ಸಂಘ' ವನ್ನು ರಚಿಸಿ ನೋಂದಾಯಿಸಿರುತ್ತಾರೆ. ಜೊತೆಗೆ 'ಸಹಜ ನವೋದಯ ಸ್ವಸಹಾಯ ಗುಂಪನ್ನು ಕಟ್ಟಿಕೊಂಡು ಉಳಿತಾಯವನ್ನು ಮಾಡುತ್ತಿದ್ದಾರೆ. ಅಲ್ಲದೆ ಸಹಜ ಸಹಾಯವಾಣಿಯನ್ನು ಆರಂಬಿಸಿ ಸಮುದಾಯಕ್ಕೆ ಆಗುವ ವಿಪತ್ತುಗಳನ್ನು ನಿವಾರಿಸುತ್ತಿದ್ದಾರೆ.

೧.೧೨ ಪುರುಷ ಸಲಿಂಗ ಕಾಮ ವಿಧಗಳು

ಪುರುಷ ಸ್ವಲಿಂಗ ಸಂಪರ್ಕವಿರುವ ಎಲ್ಲರನ್ನೂ ಸೇರಿಸಿ ಹಿಂದೆ ಗೇಸ್ ಎಂಬ ಪದ ಬಳಸುತ್ತಿದ್ದರು. ಆದರೀಗ ಮಾತ್ರ ಅವರನ್ನು ಎಮ್.ಎಸ್.ಎಮ್. ಎನ್ನುತ್ತಿದ್ದಾರೆ. ಅಂದರೆ ಮೆನ್ ಹೂ ಹ್ಯಾವ್ ಸೆಕ್ಸ್ ವಿತ್ ಮೆನ್ ಎಂದು ಅರ್ಥ. ಇದರಲ್ಲಿ ೮ ವಿಧಗಳಿವೆ.

ಕೋಥಿ: – ಸ್ತ್ರೀತ್ವವನ್ನು ಹೊಂದಿರುವ ಪುರುಷರಿಗೆ ಸ್ವಲಿಂಗ ಸಂಪರ್ಕದ ಸಮಯದಲ್ಲಿ ಹೆಚ್ಚು ಕಡಿಮೆ ಸ್ತ್ರೀ ಪಾತ್ರವನ್ನೇ ವಹಿಸುತ್ತಾರೆ. ಹೊರಗೆ ಬಂದಾಗ ಪುರುಷ ವೇಷಧಾರಣೆಯನ್ನು ಮಾಡಿದ್ದರೂ, ಅಂತರಂಗದಲ್ಲಿ ಮಾತ್ರ ಸ್ತ್ರೀವೇಷಧಾರಣೆ ಮಾಡಬೇಕೆಂಬ ತೀವ್ರ ಆಕಾಂಕ್ಷೆ ಹೊಂದಿರುತ್ತಾರೆ.ಇದರಿಂದ ಆ ವೇಷಧಾರಣೆಯಲ್ಲಿ ಮಾತ್ರ ಮಾನಸಿಕವಾಗಿ ಎಂತಹ ಘರ್ಷಣೆಯೂ ಇಲ್ಲದೆ ಹಾಯಾಗಿರುತ್ತಾರೆ. ಇವರನ್ನು ಮಂಗಳೂರಿನಲ್ಲಿ 'ಸೂಂಬು' ಎಂದು ಕರೆಯಲಾಗುತ್ತದೆ.

ಸಾಟ್ಲಾಕೋಥಿ:– ಸ್ತ್ರೀತ್ವವನ್ನು ಹೊಂದಿರುವ ಪುರುಷರು ತಾವು ಬಹಿರಂಗವಾಗಿ ಸ್ತ್ರೀವೇಷಧಾರಿಗಳಾಗಿರುತ್ತಾರೆ.

ನಿರ್ವಾಣ್ ಕೋಥಿ: – ಪೂರ್ತಿಯಾಗಿ. ಸ್ತ್ರೀವೇಷಧಾರಣೆಯಲ್ಲಿ ಇರುತ್ತಾ, ಅಸ್ವಭಾವವನ್ನು ಹೊಂದಿದ್ದು, ಇಚ್ಛಾಪೂರ್ವಕವಾಗಿ ತಮ್ಮ ಜನನಾಂಗವನ್ನು ತೆಗೆಸಿಕೊಂಡಿರುತ್ತಾರೆ.

ಡಿ.ಡಿ (ಡಬಲ್ ಡೆಕ್ಕರ್):– ಸಮಯಕ್ಕೆ ತಕ್ಕಹಾಗೆ ಅವಶ್ಯಕತೆಗನುಗುಣವಾಗಿ ಸಂಪರ್ಕದ ಸಮಯದಲ್ಲಿ ಸ್ತ್ರೀಯಂತೆ, ಪುರುಷರಂತೆ ವ್ಯವಹರಿಸುವ ಸ್ವಭಾವ ಹೊಂದಿರುವ ವ್ಯಕ್ತಿಗಳು.

ಪಂಥಿ: – ಪುರುಷ ಸ್ವಭಾವವನ್ನು ಹೊಂದಿದ್ದು ಪುರುಷರಂತೆಯೆ ಇರುತ್ತಾ ಮತ್ತೊಬ್ಬ ಕೋತಿಯೊಂದಿಗೆ ಲೈಂಗಿಕ ಸಂಪರ್ಕ ಕೊರುವ ಸ್ವಭಾವವನ್ನು ಹೊಂದಿರುವ ವ್ಯಕ್ತಿ. ಇವರನ್ನು ಮಂಗಳೂರಿನಲ್ಲಿ 'ಬೇರೊ' ಎಂದು ಕರೆಯಲಾಗುತ್ತದೆ.


ಹಿಜ್ರಾ (ಅಕ್ವಾ):– ಹಿಜ್ರಾ ಸಂಸ್ಕೃತಿ ಸೇರಲು ಬಯಸಿದ ವ್ಯಕ್ತಿ ಒಂದು ವರ್ಷ 'ಸಾಟಾ'ದಲ್ಲಿ ಬದುಕಿ (ಅಂದರೆ ಸೀರೆ ಉಟ್ಟು), ಸಮುದಾಯದ ಆಚರಣೆಯನ್ನು ಪಾಲಿಸಬೇಕು.ಆದರೆ ಸಾಮುದಾಯಿಕ ಬದುಕಿಗೆ ಅಳವಡಿಸಿಕೊಳ್ಳಲು ಅಸಾಧ್ಯವಾದರೆ ಅವರಿಗೆ ನಿರ್ವಾಣ ನೀಡಲಾಗುವುದಿಲ್ಲ. ಹೀಗೆ ನಿರ್ವಾಣಗೊಳಿಸದ ಕೋಥಿಗಳನ್ನು ಅಕ್ವಾ ಹಿಜ್ರಾ ಎಂದು ಕರೆಯುತ್ತಾರೆ. ಈ ವ್ಯಕ್ತಿಗಳು ವೇಷಧಾರಣೆಯಲ್ಲಿ, ಸಂಯೋಗ ಸಮಯದಲ್ಲಿಯೂ ಸ್ತ್ರೀಯರನ್ನು ಹೋಲುತ್ತಾರೆ. ಆದರೆ ಇವರು ತಮ್ಮ ಜನನಾಂಗಗಳನ್ನು ತೆಗೆಸಿರುವುದಿಲ್ಲ.

ನಿರ್ವಾಣ (ಜನನಾಂಗವನ್ನು ತೆಗೆದು ಹಾಕುವುದು) ಹಿಜ್ರಾ:– ಹಿಜ್ರಾ ಸಂಸ್ಕೃತಿಯ, ಸಮುದಾಯದ ಆಚರಣೆಗಳನ್ನು ಪಾಲಿಸಿದ ವ್ಯಕ್ತಿಯ ಶಿಶ್ನವನ್ನು ಹಾಗು ಬೀಜ ಗಳನ್ನು ತೆಗೆದು ಹಾಕಲಾಗುತ್ತದೆ.ಹೀಗೆ ನಿರ್ವಾಣಗಳಿಸಿದ ಕೋಥಿಗಳನ್ನು ನಿರ್ವಾಣ ಹಿಜ್ರಾ ಎಂದು ಕರೆಯುತ್ತಾರೆ. ಸಂಯೋಗ ಸಮಯದಲ್ಲಿಯೂ ಸ್ತ್ರೀಯರನ್ನು ಹೋಲುತ್ತಾರೆ. ಆದರೆ ಇವರು ತಮ್ಮ ಜನನಾಂಗಗಳನ್ನು ತೆಗೆಸಿರುತ್ತಾರೆ.

ದ್ವಿಲಿಂಗ ಕಾಮಿ:–ಪುರುಷ ಹಾಗೂ ಮಹಿಳೆಯರೊಂದಿಗೆ ಲೈಂಗಿಕ ಸಂಪರ್ಕ ಇಟ್ಟುಕೊಂಡಿರುವ ಪುರುಷರು.

ಜೋಗಪ್ಪ:– ಇವರು ತಮ್ಮನ್ನು ತಾವು ದೇವರೆಂದು ಭಾವಿಸುತ್ತಾರೆ.ಶಿವಪಾರ್ವತಿ ಸ್ವಭಾವಗಳನ್ನು ಹೊಂದಿರುತ್ತಾರೆ. ಆದೇ ಸ್ವಭಾವ ಹೊಂದಿರುವವರ ಜೊತೆ ಸಂಪರ್ಕ ಇಟ್ಟು ಕೊಳ್ಳುತ್ತಾರೆ

೧.೧೩ ಪುರುಷ ಸಲಿಂಗಕಾಮಿಗಳ ವೃತ್ತ



ಕೃಪೆ: ಹಮ್‌ಸಫರ್ ಟ್ರಸ್ಟ್ ಮುಂಬಯಿ.

ನಮ್ಮ ಸಮಾಜದಲ್ಲಿ ಗಂಡು-ಹೆಣ್ಣಿನ ನಡುವಿರುವ ಲೆಂಗಿಕ ಸಂಬಂದವೇ ಸಹಜವಾದ ಹಾಗೂ ನೈಸರ್ಗಿಕವಾದ ಸಂಬಂದ, ವಿವಾಹ, ಕುಟುಂಬದ ಸುತ್ತ ಹಲವಾರು ಸಾಂಸ್ಕೃತಿಕ, ಸಾಮಾಜಿಕ ಹಾಗೂ ಧಾರ್ಮಿಕ ಮೌಲ್ಯಗಳು, ಪರಿಕಲ್ಪನೆಗಳು ಸನಾತನ ಕಾಲದಿಂದಲೂ ಪ್ರಚಲಿತದಲ್ಲಿವೆ. ಈ ನಂಬಿಕೆಯನ್ನು ಪುನರ್ ವ್ಯಾಖ್ಯಾನಿಸುವ ಜರೂರನ್ನು ಲೆಂಗಿಕತೆ ಅಲ್ಪಸಂಖ್ಯಾತರ ಸಂಘಟಿತ ಹೋರಾಟ ಇಂದು ನಮ್ಮ ಮುಂದಿಟ್ಟಿದೆ.

ಲೈಂಗಿಕತೆಗೆ ಸಂಬದಪಟ್ಟಂತೆ ಲೈಂಗಿಕತೆ ಲೈಂಗಿಕ ಅಲ್ಪಸಂಖ್ಯಾತರು ಎತ್ತುತ್ತಿರುವ ಪ್ರಶ್ನೆಗಳು ಸಾಂಪ್ರದಾಯಿಕ ಲೈಂಗಿಕ ಅಭಿವ್ಯಕ್ತಿಯ ಹಿಂದಿರುವ ಸನಾತನ ಧೋರಣೆಗಳನ್ನು, ಮೌಲ್ಯಗಳನ್ನು ಪ್ರಶ್ನಿಸುತ್ತವೆ. ಸಹಜವಾದ ನೈಸರ್ಗಿಕ ಸಂಬಂಧವೆಂದರೇನು? ಹಿಜಡಾಗಳು, ದ್ವಿಲಿಂಗಿಗಳು, ಪುರುಷ-ಪುರುಷರ ನಡುವಿನ, ಮಹಿಳೆ –ಮಹಿಳೆಯರ ನಡುವಿನ ಲೈಂಗಿಕ ಸಂಬಂಧಗಳು ನಮ್ಮ ಸಂಸ್ಕೃತಿಯ ಇತಿಹಾಸದಲ್ಲಿ ಇಲ್ಲವೆ? ಇದು ಸಹಜ ಹಾಗು ನೈಸರ್ಗಿಕವಾದುದಲ್ಲವೆ? ಇಂತಹ ಲೈಂಗಿಕ

ಅಭಿವ್ಯಕ್ತಿಯನ್ನು ಬಹುಸಂಖ್ಯಾತರ ಸಾಂಸ್ಕೃತಿಕ ಮೌಲ್ಯಗಳ ನೈತಿಕತೆಯ ಓನ್ನೆಲೆಯಲ್ಲಿ ಮರೆ ಮಾಚುವುದೇಕೆ? ಎಂಬುದು ಲೈಂಗಿಕ ಅಲ್ಪಸಂಖ್ಯಾತರ ಸವಾಲು.

ಲೈಂಗಿಕ ಅಲ್ಪಸಂಖ್ಯಾತರು, ಹೀಯಾಳಿಕೆಗೆ, ಅವಮಾನಕ್ಕೆ, ಅಪಹಾಸ್ಯಕ್ಕೊಳಗಾಗುವ ಗುಂಪುಗಳಾಗಿ ಪರಿಗಣಿಸಲ್ಪಟ್ಟಿದ್ದಾರೆ. ಅವರ ದೈಹಿಕ ವ್ಯತ್ಯಾಸಗಳನ್ನು, ಲೈಂಗಿಕ ಅಭಿವ್ಯಕ್ತಿಯನ್ನು ವಿಕೃತ ನಡವಳಿಕೆಯೆಂದು, ರೋಗಗ್ರಸ್ತವೆಂದು 'ವಿಕಲಾಂಗತೆ' ಎಂದು ಕರೆಯಲಾಗುತ್ತದೆ. ಸಮಾಜದ ಸ್ವಾಸ್ಥ್ಯವನ್ನು ಕಾಪಾಡಬೇಕೆಂದರೆ ಈ ರೋಗಕ್ಕೆ ಚಿಕಿತ್ಸೆ ನೀಡಬೇಕೆಂಬುದು ಸಂಪ್ರದಾಯಸ್ಥ ಬಹುಸಂಖ್ಯಾತರ ನಿಲುವು. ಈ ಪೂರ್ವಾಗ್ರಹ ಪೀಡಿತ ನೋಟದಿಂದಾಗಿ ಲೈಂಗಿಕ ಅಲ್ಪಸಂಖ್ಯಾತರು ಮೂಲಭೂತ ಹಕ್ಕುಗಳು, ಸೌಕರ್ಯಗಳಿಂದ ಸಂಪೂರ್ಣವಾಗಿ ವಂಚಿತರಾಗಿ ಭೀತಿ, ಕಳಂಕದ ಕರಿ ನೆರಳಲ್ಲಿ ಬದುಕುವ ಜೀವಿಗಳಾಗಿದ್ದಾರೆ. ರಕ್ಷಣೆಯಿಲ್ಲದೆ ಅವರ ಬದುಕು ಅತಂತ್ರವಾಗಿದೆ.

ಸಲಿಂಗ ಕಾಮಿಗಳ ಬಗ್ಗೆ ಇರುವ ಕೆಲವು ತಪ್ಪುಕಲ್ಪನೆಗಳು:

- ಇದು ಅನೈಸರ್ಗಿಕ.
- ಇದು ಪಶ್ಚಿಮದ ಪ್ರಭಾವ.
- ಇದೊಂದು ಮೇಲ್ವರ್ಗದ, ನಗರಕ್ಕೆ ಸಂಬಂಧಿಸಿದ ವಿಷಯ.
- ಇದೊಂದು ಖಾಯಿಲೆಯಾಗಿದ್ದು ಅದನ್ನು ಸರಿಪಡಿಸುವ ಅಗತ್ಯವಿದೆ;ಇದು ತಪ್ಪು ದಾರಿಯಾಗಿದ್ದು ಅದನ್ನು ಸರಿ ಪಡಿಸುವ ಅಗತ್ಯವಿದೆ.

ಹೆಂಗಸು-ಹೆಂಗಸಿನೊಂದಿಗೆ, ಗಂಡಸು-ಗಂಡಸಿನೊಂದಿಗೆ ಹಾಗೂ ಹೆಂಗಸು-ಗಂಡಸಿನೊಂದಿಗೆ ಲೈಂಗಿಕ ಸಂಬಂಧವಿರುವುದು ನಮ್ಮ ಅನುಭವದಿಂದ ತಿಳಿದಿದೆ.ಎಲ್ಲಾ ಜಾತಿ, ವರ್ಗಗಳಲ್ಲೂ, ಹಳ್ಳಿ ನಗರಗಳಲ್ಲೂಸಲಿಂಗ ಕಾಮದ ಸಂಬಂಧಗಳಿವೆಯೆಂದು ನಮಗೆ ತಿಳಿದಿದೆ. ನಮ್ಮ ಸಾಂಪ್ರದಾಯಕ ದೇವಾಲಯಗಳ ಶಿಲ್ಪಗಳು (ಉದಾ: ಖಜುರಾ ಹೋ) ಸಲಿಂಗ ಕಾಮ ಕುರಿತು ಹೇಳುತ್ತವೆ. ನಮ್ಮ ಪ್ರಾಚೀನ ಗ್ರಂಥವಾದ ಕಾಮಸೂತ್ರವು ಸಲಿಂಗ ಕಾಮಕ್ಕೆ ಧರ್ಮಶಾಸ್ತ್ರಗಳಲ್ಲಿ ಒಪ್ಪಿಗೆ ಪಡೆದಿತ್ತೆಂಬುದನ್ನು ಕುರಿತು ಹೇಳುತ್ತದೆ. ನಮ್ಮಸಾಂಪ್ರದಾಯಿಕ ಆಚರಣೆಗಳಾದ ಜೋಗತಿ, ಜೋಗಪ್ಪ, ಹಿಜಡಾ, ಶಿವಶಕ್ತಿ ಮತ್ತು ತಂತ್ರಗಳು ಸಲಿಂಗಕಾಮವನ್ನು ನೂರಾರು ವರ್ಷಗಳಿಂದ ಆಚರಿಸುತ್ತಾ ಬಂದಿವೆ.

ಸಲಿಂಗ ಕಾಮವು ಪಶ್ಚಿಮದ ಪ್ರಭಾವವಲ್ಲ. ಬ್ರಿಟೀಷ್ ದೊರೆಗಳು ಸಲಿಂಗ ಕಾಮವನ್ನು ಅಪರಾಧಿಕರಣಗೊಳಿಸಿ ೧೮೬೦ ರಲ್ಲಿ ಸೆಕ್ಷನ್ ೩೭೭ರ ಅಡಿಯಲ್ಲಿ ಅರೆಷ್ಟ್ ಆಗಿರುವುದೇ ವಿರಳ.ಈ ಕಾನೂನು ಪೋಲೀಸರಿಗೆ ಅಧಿಕಾರ ನೀಡಿ ಹಕ್ಕನ್ನು ಕಿತ್ತುಕೊಂಡಿತು.

ಹೆಚ್ಚು ಕಡಿಮೆ ನಮ್ಮ ದೇಶದ ವೈದ್ಯಕೀಯ ವ್ಯವಸ್ಥೆಯು ಸಲಿಂಗ ಕಾಮವನ್ನು ಖಾಯಿಲೆ ಎಂದು ಪರಿಗಣಿಸಿ, ಎಲೆಕ್ಟ್ರಿಕ್ ಶಾಕ್ ನೀಡುವುದರ ಮೂಲಕ ಮಾನಸಿಕ ಅಸ್ವಸ್ಥತೆಯ ಔಷಧಿಗಳನ್ನು ನೀಡುವ ಮೂಲಕ, ಆ ಬಗ್ಗೆ ಅಸಹ್ಯ ಥೆರಪಿಗಳ ಮೂಲಕ, ಸರಿಪಡಿಸಬಹುದೆಂದು ಭಾವಿಸುತ್ತದೆ. ಜೈಲು,ಆಸ್ಪತ್ರೆ, ನ್ಯಾಯಾಲಯ ಮತ್ತು ಸಮೂಹ ಒಟ್ಟಾರೆ ಸಂಚು ನಡೆಸಿ ನಮ್ಮ ಮನಸ್ಸಿನಲ್ಲಿ ನಾವು ರೋಗಿಗಳು, ದುರ್ಮಾರ್ಗಿಗಳು, ನೀತಿಗೆಟ್ಟವರು, ಅಸಹಜರು ಎಂಬ ಭಾವನೆಯನ್ನು ಹುಟ್ಟಿಸುತ್ತದೆ. ಸಾಮಾಜಿಕ ನಿಯಮವನ್ನು ಬಿಟ್ಟು ನಮ್ಮದೆ ರೀತಿಯಲ್ಲಿ ಲೈಂಗಿಕತೆಯನ್ನು ಹೊಂದುವುದು ನಮ್ಮಲ್ಲೇ ಅನುಮಾನ, ಪಾಪಪ್ರಜ್ಞೆ, ನಮ್ಮನ್ನೇ ದ್ವೇಷಿಸಿಕೊಳ್ಳುವುದನ್ನು ಹುಟ್ಟು ಹಾಕುತ್ತದೆ.ಅವರಿಗೆ ಅವರೇ ಮೋಸಮಾಡಿಕೊಂಡು ದ್ವಂದ್ವ ಬದುಕನ್ನು ನಡೆಸುವಂತೆ ಮಾಡುತ್ತದೆ. ಅವರ ಬಗ್ಗೆ ಅವರೇ ಅಗೌರವಿಸಿಕೊಳ್ಳುತ್ತಾ, ಮಾನಸಿಕ ಖಿನ್ನತೆ ಬೆಳೆಸಿಕೊಳ್ಳುತ್ತಾರೆ. ಈ ಖಿನ್ನತೆಯಿಂದ ಕೆಲವರು ಆತ್ಮಹತ್ಯೆಯ ದಾರಿ ಹಿಡಿಯುವುದುಂಟು.

ಖಾಯಿಲೆ ಇರುವುದು, ಸಲಿಂಗ ಕಾಮವನ್ನು ಅಪರಾಧೀಕರಣಗೊಳಿಸುವ ಸಮಾಜದಲ್ಲಿದೆ. ಎಷ್ಟೋ ದೇಶಗಳಲ್ಲಿ ಕಾನೂನುಗಳು ಬದಲಾಗಿ ಸಲಿಂಗಕಾಮ ಒಪ್ಪಿತವಾಗಿದೆ. ಅಂತರಾಷ್ಟ್ರೀಯ ಸಂಸ್ಥೆ (W.H.O) ಮತ್ತು ಅಮೇರಿಕಾದಮಾನಸಿಕ ಆರೋಗ್ಯ ಸಂಸ್ಥೆಯು (American Phychiatric Association) ಲಿಂಗ ಕಾಮವನ್ನು ಸಹಜ ಅಭ್ಯಾಸವೆಂದು ಪರಿಗಣಿಸಿದೆ.

೧.೧೪ ಸಲಿಂಗಕಾಮಿಗಳನ್ನು ಹೇಗೆ ಪತ್ತೆಹಚ್ಚಬಹುದು?

ಸಲಿಂಗಕಾಮಿಗಳು ಹೀಗೆಯೇ ಇರುತ್ತಾರೆ, ಇಂಥದ್ದೇ ವಸ್ತ್ರ ಧರಿಸುತ್ತಾರೆ ಮತ್ತು ಹೀಗೆಯೇ ವ್ಯವಹರಿಸುತ್ತಾರೆ ಎಂದು ಸ್ಪಷ್ಟವಾಗಿ ಹೇಳಲು ಬರುವುದಿಲ್ಲ. ಕೆಲವೊಮ್ಮೆ ತುಂಬಾ ಮುಗ್ಧರಂತೆಯೂ, ಸಾತ್ವಿಕರಂತೆಯೂ ಕಂಡುಬರಹುದು. ಆದರೆ, ಇಂತಹ ವ್ಯಕ್ತಿಗಳಲ್ಲಿ ಈ ವಿಕೃತ ಲೈಂಗಿಕತೆಯ ಒಳಗೊಳಗೇ ಒಲವಿರುತ್ತದೆ. ಅದನ್ನವರು ಅವಕಾಶ ಸಿಕ್ಕಾಗ, ಪರಿಸ್ಥಿತಿ ಅನುಕೂಲವಾಗಿದ್ದಾಗ ತೋರಿಸಿಬಿಡುತ್ತಾರೆ.

ಸಾರ್ವಜನಿಕವಾಗಿ ತಾವು ಸಲಿಂಗಕಾಮದತ್ತ ಮೋಹವಿರುವವರೆಂದು ತೋರ್ಪಡಿಸಿ ಕೊಳ್ಳಲು ಹಿಂಜರಿದರೂ ಏಕಾಂತದಲ್ಲಿ ಗಂಡು ಹುಡುಗನೊಬ್ಬ ಸಿಕ್ಕರೆ ತಮ್ಮ ತೆವಲನ್ನು ತೀರಿಸಿಬಿಡುತ್ತಾರೆ. ಬಸ್ಸುಗಳಲ್ಲಿ, ಎಲ್ಲೆಂದರಲ್ಲಿ ನವಿರಾದ ಹುಡುಗರಿದ್ದರೆ ಅವರ ಹತ್ತಿರ ನಿಂತು ಮೈ ಕೈ ಸೋಕಿಸುವ ಕೀಳು ಮನೋಭಾವ ಇವರಲ್ಲಿರುತ್ತದೆ.

ಕೆಲವು ಮಹಾತ್ಮರು ಸಲಿಂಗಕಾಮಿಗಳ ಕೆಲವು ಲಕ್ಷಣಗಳನ್ನು ಹೇಳಿರುವುದನ್ನು ಗ್ರಂಥಗಳಲ್ಲಿ ಕಾಣಬಹುದು. "ಗಂಡು ಹುಡುಗರ ಕಾಲಬೆರಳುಗಳಿಗೆ ತನ್ನ ಕಾಲಬೆರಳುಗಳನ್ನು ತಾಗಿಸಿ, ಆಟವಾಡುತ್ತಾ ಆದರಿಂದ ಮಜಾ ಅನುಭವಸುವವರನ್ನು ಕಂಡರೆ ಅಂತವರು ಸಲಿಂಗಕಾಮಿಗಳೆಂದು ತಿಳಿಯಿರಿ" ಎಂದು ಕೆಲವು ಸಲಫುಸ್ಸ್ವಾಲಿಹೀನ್‌ಗಳು ಹೇಳಿದ್ದಾರೆ. ಅದೇ ರೀತಿ "ಅಮ್ರದ್‌ಗಳನ್ನು ವಿಪರೀತ ನೋಡುವುದು ಕಂಡರೆ ಅವರ ಕುರಿತು ನೀವು ತಪ್ಪು ಭಾವನೆಯನ್ನಿಡಿರಿ" ಎಂದು ಹೇಳಿದವರೂ ಇದ್ದಾರೆ. ಆದ್ದರಿಂದ ಹುಡುಗರನ್ನು ನೋಡುವುದು, ಅವರ ಜೊತೆಗಿರುವುದು ಮತ್ತು ಅವರ ಗೆಳೆತನ ಬೆಳೆಸುವುದು ನಮ್ಮ ಬಗ್ಗೆ ಜನರಲ್ಲಿ ತಪ್ಪುಕಲ್ಪನೆಗೆ ದಾರಿ ಮಾಡಿಕೊಡುವುದಲ್ಲದೆ ಕೆಲವೊಮ್ಮೆ ಅದು ಸಲಿಂಗರತಿಯತ್ತ ಕೊಂಡೊಯ್ಯುವ ಸಾಧ್ಯತೆಯೂ ಇದೆ.

೧.೧೫ ಸಲಿಂಗಕಾಮದ ಕೆಲವು ಸಂಕೇತಗಳು

- ❖ ಅಮೇರಿಕಾದಲ್ಲಿ ಯುವಕರು ಒಂದು ಕಿವಿ ಚುಚ್ಚಿಸಿಕೊಂಡು ರಿಂಗ್ ಹಾಕುವುದು ಇದೀಗ ಜನಪ್ರಿಯವಾಗುತ್ತಿದೆ. ಇದು ಅಮೇರಿಕಾದಲ್ಲಿ ಪುರುಷ ಸಲಿಂಗಕಾಮಿ (ಗೇ) ಗಳ ಸಂಕೇತವಾಗಿದೆ. ಅಲ್ಲಿ ಕಿವಿಗೆ ರಿಂಗ್ ಹಾಕಿದವರನ್ನು ಕಂಡರೆ ಇವರು ಸಲಿಂಗಕಾಮಿಗಳಾಗಿದ್ದಾರೆಂದು ಅಮೇರಿಕನ್ನರಿಗೆ ತಟ್ಟನೆ ಹೊಳೆಯುತ್ತದೆ.
- ❖ ಎರಡನೇ ಜಾಗತಿಕ ಯುದ್ಧದ ಕಾಲದಲ್ಲಿ ಪುರುಷ ಸಲಿಂಗಿಗಳಿದ್ದರೆ ಅವರಿಗೆ ತಿಳಿಗೆಂಪು ತ್ರಿಕೋನವನ್ನು ಬ್ಯಾಡ್ಜ್‌ನಂತೆ ಧರಿಸಲು ಹೇಳಲಾಗುತ್ತಿತ್ತು.
- ❖ ಪಶ್ಚಿಮ ಪ್ರಪಂಚದ ಮುಕ್ತದೇಶಗಳಲ್ಲಿ ಲೆಸ್ಬಿಯನ್‌ಗಳೂ ತಿಳಿಗೆಂಪು ತ್ರಿಕೋನ (ಪಿಂಕ್‌ಟ್ರಯಾಂಗಲ್) ವನ್ನು ಹೆಮ್ಮೆಯ ಸಂಕೇತವಾಗಿ ಧರಿಸುತ್ತಾರೆ.
- ❖ ಪಾಶ್ಚಿಮಾತ್ಯ ದೇಶಗಳ ಕೆಲವೆಡೆ ಸ್ತ್ರೀಯರು ಮತ್ತು ಯುವತಿಯರು ಪುರುಷ ವೇಷಗಳನ್ನು ಧರಿಸುವ ಮೂಲಕ ತಾವು ಸ್ತ್ರೀ ಸಲಿಂಗಿ (ಲೆಸ್ಬಿಯನ್) ಗಳು ಎಂದು ಅಪರೋಕ್ಷವಾಗಿ ಹೇಳಿಕೊಳ್ಳುವ ಸಂಪ್ರದಾಯವಿದೆ.

೧.೧೬ ಜೈಲಲ್ಲಿ ಸಲಿಂಗಕಾಮ

ಜೈಲಲ್ಲಿ ಕಳೆಯುವ ಬಹುತೇಕ ಅಪರಾಧಿಗಳು ಚುಡಾವಣೆ, ಅತ್ಯಾಚಾರ, ವೇಶ್ಯಾವಾಟಿಕೆ, ಯುವತಿಯರ ಅಪಹರಣದಂತಹ ಅನೈತಿಕ ಚಟುವಟಿಕೆಗಳ ಕಾರಣದಿಂದ ಬಂಧಿತರಾದವರು. ಅವರಲ್ಲಿ ನೈತಿಕಪ್ರಜ್ಞೆ ಇರುವವರು ಬಹುವಿರಳ. ಹೊರಗಿದ್ದಾಗ ತಮ್ಮ ದೈಹಿಕ ವಾಂಛೆಯನ್ನು ವೇಶ್ಯೆಯರಿಂದಲೂ, ಅನೈತಿಕ ಸಂಬಂಧಗಳ ಮೂಲಕವೂ, ಅತ್ಯಾಚಾರಗಳ ಮೂಲಕವೂ, ಪಡ್ಡೆ ಹುಡುಗರಿಂದಲೂ ತಣಿಸುತ್ತಿದ್ದವರು ಜೈಲಲ್ಲಿ ತಿಂಗಳುಗಟ್ಟಲೆ ಕೊಳೆಯುತ್ತಿರುವಾಗ ಅದನ್ನು ತಣಿಸುವುದಾದರೂ ಹೇಗೆ? ಅದಕ್ಕಾಗಿ ಅವರು ಕಂಡುಕೊಳ್ಳುವ ಮಾರ್ಗ ಸಲಿಂಗರತಿ. ಜೈಲಿಗೆ ಬರುವ ದೃಢಕಾಯ ಯುವಕರನ್ನು ಅವರು ತಮ್ಮ ಚಪಲ ತೀರಿಸಲು ಬಳಸಿಕೊಳ್ಳುತ್ತಾರೆ. ದೃಢಕಾಯ ಯುವಕರು ಜೈಲಿಗೆ ಬಂದು ಸೇರಿದೊಡನೆ ಅವರನ್ನು ತಮ್ಮ ಬಲೆಗೆ ಹಾಕುವಲ್ಲಿ ಅವರೆಡೆಯಲ್ಲಿ ಹ್ಯೊಕೈ ಪ್ರಾರಂಭವಾಗುತ್ತದೆ. ಕೆಲವೊಮ್ಮೆ ಇದು ಜೈಲ್ ಸುಪರಿಟೆಂಡೆಂಟ್‌ಗಳಿಗೆ ಬಹಳ ತಲೆನೋವಾಗಿ ಪರಿಣಮಿಸುವುದುಂಟು.

೧.೧೭ ಕೆಲವು ಲೆಸ್ಬಿಯನ್ ಪ್ರೇಮ ಕಥೆಗಳು

ಮಧ್ಯ ಪ್ರದೇಶದ ಛಿಂದ್‌ವಾಡಾದಲ್ಲಿ ನೆಲೆಸಿರುವ ಜ್ಯೋತಿ ಮತ್ತು ಸವಿತಾಳನ್ನು ಜನರು ಮೊದಲು ಭಾವಿಸಿದ್ದು ಪರಸ್ಪರ ಗೆಳತಿಯರೆಂದು. ಆದರೆ ಅವರು ಲೈಸ್ಬಿಯನ್ ಪ್ರೇಮಿಗಳೆಂದು ಜನರಿಗೆ ತಿಳಿದದ್ದು ಅವರು ಪರಾರಿಯಾದ ಮೇಲೆಯೇ. ಜ್ಯೋತಿ ಮತ್ತು ಸವಿತಾ ಪರಸ್ಪರ ಗೆಳತಿಯರೇ ಆಗಿದ್ದರು. ಆದರೆ ಅವರ ಮುಕ್ತ ಒಡನಾಟ ಅವರನ್ನು ಮಾನಸಿಕವಾಗಿಯೂ, ದೈಹಿಕವಾಗಿಯೂ ಆಕರ್ಷಿಸುವಂತೆ ಮಾಡಿತು. ಹೀಗೆ ಅವರು ಗಂಡು ಹೆಣ್ಣಿನಂತೆ ಪರಸ್ಪರ ಪ್ರೀತಿಸತೊಡಗಿದರು. ಗುಟ್ಟಾಗಿ ಸೇರುತ್ತಿದ್ದರು.

ಒಂದು ದಿನ ಜ್ಯೋತಿಯ ಹೆತ್ತವರು ಹುಡುಗನನ್ನು ನೋಡಿ ಮದುವೆ ಮಾಡಲು ಮುಂದಾದಾಗ "ನಾನು ಸವಿತಾಳನ್ನು ಪ್ರೀತಿಸುತ್ತಿದ್ದೇನೆ. ಅವಳೊಂದಿಗೆ ಜೀವನ ಪರ್ಯಂತ ಇರಬಯಸುತ್ತೇನೆ" ಎಂದು ದಿಟ್ಟವಾಗಿ ಹೇಳಿದಳು. ಮಗಳ ಮಾತು ಕೇಳಿ ಹೆತ್ತವರು ದಿಗ್ಭ್ರಾಂತರಾದರು. ಮಾನಸಿಕ ಅಸ್ವಸ್ಥಗೊಳಗಾಗಿರಬೇಕೆಂದು ಭಾವಿಸಿ ಕೋಣೆಯಲ್ಲಿ ಕೂಡಿ ಹಾಕಿದರು. ಬಂಧನದಿಂದ ತೀವ್ರ ಹತಾಶಗೊಂಡ ಜ್ಯೋತಿ ಅನ್ನಾಹಾರಗಳನ್ನೇ ತ್ಯಜಿಸಿದಳು. ಆದೊಂದು ದಿನ ಮನೆಯಲ್ಲಿ ಯಾರೂ ಇಲ್ಲದ ಸಮಯ ನೋಡಿ ಮನೆಯಿಂದ ಪರಾರಿಯಾಗಿ ಸವಿತಾಳೊಂದಿಗೆ ಪಾರಸಿಯಾ ಪೋಲಿಸ್ ಠಾಣೆಗೆ ಹೋಗಿ ನಮಗೆ ರಕ್ಷಣೆ ನೀಡಬೇಕೆಂದು ವಿನಂತಿಸಿಕೊಂಡಳು. ಪೊಲೀಸರು ಅನಿವಾರ್ಯವಾಗಿ ಅವರಿಗೆ ಬೆಂಗಾವಲಾಗಿ ನಿಲ್ಲಬೇಕಾಯಿತು.

ಕೇರಳದ ಗೀತ ಮತ್ತು ಸಾಯಿಜಾ ಎಂಬ ಹದಿಹರೆಯದ ಯುವತಿಯರು ಪರಸ್ಪರ ಪ್ರೀತಿಸುತ್ತಿದ್ದರು. ಒಬ್ಬರನ್ನೊಬ್ಬರು ಮನೋದ್ಯೈಹಿಕವಾದ ಸಂಬಂಧವನ್ನು ಹೊಂದಿದ್ದರು. ಇದನ್ನರಿತ ಗೀತಾಳ ಮನೆಯವರು ಅವಳಿಗೆ ಬಲವಂತವಾಗಿ ಮದುವೆ ಮಾಡಿದರು. ಪತಿಯೊಂದಿಗೆ ಮೂರು ತಿಂಗಳು ಹೇಗೋ ಕಳೆದ ಗೀತಾ ಒಂದು ದಿನ ಮನೆಯಿಂದ ಪರಾರಿಯಾಗಿ ಸಾಯಿಜಾಳೊಂದಿಗೆ ಓಡಿ ಹೋಗಿ ಆತ್ಮಹತ್ಯೆ ಮಾಡಿಬಿಟ್ಟಳು. ಆಗ ಅವರ ಶವದ ಸುತ್ತ ನೂರಾರು ಪ್ರೇಮ ಪತ್ರಗಳು ಪೊಲೀಸರಿಗೆ ಸಿಕ್ಕಿತ್ತು! ಸಲಿಂಗರತಿಯನ್ನು ದೀರ್ಘಕಾಲ ಅನುಭವಿಸಿದವರು ಗಂಡು ಹೆಣ್ಣಿನ ಸಂಬಂಧವನ್ನು ಅಸಹ್ಯಕರವಾಗಿ ಕಾಣುತ್ತಾರೆ ಮತ್ತು ಅವರನ್ನು ಆ ಹೀನ ಕೃತ್ಯದಿಂದ ತಡೆಯಲು ಹೊರಟರೆ ಆತ್ಮಹತ್ಯೆಯಂತಹ ಹೇಯ ಕೃತ್ಯಕ್ಕೂ ಅವರು ಹಿಂಜರಿಯಲಾರರು ಎಂಬುದಕ್ಕೆ ಈ ಘಟನೆಯು ಜ್ವಲಂತ ನಿದರ್ಶವಾಗಿದೆ. ಆದ್ದರಿಂದ ಹೆಣ್ಣೊಬ್ಬಳಿಗೆ ತನ್ನ ಗೆಳತಿಯಲ್ಲಿ ಸ್ನೇಹಕ್ಕೂ ಮೀರಿದ ಭಾವುಕತೆ ಹಾಗೂ ಪ್ರೀತಿ ಉಂಟಾದರೆ ಆಗಲೇ ಅದನ್ನು ನಿಯಂತ್ರಿಸುವ ಮತ್ತು ಅಂತಹ ಕೃತ್ಯಗಳು ಪ್ರಕೃತಿ ವಿರುದ್ಧವೆಂದು ತಿಳಿದು ಅದರಿಂದ ದೂರವಾಗಲು ಪ್ರಯತ್ನಿಸಬೇಕು. ಇಲ್ಲದಿದ್ದರೆ ಸಲಿಂಗರತಿಯನ್ನೇ ನೆಚ್ಚಿಕೊಂಡು ಸಮಾಜದ ಕುತ್ಸಿತ ನೋಟ ಹಾಗೂ ಮನೆಯವರ ಟೀಕೆಗಳಿಗೆ ಮಾನಸಿಕವಾಗಿ ಕುಗ್ಗಿ ಆತ್ಮಹತ್ಯೆಗೈದು ಇಹ–ಪರ ಎರಡನ್ನೂ ಕಳೆದುಕೊಳ್ಳಬೇಕಾದ ಪರಿಸ್ಥಿತಿಗೆ ತಲುಪಬಹುದು.

೧.೧೮ ಏಕಮುಖ ಸಲಿಂಗಪ್ರೇಮ

ಗಂಡು ಮತ್ತು ಹೆಣ್ಣನ್ನು ಪರಸ್ಪರ ಬೆಸೆದುಕೊಳ್ಳುವ ಪ್ರೇಮದ ನೂರಾರು ಕಥೆಗಳನ್ನು ನಾವು ಕಥೆ, ಕಾದಂಬರಿ ಮತ್ತು ದಿನನಿತ್ಯ ಓದುವ ಪತ್ರಿಕೆಗಳಿಂದ ಹಾಗೂ ಇನ್ನಿತರ ಮಾಧ್ಯಮಗಳಿಂದಲೂ ಕಾಣುತ್ತಿದ್ದೇವೆ. ಯೌವನದ ಕಾವಿನಲ್ಲಿ ಹುಡುಗ ಹುಡುಗಿಯರು ಪರಸ್ಪತ ಆಕರ್ಷಣೆಗೊಳಗಾಗಿ ಪ್ರೀತಿಸತೊಡಗುತ್ತಾರೆ. ಕಾಲೇಜು ಮೆಟ್ಟಿಲು ತುಳಿಯುತ್ತಿದ್ದಂತೆ ಬಿಸಿ ರಕ್ತ ಚಿಮ್ಮುವ ಉತ್ಸಾಹದಲ್ಲಿ ಪ್ರೇಮದ ಕಾವು ಮತ್ತೂ ಹೆಚ್ಚಾಗತೊಡಗುತ್ತದೆ. ಹುಡುಗ ಹುಡುಗಿಯರು ಪರಸ್ಪರ ತಾವು ಪ್ರೀತಿಸುತ್ತಿರುವುದನ್ನು ಮನಬಿಚ್ಚಿ ಹೇಳುತ್ತಾ ಪ್ರೀತಿ, ಪ್ರೇಮವೆಂದು ತಮ್ಮ ಅಮೂಲ್ಯ ವಿದ್ಯಾರ್ಥಿ ಜೀವನವನ್ನು ಅದರಲ್ಲಿಯೇ ಕಳೆಯುತ್ತಾರೆ. ಕೆಲವೊಮ್ಮೆ ಈ ಪ್ರೇಮವು ಏಕಮುಖವಾಗಿರುತ್ತದೆ.

ತಾನು ಮೆಚ್ಚಿದ ಹುಡುಗ ಅಥವಾ ಹುಡುಗಿಯ ಬಳಿ ತನ್ನ ಪ್ರೇಮದ ಕುರಿತು ಮನಬಿಚ್ಚಿ ಹೇಳಲು ಸಾಧ್ಯವಾಗದೆ ಒಳಗೊಳಗೇ ಪ್ರೀತಿಸುತಿವುದಕ್ಕೆ ಏಕಮುಖ ಪ್ರೇಮ ಎನ್ನುತ್ತಾರೆ. ಕೆಲವೊಮ್ಮೆ ಹುಡುಗಿಯು ಹುಡುಗನನ್ನು ಪ್ರೀತಿಸುತ್ತಾಳೆ. ಆದರೆ ಹುಡುಗನಿಗೆ ಆ ವಿಚಾರ ತಿಳಿದಿರುವುದೇ ಇಲ್ಲ. ತಾನು ಮೆಚ್ಚಿದ

ಹುಡುಗನಲ್ಲಿ ತನ್ನ ಮನದ ಭಾವನೆಗಳನ್ನು ಹೇಳೋಣವೆಂದರೆ ಅದಕ್ಕೆ ಹುಡುಗಿಗೆ ಧೈರ್ಯ ಇರುವುದಿಲ್ಲ. ಹೀಗೆ ಇಂತಹ ಪ್ರೇಮ ಏಕಮುಖವಾಗಿಯೇ ಮುಂದುವರಿಯುತ್ತದೆ. ಗಂಡು ಹೆಣ್ಣಿನ ಇಂತಹ ಏಕಮುಖ ಪ್ರೇಮಕ್ಕೆ ಪ್ರಪಂಚದಲ್ಲಿ ಲೆಕ್ಕವೇ ಇಲ್ಲ. ಈ ಏಕಮುಖ ಪ್ರೇಮ ಗಂಡು–ಗಂಡಿನಲ್ಲೂ, ಹೆಣ್ಣು–ಹೆಣ್ಣಿನಲ್ಲು ಇದೆ!

ಕೆಲವರಿಗೆ ಕೋಮಲ ಹಾಗೂ ಸುಂದರ ಹುಡುಗರನ್ನು ಕಂಡಾಗ, ಅವರ ಸವಿಯಾದ ಮಾತು, ಮೋಹಕ ನಗು ಮತ್ತು ಹಾವಭಾವಗಳನ್ನು ಕಂಡಾಗ ಮನದಲ್ಲಿ ಪ್ರೇಮ ಚಿಗುರೊಡೆಯುತ್ತದೆ. ಅವನೊಂದಿಗೆ ಮಾತನಾಡುವ, ಬೆರೆಯುವ ಆಸೆ ಹುಟ್ಟುತ್ತದೆ. ಆದರೆ ತನ್ನ ಮನದಲ್ಲಿ ಚಿಗುರೊಡೆದ ಪ್ರೇಮದ ಬಗ್ಗೆ ಆ ಹುಡುಗನಲ್ಲಿ ಹೇಳಿಕೊಳ್ಳಲು ಧೈರ್ಯ ಇರುವುದಿಲ್ಲ. ಇಂತಹ ವಿಕೃತ ಪ್ರೇಮಿಗಳು ತಾನಿಷ್ಟಪಟ್ಟ ಹುಡುಗ ತನ್ನ ಸಮೀಪವೇ ಇರಬೇಕೆಂದು ಬಯಸುತ್ತಾರೆ. ತಾನು ಪ್ರೀತಿಸುವ ಹುಡುಗನ ಸಾಮಿಪ್ಯವೇ ಎಲ್ಲಕ್ಕಿಂತ ಹೆಚ್ಚು ಎಂಬ ಭಾವನೇ ಇವರಲ್ಲಿ ಗಾಢವಾಗಿರುತ್ತದೆ. ಇಂತಹ ವಿಕೃತರು ತಮ್ಮ ಭಾವನೆಗಳನ್ನು ಬಿಚ್ಚಿ ಹೇಳದಿದ್ದರೂ ತನ್ನ ಮೆಚ್ಚಿನ ಹುಡುಗ ಇತರರೊಂದಿಗೆ ಮಾತನಾಡುವುದನ್ನು ಕಂಡಾಗ ಮತ್ತು ಜೊತೆಯಾಗಿರುವುದನ್ನು ಕಂಡಾಗ ಒಳಗೊಳಗೇ ಸಂಕಟಪಡುತ್ತಾರೆ. ಒಳಗೊಳಗೇ ಉರಿಯುತ್ತಾರೆ. ಇತರರ ಜೊತೆ ಒಡಾಡುವುದನ್ನು ಕಂಡರೆ ಮಾನಸಿಕ ಯಾತನೆ ಅನುಭಾವಿಸುತ್ತಾ ವ್ಯಾಕುಲಚಿತ್ತರಾಗುತ್ತಾರೆ. ತನ್ನ ಹುಡುಗನಲ್ಲಿ ಸಲುಗೆಯಿಂದಿರುವವರನ್ನು ಅಥವಾ ಜೊತೆಗಿರುವವರನ್ನು ಕಂಡರೆ ವಿನಾಕಾರಣ ಮುಖ ಸಿಂಡರಿಸುತ್ತಾರೆ. ಅದರ ಕೋಪವನ್ನು ಬೇರೆ ಯಾವುದಾದರೂ ರೂಪದಲ್ಲಿ ತೀರಿಸಿಕೊಳ್ಳುತ್ತಾರೆ. ಪುರುಷರಲ್ಲಿ ಕಾಣಿಸಿಕೊಳ್ಳುವ ಏಕಮುಖ ಪ್ರೇಮ, ಮಾನಸಿಕ ಯಾತನೆ, ವಿದ್ವೇಷ ಶಮನ ಮುಂತಾದವುಗಳು ಲೆಸ್ಬಿಯನ್‌ಗಳಲ್ಲೂ ಕಾಣಿಸಿಕೊಳ್ಳುತ್ತದೆ.

೧.೧೯ ಮಕ್ಕಳಲ್ಲಿ ಸಲಿಂಗಕಾಮ: ಹೆತ್ತವರ ನಿರ್ಲಕ್ಷ್ಯ

ಒಬ್ಬ ವ್ಯಕ್ತಿಗೆ ಸಲಿಂಗರತಿಯ ಗೀಳು ಅಂಟಿಕೊಳ್ಳುವಲ್ಲಿ ಆತನ ಬಾಲ್ಯದ ಪರಿಸರ ಮತ್ತು ಪರಿಸ್ಥಿತಿಗಳು ಹೆಚ್ಚು ಪ್ರಭಾವ ಬೀರಿರುತ್ತದೆ. ಜೊತೆಗೆ ಸುತ್ತಮುತ್ತಲ ವ್ಯಕ್ತಿಗಳೊಂದಿಗಿನ ಪರಸ್ಪರ ಸಂಬಂಧ ಹಾಗೂ ಅತಿಯಾದ ಒಡನಾಟ ಹಾಗೂ ಲೈಂಗಿಕ ಅಭಿವ್ಯಕ್ತಿಗೆ ಸಿಗುವ ಅವಕಾಶಗಳ ಪಾತ್ರವನ್ನೂ ಅಲ್ಲಗಳೆಯುವಂತಿಲ್ಲ. ಆದ್ದರಿಂದ ಮಕ್ಕಳು ಬಾಲ್ಯದಲ್ಲಿ ಸಲಿಂಗಕಾಮಿಗಳ ಸಹವಾಸ ಮತ್ತು ಒಡನಾಟವಿರಿಸುವುದರ ಬಗ್ಗೆ ಹೆತ್ತವರು ಎಚ್ಚರಿಕೆವಹಿಸಬೇಕಾಗಿದೆ. ಸಂಜೆ ಕತ್ತಲಾವರಿಸುತ್ತಿದ್ದಂತೆ

ಮಕ್ಕಳು ಮನೆಯಲ್ಲಿರಬೇಕೆಂದು ಹೆತ್ತವರು ಕಟ್ಟಾಜ್ಞೆ ವಿಧಿಸಬೇಕು. ಯಾಕೆಂದರೆ ಈ ಸಮಯದಲ್ಲಿ ಅವರು ಸಲಿಂಗರತಿಯ ಕೂಪಕ್ಕೆ ಬೀಳುವ ಸಾಧ್ಯತೆ ಹೆಚ್ಚು.

ಹುಡುಗರು ಜೊತೆಗಿರುವುದನ್ನು ಯಾರೂ ಅಸಹ್ಯವಾಗಿ ಕಾಣುವುದಿಲ್ಲ. ಆದರೆ ಇದುವೇ ಅವರಲ್ಲಿ ನಿರಾಯಾಸವಾಗ್ ಸಲಿಂಗರತಿಯ ಗೀಳು ಅಂಟಿಕೊಳ್ಳಲು ಕಾರಣವಾಗುತ್ತದೆ. ಹಝ್ರತ್ ಇಬ್‌ರಾಹೀಮ್ ಹರ್‌ಭೀಯವರು ಹೇಳುತ್ತಾರೆ, "ತಮ್ಮ ಮಕ್ಕಳು ಪಾಪಗಳಲ್ಲಿ ಭಾಗಿಯಾಗುವುದಕ್ಕಿಂತ ಮುಂಚೆ ಅವರನ್ನು ಕೆಟ್ಟ ಹಾಗೂ ದುಷ್ಟ ವ್ಯಕ್ತಿಗಳ ಸಹವಾಸದಿಂದ ಕಾಪಾಡಿ. ಯಾಕೆಂದರೆ, ಮಕ್ಕಳಲ್ಲಿ ಕೆಡುಕುಗಳು ಎಲ್ಲಕ್ಕಿಂತ ಮುಂಚಿತವಾಗಿ ಆ ಸಮಯದಲ್ಲಿ ಪ್ರಾರಂಭವಾಗುತ್ತದೆ (ಇಸ್ಮಾಈಲ್ ೨೦೧೦: ೫೪).

ಹರೆಯ ಉಕ್ಕುತ್ತಿರುವ ಪ್ರಾಯದ ಪಡ್ಡೆ ಹುಡುಗರೂ, ಮದುವೆಯಾಗಿರುವ ಗ್ರಹಸ್ಥರೂ ತಮ್ಮ ಲೈಂಗಿಕ ಖುಷಿಗೆ ಎಳೆಯ ಪ್ರಾಯದ ನವಿರಾದ ಹುಡುಗರನ್ನು ಹಣದ ಆಮಿಷವೊಡ್ಡಿಯೋ ಹಾಗೂ ಇನ್ನಿತರ ರೂಪದಲ್ಲೋ ತಮ್ಮ ಬಲೆಗೆ ಸಿಲುಕಿಸಿ ತಮ್ಮ ಲಾಲಸೆಯನ್ನು ಪೂರೈಸುತ್ತಾರೆ. ಇಂತಹ ಸನ್ನಿವೇಶದಲ್ಲಿ ನಿಮ್ಮ ಮಕ್ಕಳು ಅವರ ನೀಚ ಕೃತ್ಯಕ್ಕೆ ಬಲಿಯಾಗುತ್ತಾರೆ. ಬಾಲ್ಯದಲ್ಲಿ ಸಲಿಂಗಕಾಮದ ರುಚಿ ಕಂಡು ಅದನ್ನೇ ಒಂದು ಚಟವನ್ನಾಗಿ ಮಾಡಿಕೊಂಡರೆ ನಂತರ ಅದರಿಂದ ಹೊರಬರಲು ಅವರಿಗೆ ತುಂಬಾ ಅಸಾಧ್ಯವೆನಿಸೀತು. ಬಾಲ್ಯದಲ್ಲಿ ಅಂಟಿಕೊಂಡ ಈ ಚಟವು ವೃದ್ಧಾಪ್ಯದಲ್ಲೂ ಇರುತ್ತದೆಯೆನ್ನುತ್ತಾರೆ ಲೈಂಗಿಕ ತಜ್ಞರು (ಇಸ್ಮಾಈಲ್, ೨೦೦೯: ೫೪). ಸಿಗ್ಮಂಡ್‌ಪ್ರಾಯ್ಡ್ ಎಂಬ ಮನೋವಿಜ್ಞಾನದ ಪಿತಾಮಹ ಹೇಳುತ್ತಾರೆ. "ಮಾನವರೆಲ್ಲರೂ ಹುಟ್ಟುವಾಗ ಉಭಯ ಲಿಂಗಿಗಳಾಗುತ್ತಾರೆ. ಬೆಳೆ ಬೆಳೆಯುತ್ತಾ ದೈಹಿಕವಾಗಿ, ಮಾನಸಿಕವಾಗಿ, ಸಾಮಾಜಿಕವಾಗಿ ಏಕಲಿಂಗದವರಾಗಿ ಬಿಡುತ್ತಾರೆ." ಹುಟ್ಟುವಾಗ ಎಲ್ಲರೂ ಶುದ್ಧ ಪ್ರಕೃತಿಯಲ್ಲೇ ಜನಿಸುತ್ತಾರೆ. ನಂತರ ಪರಿಸ್ಥಿತಿ ಮತ್ತು ಸನ್ನಿವೇಶಗಳ ಪ್ರಭಾವಕ್ಕೊಳಗಾಗಿ ಮತ್ತು ಹೆತ್ತವರ ನಿರ್ಲಕ್ಷ್ಯ ಕಾರಣದಿಂದ ಅವರು ಸಲಿಂಗರತಿಯ ದಾಸರಾಗಿ ಬಿಡುತ್ತಾರೆಂಬುವುದು ನೂರಕ್ಕೆ ನೂರು ಸತ್ಯ.

ಕೆಲವೊಮ್ಮೆ ಈ ಚಟವು ಮನೆಯ ಹೊರಗಿನವರಿಂದ ಅಂಟಿಕೊಳ್ಳದೆ ಮನೆಯೊಳಗಿನವರಿಂದಲೇ ಅಂಟಿಕೊಳ್ಳುವ ಸಾಧ್ಯತೆಯಿದೆ. ಗಂಡು ಮಕ್ಕಳನ್ನು ಅಥವಾ ಹೆಣ್ಣು ಮಕ್ಕಳನ್ನು ಪರಸ್ಪರ ಮೈಕೈ ಸೋಕುವ ರೀತಿಯಲ್ಲಿ ಮಲಗಿಸುವುದನ್ನು ಹೆತ್ತವರು ಸಿಲ್ಲಿಯಾಗಿ ಕಾಣುತ್ತಾರೆ. ನಿದ್ದೆಯ ಮಂಪರಿನಲ್ಲಿ ಅಥವಾ

ಎಚ್ಚರದಲ್ಲಿ ಅವರು ಸಲಿಂಗರತಿಗೆ ಜಾರುವ ಸಾಧ್ಯತೆಗಳಿವೆ. ಹೆತ್ತವರು ಇದನ್ನು ಗಂಭೀರವಾಗಿ ಪರಿಗಣಿಸಿ ಮಕ್ಕಳನ್ನು ಪರಸ್ಪರ ಸ್ಪರ್ಶವಾಗದ ರೂಪದಲ್ಲಿ ದೂರದೂರವಾಗಿಯೇ ಮಲಗಿಸುವುದು ಒಳಿತು. ಇಲ್ಲದಿದ್ದರೆ ಮಕ್ಕಳು ಬಾಲ್ಯದಲ್ಲೇ ಸಲಿಂಗರತಿಯ ಅನುಭವಕ್ಕೊಳಗಾದರೆ ಅದೇ ಮಕ್ಕಳು ಬೆಳೆದು ಪ್ರಬುದ್ಧರಾಗಿ ತಮ್ಮ ಬಾಲ್ಯದ ಲೈಂಗಿಕ ಕ್ರಿಯೆಯ ಬಗ್ಗೆ ಅಸಹ್ಯ ತೋರಿ, ಪರಸ್ಪರ ಒಡಹುಟ್ಟಿದವಾನ್ನೇ ದ್ವೇಷಿಸಿಕೊಳ್ಳುತ್ತಾ ಸಂಬಂಧವೇ ಹಳಸುವ ಮತ್ತು ಬಾಂಧವ್ಯ ಮುರಿಯುವ ಸಾಧ್ಯತೆಯಿದೆ. ಆದ್ದರಿಂದ ಹೆತ್ತವರು ತಮ್ಮ ಮಕ್ಕಳನ್ನು ಅದು ಗಂಡಾಗಿರಲಿ ಹೆಣ್ಣಾಗಿರಲಿ ಒಟ್ಟೊಟ್ಟಿಗೆ ಮಲಗಿಸುವುದನ್ನು ಸಿಲ್ಲಿಯಾಗಿ ಕಾಣದೆ ಗಂಭೀರವಾಗಿ ಪರಿಗಣಿಸಿ ಮೈಕೈ ಸೋಕದ ಹಾಗಿ ದೂರದೂರವಾಗಿಯೇ ಮಲಗಿಸಬೇಕಾಗಿದೆ.

೧.೨೦ ಹಿಜ್ರಾ

ಹಿಜ್ರಾಗಳು ದಕ್ಷಿಣ ಏಷ್ಯಾದಲ್ಲಿ ಅತೀ ಹೆಚ್ಚುಎದ್ದು ಕಾಣುವ ಲೈಂಗಿಕತೆಶೋಷಿತರು (ಲೈಂಗಿಕ/ಲಿಂಗ ಅಭಿವ್ಯಕ್ತಿಯಿಂದಾಗಿ ಶೋಷಣೆಗೆ ಒಳಪಟ್ಟವರು). ಇವರು ಹುಟ್ಟುವಾಗ ಗಂಡಾಗಿ ಹೆಣ್ಣಿನಂತಿರಲು ಬಯಸಿ ಲಿಂಗ ಬದಲಾಯಿಸಿಕೊಂಡು (ಪುರುಷ ಲೈಂಗಿಕ ಅಂಗಗಳನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆಸಿಕೊಳ್ಳುವುದು) ಹಿಜ್ರಾಗಳ ಸಮುದಾಯಕ್ಕೆ ಸೇರುತ್ತಾರೆ. ಇವರಲ್ಲಿ ಕೆಲವರು ಹುಟ್ಟುವಾಗಲೇ ಹೆಣ್ಣಿನ ಹಾಗೂ ಗಂಡಿನ ಎರಡೂ ಲೈಂಗಿಕ ಅಂಗಾಂಗ ಹೊಂದಿರುತ್ತಾರೆ.

ಇತಿಹಾಸ: ಹಿಜ್ರಾಗಳ ಅಸ್ಥಿತ್ವ ಜಗತ್ತಿನ ಅತ್ಯಂತ ಪುರಾತನ ನಾಗರೀಕತೆಗಳಲ್ಲಿ, ಸಂಸ್ಕೃತಿಗಳಲ್ಲಿ, ಪುರಾಣಗಳಲ್ಲಿ, ಪಾರಂಪರೀಕ ಸಂಪ್ರದಾಯಗಳಲ್ಲಿ ಹಾಗೂ ಶಿಲ್ಪಕಲೆಗಳಲ್ಲಿ, ನಾವು ಕಾಣಬಹುದು. ಪ್ರಪಂಚದ ಎಲ್ಲೆಡೆ ಬೇರೆ ಬೇರೆ ಹೆಸರುಗಳಲ್ಲಿ, ಬೇರೆ ಬೇರೆ ವ್ಯಕ್ತಿತ್ವಗಳಲ್ಲಿ ಇವರು ಇದ್ದುದರ ಬಗ್ಗೆ ನಮಗೆ ತಿಳಿದು ಬರುತ್ತದೆ. ಆಗಿನ ಕಾಲದಲ್ಲಿ ಇವರಿಗೆ ಗೌರವ ಹಾಗೂ ಸಾಮಾಜಿಕ ಸ್ಥಾನಮಾನಗಳಿದ್ದವು. ಬಧಾಯಿ (ನೃತ್ಯ ಹಾಗು ಆಶೀರ್ವಾದ) ಮಾಡುವ ಪಾತ್ರವನ್ನು ಕೊಟ್ಟಿದ್ದು ಪುರಾಣದಲ್ಲಿ ಬರುವ ರಾಮ ಎಂದು ಹೇಳುತ್ತಾರೆ. ಕ್ರೈಸ್ತ ಮತವನ್ನು ಮೊದಲಬಾರಿಗೆ ಇಥಿಯೊಪಿಯಗೆ ಕೊಂಡೊಯ್ದದ್ದು ಒರ್ವ ಹಿಜ್ರಾ. ಈ ಹಿಜ್ರಾಳಿಗೆ ಏಸು ಕ್ರಿಸ್ತನು ತುಂಬಾ ಪ್ರೋತ್ಸಾಹಿಸಿದ್ದುದ್ದರ ಉಲ್ಲೇಖನ ಬೈಬಲ್ಲಿನಲ್ಲಿದೆ. ಮೊಘಲರ ಕಾಲದಲ್ಲಿ ರಾಣಿಯರ ಸಖಿಯರನ್ನಾಗಿ ಹಾಗೂ ಅವರ ರಕ್ಷಣೆಗಾಗಿ ನೇಮಿಸುತ್ತಿದ್ದರು.

ಸಂಪ್ರದಾಯ: ಬಹಳಷ್ಟು ಹಿಜ್ರಾಗಳು ಗುಂಪುಗಳಲ್ಲಿ ಬದುಕುತ್ತಾರೆ. ಹಿಜ್ರಾಗಳು ಅವರ ಸಂಪ್ರದಾಯ ನಿಯಮಗಳನ್ನು ಅನುಸರಿಸಬೇಕು. ಯಾರೇ ಆಗಲಿ ಸಾಂಪ್ರದಾಯಿಕವಾಗಿ ಹಿಜ್ರಾ ಆಗಲು

ಬಯಸಿದರೆ,ಒಂದುವರ್ಷದ ಕಾಲ ಸಾಟ್ಲಾದಲ್ಲಿ (ಹೆಣ್ಣಿನ ಉಡುಪು) ಇದ್ದು ಹಿಜ್ರಾ ಸಮುದಾಯದ ಎಲ್ಲಾ ನಿಯಮಗಳನ್ನು ಅನುಸರಿಸಬೇಕು. ಹಿಜ್ರಾ ಆಗಲು ಕಷ್ಟವಾದರೆ ಬಿಟ್ಟು ಹೋಗಲು ಈ ಒಂದು ವರ್ಷದ ಅವದಿಯಲ್ಲೇ ಆಗುತ್ತದೆ. ಆಗ ಅವರಿಗೆ ನಿರ್ವಾಣ (ಪುರುಷ ಲೈಂಗಿಕ ಅಂಗಗಳನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆಸಿಕೊಳ್ಳುವುದು) ಆಗಲು ಬಿಡುವುದಿಲ್ಲ. ಹಿಜ್ರಾ ಸಮುದಾಯ ತಾಯಿ ಮಗಳ ಸಂಬಂಧದ ಮೇಲೆ ನಿರ್ಮಾಣವಾಗಿದೆ. ಹಿಜ್ರಾ ಸಮುದಾಯದಲ್ಲಿ ಚೇಲಾಗಳು (ಮಗಳು) ಅವರ ಗುರುಗಳನ್ನು ನೋಡಿಕೊಳ್ಳಬೇಕು ಹಾಗು ಗುರುಗಳು ಚೇಲಾಗಳನ್ನು ನೋಡಿಕೊಳ್ಳಬೇಕು. ಇದೊಂದು ಪರ್ಯಾಯ ಕುಟುಂಬದಂತೆ ಕೆಲಸ ಮಾಡುತ್ತದೆ. ಏಕೆಂದರೆ ಹಲವಾರು ಹಿಜ್ರಾಗಳಿಗೆ ತಮ್ಮ ತಂದೆ ತಾಯಿ ಹಾಗು ಸ್ನೇಹಿತರಿಂದ ಯಾವುದೇ ರೀತಿಯಾದ ಬೆಂಬಲ ಸಿಗುವುದಿಲ್ಲ. ಹೀಗೆ ಸಮಾಜದಲ್ಲಿ ಬದುಕುವುದರಿಂದ ಹಿಜ್ರಾಗಳಿಗೆ ನಮ್ಮ ಈ ಕ್ರೂರ ಸಮಾಜವನ್ನು ಎದುರಿಸಲು ಸಾಧ್ಯ.

ಸಂಸ್ಕೃತಿ: ಉತ್ತರ ಭಾರತದಲ್ಲಿ ಹಿಜ್ರಾಗಳಿಗೆ ಸಂಸ್ಕೃತಿಕ ಪಾತ್ರವಿದೆ. ಇವರನ್ನು ಮಕ್ಕಳು ಹುಟ್ಟಿದಾಗ, ಮದುವೆ ಮತ್ತು ಅಂಗಡಿಗಳ ಮುಹೂರ್ತ ಸಮಾರಂಭಗಳಲ್ಲಿ ಬಧಾಯಿಗೆ ಕರೆಯಲಾಗುತ್ತದೆ. ಕೆಲವು ಹಿಜ್ರಾಗಳು ದೇವಾಲಯಗಳಲ್ಲಿ ಸಾಂಪ್ರದಾಯಿಕವಾಗಿ ಪೂಜೆ ಮಾಡುವವರಾಗಿರುತ್ತಾರೆ. ಕೆಲವು ಹಿಜ್ರಾಗಳು ಬಸ್ತಿ (ಭಿಕ್ಷೆ) ಕೇಳಲು ಹೋಗುತ್ತಾರೆ. ಆದರೆ ದಕ್ಷಿಣ ಭಾರತದಲ್ಲಿ ಹಿಜ್ರಾಗಳಿಗೆ ಇಂತಹ ಯಾವುದೇ ಸಾಂಸ್ಕೃತಿಕ ಪಾತ್ರ ಇಲ್ಲದಿರುವುದರಿಂದ ಬದುಕಲು ಇವರು ಭಿಕ್ಷೆ ಬೇಡುತ್ತರೆ ಅಥವಾ ಲೈಂಗಿಕ ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ. ಬೆಂಗಳೂರಿನಲ್ಲಿ ಹಿಜ್ರಾಗಳು ಹಮಾಮ್ (ಸ್ನಾನದ ಮನೆ) ಗಳನ್ನು ನಡೆಸುತ್ತಾರೆ.

ಸಮುದಾಯ ರಚನೆ: ಭಾರತದಲ್ಲಿ ಹಿಜ್ರಾ ಸಮುದಾಯಗಳು ಏಳು ಘರಾನಗಳಲ್ಲಿ (ಮನೆ) ವ್ಯವಸ್ಥೆಗೊಂಡಿದೆ. ಪ್ರತಿಯೊಂದು ಘರಾನಾಗೆ ಒಬ್ಬರು ನಾಯಕ್ (ಪ್ರಧಾನ ನಾಯಕ/ ಗುರು) ಇರುತ್ತಾರೆ. ಹಲವಾರು ಹಿಜ್ರಾಗಳು ಅವರ ಗುರುಗಳನ್ನು ಮಮ್ಮಿ ಎಂದು ಕರೆಯುತ್ತರೆ. ಹೀಗಾಗಿ ಯಾವುದೇ ಹಿಜ್ರಾ ಎಲ್ಲೇ ಇದ್ದರೂ ಅವರಿಗೆ ಗುರು ಇದ್ದು ಈ ಏಳರಲ್ಲಿ ಯಾವುದಾದರೊಂದು ಘರಾನಾಗೆ ಸೇರುತ್ತರೆ.

೧.೨೧ ಹಿಜಡಾ: ವೈದ್ಯಕೀಯ ಕಾರಣಗಳು

ಚಾಂದಿನಿ, ಅಪ್ಸರಾ, ಕಾಜಲ್ ಎಷ್ಟೊಂದು ಸುಂದರ ಹೆಸರುಗಳು. ಆದರೆ ಇವು ಒಂದು ವಿಭಿನ್ನ ಸಾಮಾಜಿಕ ಗುಂಪಿಗೆ ಸೇರಿದ ವ್ಯಕ್ತಿಗಳ ಹೆಸರುಗಳು. ಗಂಡು ದೇಹದಲ್ಲಿ ಬಂಧಿಯಾಗಿರುವ ಹೆಣ್ಣಿನ

ಹೆಸರುಗಳಿವು. ಆ ಹೆಣ್ಣುಗಳನ್ನು ನೋಡಿದವರಿಗೆ, ಅವರು ಯಾರು, ಅವರ ನೋವು ಸಂಕಟಗಳೇನು, ಅವರ ತೊಂದರೆಗಳೇನು ಎಂದು ಊಹಿಸಲೂ ಸಾಧ್ಯವಾಗುವುದಿಲ್ಲ. ಅವರೂ ಬೇರೆಲ್ಲರಂತೆಯೇ ಮನುಷ್ಯರಂತೆ ಕಾಣಲು ಜನರು ಹಿಂದೆಗೆಯುತ್ತಾರೆ, ಏಕೆ? ಅವರಿಗೂ ಜನಜೀವನದಲ್ಲಿ ಸಹಜವಾಗಿ ಸಹಬಾಳ್ವೆ ನಡೆಸಲು ನಾಗರೀಕ ಸಮಾಜ ಒಪ್ಪುತ್ತಿಲ್ಲ ಏಕೆ? ಅವರ ಮೇಲಿನ ತಪ್ಪು ತಿಳುವಳಿಕೆಯೇ ಅಥವಾ ಅವರ ಬಗೆಗಿನ ಅವ್ಯಕ್ತ ಭಯವೇ?

ಪ್ರತಿಯೊಬ್ಬ ವ್ಯಕ್ತಿಗೂ (ಹೆಣ್ಣಿರಲಿ, ಗಂಡಿರಲಿ) ತನ್ನದೇ ಆದ ಲೈಂಗಿಕ ಭಾವನೆಗಳು, ವರ್ತನೆಗಳು, ನಂಬಿಕೆಗಳು ಮತ್ತು ಅವುಗಳ ಅಭಿವ್ಯಕ್ತಿಯ ಸ್ವಾತಂತ್ರ್ಯವಿರುತ್ತದೆ. ಇದು ಆ ವ್ಯಕ್ತಿಯ ವ್ಯಕ್ತಿಗತ ವೈಯಕ್ತಿಕ ಅನುಭವಗಳು ಹಾಗೂ ಸುತ್ತಮುತ್ತಲಿನ ಪರಿಸರದ, ಸಮಾಜದ ಪ್ರಭಾವವನ್ನು ಅವಲಂಬಿಸಿರುತ್ತದೆ. ಮಗು ಹುಟ್ಟಿದಾಗ ಹೆಣ್ಣು ಅಥವಾ ಗಂಡು ಎಂದು ಲಿಂಗ ನಿರ್ಧಾರವಾದ ಅನಂತರ ಅದು ಹೆಣ್ಣಾಗಿ ಅಥವ ಗಂಡಾಗಿ ಬೆಳೆಯಲು ತಂದೆ– ತಾಯಿ, ಪೋಷಕರು, ಸ್ನೇಹಿತರು, ಶಿಕ್ಷಕರು ಮತ್ತು ಸುತ್ತಲಿನ ಸಮಾಜ ಮುಖ್ಯ ಪಾತ್ರ ವಹಿಸುತ್ತದೆ. ಆ ವರ್ಗಕ್ಕೆ (ಹೆಣ್ಣು ಅಥವಾ ಗಂಡು) ಸಂಬಂಧಪಟ್ಟಂತೆ ಮಾತುಕತೆ, ಉಡುಗೆ – ತೊಡುಗೆ, ಆಟಗಳು, ನಡೆವಳಿಕೆ ಇವೆಲ್ಲದರ ಪ್ರಭಾವವೂ ಇರುತ್ತದೆ. ಮಗುವು ಕಿಶೋರಾವಸ್ಥೆ, ಬಾಲ್ಯಾವಸ್ಥೆ, ಪ್ರೌಢಾವಸ್ಥೆಗಳಿಗೆ ಕಾಲಿಟ್ಟಾಗ,ಸಂದರ್ಭಕ್ಕೆ ತಕ್ಕಂತೆ ಶಾರೀರಿಕ, ಮಾನಸಿಕ ಬದಲಾವಣೆಗಳಾಗಿ ಅದರ ಲೈಂಗಿಕತೆಗೆ, ಲಿಂಗ ಸಂಬಧಿತ ನಡವಳಿಕೆ, ಭಾವನೆಗಳಿಗೆ ಸರಿಯಾದ ಆಯಾಮ ದೊರೆಯುತ್ತದೆ. ಇದು ಮಗುವು ಸ್ತ್ರೀ ಅಥವಾ ಪುರುಷನಾಗಿ ಮಾರ್ಪಾಡಾಗುವ ರೀತಿ, ಈ ರೀತಿಯಲ್ಲಿ ಸಮಾಜ ಎರಡು ಲಿಂಗಗಲನ್ನು ಮಾತ್ರ ಗುರುತ್ತಿಸುತ್ತದೆ. ಇವಲ್ಲದೆ ಮೂರನೆಯ ಲೈಂಗಿಕ ವಿಭಾಗವೊಂದು ಇರಬಹುದು ಎನ್ನುವುದನ್ನು ಜನಸಾಮಾನ್ಯರು ಒಪ್ಪಿಕೊಳ್ಳಲಾರರು, ಹಾಗೆ ಒಪ್ಪಿಕೊಳ್ಳಲು ಸಮಾಜವೂ ಹಿಂಜರಿಯುತ್ತದೆ.

ಲೈಂಗಿಕತೆಗೆ ಶಾರೀರಿಕ, ಮಾನಸಿಕ ಹಾಗೂ ಭಾವನಾತ್ಮಕ ಆಯಾಮಗಲಿವೆ. ಇವುಗಳಲ್ಲಿ ಯಾವ ರೀತಿಯ ಏರುಪೇರು ಉಂಟಾದರೂ ವ್ಯಕ್ತಿಯ ಲೈಂಗಿಕತೆ ವಿಭಿನ್ನ ಅಥವಾ ವಿಕೃತಗೊಳ್ಳುತ್ತದೆ.

ಕೆಲವೊಮ್ಮೆ ತಮ್ಮದಲ್ಲದ ತಪ್ಪಿಗೆ, ಜನನಾಂಗಗಳ ಬೆಳವಣಿಗೆಯ ನ್ಯೂನತೆಯಿಂದಾಗಿಯೋ, ಲೈಂಗಿಕ ಅಭಿವ್ಯಕ್ತತೆಯ ತೊಂದರೆಯಿಂದಲೋ, ವರ್ಣತಂತುವಿನ ತೊಂದರೆಯ ಪರಿಣಾಮದಿಂದಲೋ,

ಅಥವಾ ಮಾನಸಿಕ ಅಸ್ವಸ್ಥತೆಯ ಕಾರಣದಿಂದಾಗಿಯೋ, ಕೆಲವರಿಗೆ ಮಾತ್ರ ಪರಿಪೂರ್ಣ ಹೆಣ್ಣು ಅಥವಾ ಪರಿಪೂರ್ಣ ಗಂಡಾಗಿರಲು ಸಾಧ್ಯವಾಗುವುದಿಲ್ಲ.

ಇಂಥ ಗುಂಪಿಗೆ ಸೇರಿದ, ಶಾರೀರಿಕವಾಗಿ ಗಂಡಸಾಗಿದ್ದು, ಹೆಣ್ಣಾಗುವ ಆಸೆ, ಮನಃಸ್ಥಿತಿ ಹೊಂದಿರುವ (ಗಂಡಿನ ದೇಹದಲ್ಲಿ ಸೆರೆಯಾಗಿರುವ ಹೆಣ್ಣು) ವ್ಯಕ್ತಿಗಳು ಮತ್ತು ಜನನಾಂಗದ ನ್ಯೂನತೆ ಇರುವ ವ್ಯಕ್ತಿಗಳು ತಮ್ಮದೇ ಆದ ಒಂದು ಗುಂಪಾಗಿ ಬದುಕು ನಡೆಸಿದ್ದಾರೆ.ಇವರೇ ಹಿಜಿಡಾಗಳು, ಹಿಜಿಡಾಗಳಲ್ಲಿ ಬಹಳಷ್ಟು ಜನ ವೃಷಣ, ಶಿಶ್ನಗಳ ಛೇದವಾಗಿರುವ ಮತ್ತು ಹೆಣ್ಣಿನಂತೆ ವೇಷ ಧರಿಸುವ ಆಸೆವುಳ್ಳ ಗಂಡಸರು, ಕೆಲವರು ಅಪರೂಪವೆನ್ನಿಸುವ ಉಭಯ ಲಿಂಗಿಗಳಾಗಿರುತ್ತಾರೆ. ಕೆಳವರ್ಗ, ಮಧ್ಯಮವರ್ಗಗಳಿಂದ ಬಂದ ಹಿಜಿಡಾಗಳು ಮನೆಬಿಟ್ಟು ಹೊರಬಂದು ಅವರದೇ ಒಂದು ಜನಾಂಗವಾಗಿ ಬದುಕು ತೊಡಗಿದಾಗ ಅವರಿಗೆ ಜೀವನ ನಿರ್ವಹಣೆಗೆ, ಹಣ ಸಂಪಾದನೆಗೆ ಇರುವ ಮಾರ್ಗ ಭಿಕ್ಷಾಟನೆ ಅಥವಾ ಲೈಂಗಿಕ ವೃತ್ತಿಯಾಗಿರುತ್ತದೆ. ಏಕೆಂದರೆ, ಅವರಿಗೆ ಯಾರೂ ಸಾಮಾನ್ಯವಾಗಿ ಉದ್ಯೋಗ ನೀಡುವುದಿಲ್ಲ. ಮನೆಯವರೂ ತಮ್ಮಲ್ಲಿ ಒಬ್ಬರೆಂದು ಒಪ್ಪಿಕೊಳ್ಳಲೂ ಸಿದ್ಧರಿರುವುದಿಲ್ಲ. ವೈಜ್ಞಾನಿಕವಾಗಿ, ವೈದ್ಯಕೀಯವಾಗಿ ಒಬ್ಬ ವ್ಯಕ್ತಿ ಹಿಜಿಡಾ ಆಗಲು ಮೂರು ಕಾರಣಗಳಿವೆ. ಅವೆಂದರೆ: (೧) ಬೆಳವಣಿಗೆಯಲ್ಲಿನ ನ್ಯೂನತೆ, (೨) ಬದಲುಡುಗೆಯ ಮೂಲಕ ಲೈಂಗಿಕ ಅಭಿವ್ಯಕ್ತತೆ, (೩) ಬದಲೀ ಲಿಂಗದ ಅಭಿವ್ಯಕ್ತತೆ.

ನಮ್ಮ ದೇಶದಲ್ಲಿ ಹಿಜಿಡಾ ಜನಾಂಗ ಉತ್ತರ ಭಾರತದ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಮತ್ತು ಸಾಮಾನ್ಯ ಜನರು ಅವರಿಗೆ ತಕ್ಕುದಾದ ಮಾನ್ಯತೆಯನ್ನು ಸಹ ಸಂದರ್ಭಕ್ಕೆ ತಕ್ಕ ಹಾಗೆ ನೀಡುತ್ತಾರೆ. ವಿವಾಹ, ಮಗು ಹುಟ್ಟಿದ ಸಂದರ್ಭ ಮುಂತಾದ ಸಮಯಗಳಲ್ಲಿ ಅವರನ್ನು ಕರೆಯಿಸಿ, ಅವರಿಂದ ಹಾಡಿಸಿ, ಕುಣಿಸಿ ಅವರಿಂದ ಆಶೀರ್ವಾದ ಪಡೆಯುವ ಪದ್ಧತಿ ಈಗಲೂ ಇದೆ. ದಕ್ಷಿಣ ಭಾರತದಲ್ಲಿ ಹೈದರಾಬಾದ್ ಪ್ರದೇಶವನ್ನುಳಿದಂತೆ, ಇನ್ನಿತರ ಪ್ರದೇಶಗಳಲ್ಲಿ ಅವರಿಗೆ ಮಾನ್ಯತೆ ಕಡಿಮೆ. ಅವರನ್ನು ತಿರಸ್ಕರಿಸಿ ಬಹಿಷ್ಕರಿಸುವವರೇ ಹೆಚ್ಚು ಉತ್ತರ ಭಾರತದಲ್ಲಿ ಅನೇಕ ಕಡೆ ಹಿಜಿಡಾಗಳು ರಾಜಕೀಯದಲ್ಲಿಯೂ ಮುಂದುವರಿದಿರುವುದನ್ನು ಕಾಣಬಹುದು. ಗ್ರಾಮ ಪಂಚಾಯತಿಯ ಸದಸ್ಯತ್ವದಿಂದ ಹಿಡಿದು ವಿಧಾನಸಭಾ ಸದಸ್ಯತ್ವದವರೆಗೂ ಅವರು ಹಬ್ಬಿರುವುದು ಒಂದು ಉತ್ತಮ ಬೆಳವಣಿಗೆಯೇ ಸರಿ. ಜಬಲ್‌ಪುರದ ಬಳಿ ಇರುವ ಕಟ್ನಿಯ ಮೇಯರ್ ಒಬ್ಬ ಹಿಜಿಡಾ ಆಗಿದ್ದರು ಎನ್ನುವುದನ್ನು ಇಲ್ಲಿ

ನೆನೆಯಬಹುದು. ಲೈಂಗಿಕ ಅಲ್ಪಸಂಖ್ಯಾತರೆಂದು ಕರೆಯಿಸಿಕೊಂಡರೂ ಸಮಾಜದ ಮುಖ್ಯವಾಹಿನಿಯಲ್ಲಿ ಬೆರೆಯಲು ಅವಕಾಶ ಸಿಗುವುದು ಬಹಳ ಮುಖ್ಯ.

ಕೆಲವು ಕಾರಣಗಳಿಂದಾಗಿ, ಉದಾಹರಣೆಗೆ, ವಂಶವಾಹಿನಿಯಲ್ಲಿನ ತೊಂದರೆ, ವರ್ಣತಂತುವಿನ ತೊಂದರೆ, ಗರ್ಭಿಣಿಯಾದವಳು ಕೆಲವು ರಾಸಾಯನಿಕ ಔಷಧಗಳ ಸೇವನೆಯಿಂದ ಅಥವಾ ಎಕ್ಸ್-ರೇಯಿಂದಾಗಿ, ನ್ಯೂನತೆಯುಳ್ಳ ಗರ್ಭವನ್ನು ಹೊಂದಿದ್ದರೆ, ಕೆಲವು ಸಂದರ್ಭಗಳಲ್ಲಿ ಹುಟ್ಟಿದ ಮಗು ಹೆಣ್ಣು ಅಥವಾ ಗಂಡು ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಇದರಿಂದ ಲಿಂಗ ತಪ್ಪಾಗಬಹುದು. ಅಂಥ ಮಕ್ಕಳಲ್ಲಿ ಹೆಣ್ಣು ಮತ್ತು ಗಂಡಿಗೆ ಸಂಬಂಧಿಸಿದ ಅವಯವಗಳೆಲ್ಲವೂ ಇರಬಹುದು. ಅಂಡಾಶಯ, ಗರ್ಭಕೋಶ ಮತ್ತು ವೃಷಣಗಳೂ ಇರಬಹುದು. ಇಂಥ ಮಕ್ಕಳನ್ನೇ ಮುಂದೆ ನಪುಂಸಕ, ಶಿಖಂಡಿ, ಉಭಯ ಲಿಂಗಿ, ನಿರಿಂದ್ರಿಯ ಎಂದೆಲ್ಲಾ ಕರೆಯುವುದು.

ಮಗು ಹುಟ್ಟಿದ ಮೇಲೆ ಅದರ ಜನನಾಂಗಗಳ ಪರೀಕ್ಷೆ ಬಹಳ ಮುಖ್ಯ. ತೊಂದರೆ ಏನಾದರೂ ಕಂಡುಬಂದರೆ ವರ್ಣತಂತುವಿನ ಪರೀಕ್ಷೆ, ಹಾರ್ಮೋನಿನ ಪರೀಕ್ಷೆ, ಸ್ಕ್ಯಾನಿಂಗ್ ಮುಂತಾದ ಪರೀಕ್ಷೆಗಳನ್ನು ಮಾಡಿ ಲಿಂಗ ನಿರ್ಧಾರ ಮಾಡಬೇಕಾಗುತ್ತದೆ. ಹುಟ್ಟಿದಾದ ತಪ್ಪಾದ ಲಿಂಗ ನಿರ್ಧಾರದಿಂದ ಮಗುವಿನ ಹದಿಹರೆಯದಲ್ಲಿ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ವೃಷಣಗಳು, ವೃಷಣ ಚೀಲದಲ್ಲಿಲ್ಲದಿದ್ದರೆ, ಮೂತ್ರ ರಂಧ್ರ ಶಿಶ್ನದ ತುದಿಯಲ್ಲಿಲ್ಲದಿದ್ದರೆ, ಯೋನಿಯ ಬೆಳವಣಿಗೆ ಆಗಿಲ್ಲದಿದ್ದರೆ ಮಗುವನ್ನು ಕೂಲಂಕಷವಾಗಿ ಪರೀಕ್ಷಿಸಬೇಕು.

ಶರೀರದ ಇತರ ಅಂಗಗಳ ನ್ಯೂನತೆಗಳನ್ನು ಒಪ್ಪಿಕೊಂಡು ಅವರೊಡನೆ ಸಹಕರಿಸುವ ಸಮಾಜ, ಲೈಂಗಿಕ ನ್ಯೂನತೆಗಳಿರುವವರನ್ನೂ ಒಪ್ಪಿಕೊಂಡು ಅವರ ದೈಹಿಕ, ಮಾನಸಿಕ, ಲೈಂಗಿಕ ಬೆಳವಣಿಗೆಗಳಿಗೆ ಅನುಕೂಲವಾಗುವಂತೆ ಸಹಕರಿಸುವುದು ಕಷ್ಟವಾದರೂ ಮುಖ್ಯದ್ದಾಗಿದೆ. ಹುಟ್ಟಿದಾಗ ಹೆಣ್ಣು ಅಥವಾ ಗಂಡು ಎಂದುಕೊಂಡ ಮಗು ಹದಿಹರೆಯಕ್ಕೆ ಕಾಲಿಟ್ಟಾಗ ತನ್ನ ದೇಹದಲ್ಲಿ ವಿರುದ್ಧ ಲೈಂಗಿಕ ಬೆಳವಣಿಗೆ, ಅದಕ್ಕೆ ಪೂರಕ ಭಾವನೆಗಳು ಮೂಡುವುದನ್ನು ಗುರುತಿಸುವಂತಾಗಬಹುದು. ಅಂಥ ಸಮಯದಲ್ಲಿ ಮತ್ತೊಮ್ಮೆ ಲೈಂಗಿಕ ಅವಯವಗಳು, ಹಾರ್ಮೋನ್‌ಗಳು, ಮಾನಸಿಕ ಪರಿಸ್ಥಿತಿ ಇವುಗಳನ್ನು ಅಭ್ಯಸಿಸಿ ಅದಕ್ಕೆ ಪೂರವಾದ ಲಿಂಗ ನಿರ್ಧಾರಿತ ಶಸ್ತ್ರಚಿಕಿತ್ಸೆಯನ್ನು ಮಾಡಿಸಿ ಆ ವ್ಯಕ್ತಿಯ ಸರಿಯಾದ ಲಿಂಗವನ್ನು ತಿಳಿಸಬೇಕಾಗುತ್ತದೆ. ಇದಕ್ಕಾಗಿ ಲಿಂಗ ಬದಲಾವಣೆ ಶಸ್ತ್ರಚಿಕಿತ್ಸೆಯನ್ನು ಮಾಡಿಸಬೇಕಾಗುತ್ತದೆ. ಇದು

ದುಬಾರಿ ಮತ್ತು ಸಾಮಾನ್ಯರಿಗೆ ಕಷ್ಟಕವಾಗುವುದರಿಂದ, ಇಂಥ ವ್ಯಕ್ತಿಗಳು ಮನೆಯ ವಾತಾವರಣದಿಂದ ದೂರ ಸರಿದು (ಅಥವಾ ಕೆಲವೊಮ್ಮೆ ಹೊರಹಾಕಲ್ಪಟ್ಟು) ಹಿಜಿಡಾ ಸಮುದಾಯವನ್ನು ಸೇರುವಂತಾಗಬಹುದು.

ಶಾರೀರಿಕವಾಗಿ ಗಂಡಾಗಿದ್ದರೂ ಕೆಲವರಲ್ಲಿ ತಾವು ಹೆಣ್ಣಾಗಿರಬೇಕೆಂಬ ತೀವ್ರವಾದ ಹಂಬಲ ಮನಸ್ಸಿನಲ್ಲಿ ಬೇರೂರಿರುತ್ತದೆ. ಅವರು 'ಗಂಡು ದೇಹದಲ್ಲಿ ಬಂದಿಯಾದ ಹೆಣ್ಣು' ಆಗಿರುತ್ತಾರೆ. ಈ ಭಾವನೆ ೧೨–೧೩ ವರ್ಷ ವಯಸ್ಸಿನಲ್ಲಿ ಪ್ರಾರಂಭವಾಗಿ ೧೮–೨೦ ವರ್ಷಗಳ ವೇಳೆಗೆ ಮನಸ್ಸಿನಲ್ಲಿ ಬಲವಾಗಿ ಬೇರೂರಬಹುದು. ಆ ಸಮಯದಲ್ಲಿ ಅವರು ಹೆಣ್ಣಿನಂತೆ ಅಲಂಕರಿಸಿಕೊಳ್ಳುವುದು ಅವರಂತೆ ಹಾವಭಾವ ತೋರುವುದು, ಹೆಣ್ಣಿನಂತೆಯೇ ಇದ್ದು ಗಂಡಸರೊಡನೆ ಲೈಂಗಿಕ ಆಕರ್ಷಣೆಯನ್ನು ಹೊಂದುವುದು ಮುಂತಾದ ಲೈಂಗಿಕ ಅಭಿವ್ಯಕ್ತತೆಯನ್ನು ತೋರಬಹುದು. ಈ ರೀತಿ ಹೆಣ್ಣು ವೇಷ ಧರಿಸುವುದನ್ನು 'ಟ್ರಾನ್ಸ್‌ವೆಸ್ಟಿಸಮ್' ಎನ್ನುತ್ತಾರೆ. ಒಂದು ಸಮಯದಲ್ಲಿ ಇಂಥ ವ್ಯಕ್ತಿಗೆ ತಾನು ಹೆಣ್ಣಾಗಬೇಕೆಂಬ ಬಯಕೆ ಎಷ್ಟು ತೀವ್ರವಾಗಿರುತ್ತದೆಯೆಂದರೆ, ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳಲು ಮುಂದಾಗುತ್ತಾನೆ (ಟ್ರಾನ್ಸ್‌ಜೆಂಡರ್ ಅಥವಾ ಟ್ರಾನ್ಸ್‌ಸೆಕ್ಸ್ಯುವಲ್). ಇದರಲ್ಲಿ ಪ್ರಮುಖವಾದ ಘಟ್ಟವೆಂದರೆ 'ನಿರ್ವಾಣ' ಅಥವಾ ವೃಷಣಗಳನ್ನು ಛೇದಿಸಿಕೊಳ್ಳುವುದು ಮತ್ತು ಶಿಶ್ನವನ್ನು ತೆಗೆಸಿಹಾಕುವುದು. ಕೆಲವರು ಸ್ತನಗಳ ಕಸಿ ಮಾಡಿಸಿಕೊಳ್ಳುತ್ತಾರೆ. ಮತ್ತೆ ಕೆಲವರು ಸ್ತ್ರಿ ಹಾರ್ಮೋನುಗಳನ್ನು ಸೇವಿಸುತ್ತಾರೆ. ಇದು ಸ್ತನಗಳ ಗಾತ್ರವನ್ನು ಹೆಚ್ಚಿಸುತ್ತದೆ. ಇಂಥ ಪುರುಷ ಜನನಾಂಗಗಳ ಛೇದನ ಮಾಡಿಸಿಕೊಂಡು ಹೆಣ್ಣಿನಂತೆ ವೇಷ ಭೂಷಣಗಳನ್ನು ತೊಟ್ಟು ಜೀವನ ನಡೆಸುವವರೇ ಹಿಜಿಡಾಗಳು. ಬರಿಯ ಜನನಾಂಗಗಳ ಛೇದನ ಮಾಡಿಸಿ ಸ್ತ್ರೀವೇಷ ಧರಿಸದೇ ಇರುವವರಿಗೆ ಶಿಖಂಡಿಗಳು ಎನ್ನುತ್ತಾರೆ.

ಒಟ್ಟಾರೆಯಾಗಿ ಹಿಜಿಡಾಗಳಲ್ಲಿ ಕಾಣುವ ಲೈಂಗಿಕ ಬದಲಾವಣೆಗಳೆಂದರೆ:

- ಪುರುಷ ಶರೀರದಲ್ಲಿ ಬಂಧಿತಳಾಗಿರುವ ಸ್ತ್ರೀ
- ಶಿಶ್ನ, ವೃಷಣಗಳನ್ನು ಛೇದನ ಮಾಡಿಸಿಕೊಂಡು ಸ್ತ್ರೀಯಂತೆ ಇರಬಯಸುವ ಪುರುಷ
- ಬದಲುಡುಗೆ ಧರಿಸುವ
- ಸಲಿಂಗ ಸಂಬಂಧವಿಟ್ಟುಕೊಂಡಿರುವವ

ಸಹಜ ಸಂಭೋಗ ಅಥವಾ ಯೋನಿ-ಶಿಶ್ನ ಸಮಾಗಮವಲ್ಲದೆ ಅಸಹಜ ಲೈಂಗಿಕ ಸಂಬಂಧ ಅಥವಾ ಸಾಮಾನ್ಯವಾಗಿ ವಿಕೃತಕಾಮವೆಂದು ಸಾಮಾಜಿಕವಾಗಿ ಹಾಗೂ ಕಾನೂನುರೀತ್ಯಾ ಪರಿಗಣಿತವಾದ 'ಮುಖ ಮೈಥುನ', 'ಗುದ ಮೈಥುನ' ಇವು ಹಿಜಡಾಗಳ ಲೈಂಗಿಕ ಸಂಬಂಧದ ರೀತಿ. ಇವರು ಸಾಮಾನ್ಯವಾಗಿ ಸಲಿಂಗಿಗಳು ಅಥವಾ ದ್ವಿಲಿಂಗಿಗಳಾಗಿರುತ್ತಾರೆ. ನಿರ್ವೀರ್ಯಗೊಳಿಸಲ್ಪಟ್ಟರು (ವೃಷಣಗಳನ್ನು ತೆಗೆಸಿಕೊಂಡವರು), ಸಲಿಂಗ ಸಂಬಂಧವುಳ್ಳವರು ಕೆಲವರು ದ್ವಿಲಿಂಗಗಳಾಗಿರಬಹುದು. ಹೊರಗೆ ಸಲಿಂಗ ಸಂಬಂಧವಿಟ್ಟುಕೊಂಡು, ವಿವಾಹವಾದ ಪತ್ನಿಯೊಡನೆಯೂ ಲೈಂಗಿಕ ಸಂಬಂಧವಿಟ್ಟುಕೊಂಡು ಮಕ್ಕಳನ್ನು ಪಡೆದಿರುವವರು ಉಭಯ ಲಿಂಗಿಗಳು ಅಥವಾ ದ್ವಿಲಿಂಗಿಗಳು.

ಒಂದೇ ಲಿಂಗದವರಲ್ಲಿ ಲೈಂಗಿಕ ಸಂಬಂಧ ಇರುವವರನ್ನು ಸಲಿಂಗ ಕಾಮಿಗಳು (ಹೋಮೋಸೆಕ್ಸ್ಯುವಲ್) ಎನ್ನುತ್ತಾರೆ. ಗಂಡು ಗಂಡಿನಲ್ಲಿ ಅಥವಾ ಹೆಣ್ಣು ಇನ್ನೊಂದು ಹೆಣ್ಣಿನಲ್ಲಿ ಲೈಂಗಿಕ ಸಂಬಂಧವಿಟ್ಟುಕೊಳ್ಳುವವರು ಈ ಗುಂಪಿಗೆ ಸೇರುತ್ತಾರೆ. ಭಾರತದಲ್ಲಿ ೧೩.೫ ಮಿಲಿಯ ಸಲಿಂಗ ಕಾಮಿಗಳಿದ್ದಾರೆಂದು ಒಂದು ಅಂದಾಜಿದೆ. ಸಾಮಾನ್ಯವಾಗಿ ಒಟ್ಟು ಜನಸಂಖ್ಯೆಯ ಶೇಕಡ ೫ರಷ್ಟು ಜನ ಸಲಿಂಗ ಕಾಮಿಗಳಾಗಿರುತ್ತರೆ ಎನ್ನಲಾಗಿದೆ. ಹಿಜಿಡಾಗಳಲ್ಲಿ ಈ ರೀತಿಯ ಸಲಿಂದ ಸಂಬಂಧ ಹೊಂದಿರುವವರು ಹೆಚ್ಚು. ಜನನಾಂಗಗಳ ಛೇದನ ಮಾಡಿಸಿಕೊಂಡಿಲ್ಲದವರಲ್ಲಿ ಕೆಲವರು ದ್ವಿಲಿಂಗಿಗಳೂ ಇದ್ದಾರೆ. ಸಲಿಂಗ ವರ್ತನೆಯನ್ನು ಪಾಶ್ಚಾತ್ಯರಲ್ಲಿ ಹಾಗೂ ನಮ್ಮಲ್ಲಿ ಮೇಲ್ಪಟ್ಟದ ವರ್ಗದ ಜನಗಳ ಒಂದು ನಡೆವಳಿಕೆ ಎಂದು ತಿಳಿದಿದ್ದಾರೆ. ಕೆಲವರು ಇದನ್ನು ಒಂದು ಕಾಯಿಲೆ, ವಿಕೃತಿ ಎಂದೂ, ಇನ್ನೂ ಕೆಲವರು ಇದನ್ನು ಅಪರಾಧ ಎಂದೂ ತಿಳಿದಿದ್ದಾರೆ. ವೈಜ್ಞಾನಿಕವಾಗಿ ಸಲಿಂಗ ಕಾಮದ ಬಗ್ಗೆ ಬಹಳಷ್ಟು ಅಧ್ಯಯನಗಳು, ಪ್ರಯೋಗಗಳನ್ನು ನಡೆಸಲಾಗಿದೆ. ಮನೋರೋಗ ತಜ್ಞರ ಸಂಘಗಳು ಸಲಿಂಗ ವರ್ತನೆಯನ್ನು ಕಾಯಿಲೆಗಳ ಗುಂಪಿನಿಂದ ತೆಗೆದು ಹಾಕಿವೆ. ಏಕೆಂದರೆ, ಅದು ಒಂದು ಮಾನಸಿಕ, ಭಾವನಾತ್ಮಕ ಸ್ಥಿತಿ ಮತ್ತು ಲೈಂಗಿಕ ಅಭಿವ್ಯಕ್ತಿಯ ಒಂದು ಕ್ರಮ. ಇದಕ್ಕೆ ಸ್ಪಷ್ಟವಾದ ಕಾರಣ ಇದುವರೆಗೂ ತಿಳಿದಿಲ್ಲ. ವಂಶವಾಹಿನಿ ತೊಂದರೆ, ಲೈಂಗಿಕ ಬೆಳವಣಿಗೆಯಲ್ಲಿರುವ ನ್ಯೂನತೆ, ಭದ್ರತೆಯಿಲ್ಲದ ಜೀವನಕ್ರಮ, ಸ್ತ್ರೀಯರೊಡನೆ ಹೆಚ್ಚಿನ ಒಡನಾಟ, ಚಿಕ್ಕವಯಸ್ಸಿನಿಂದಲೇ ಬದಲುಡುಗೆಯನ್ನು ಹಾಕುವುದು (ತಂದೆ ತಾಯಂದಿರು ಗಂಡು ಮಕ್ಕಳಿಗೆ ಹುಡುಗಿಯಂತೆ ವೇಷ ಹಾಕಿ ಸಂತೋಷಪಡುವುದು), ಹುಡುಗಿಯರ ಆಟ-ಪಾಠಗಳಲ್ಲಿ ಆಸಕ್ತಿ ತೋರಿಸುವುದು ಇತ್ಯಾದಿ. ಮನೆಯವರ ಛೇಡಿಕೆ, ಕೀಟಲೆ ಮುಂತಾದವುಗಳು ಇಂಥ ನಡೆವಳಿಕೆಗೆ ಕೆಲವರಲ್ಲಿ ಕಾರಣವಾದರೂ ನೇರ ಕಾರಣ, ವೈಜ್ಞಾನಿಕ ಸ್ಪಷ್ಟನೆ ಇದುವರೆಗೆ ದೊರೆತಿಲ್ಲ.

ಒಬ್ಬ ವ್ಯಕ್ತಿಯ ಬೆಳವಣಿಗೆಯಲ್ಲಿ ಕೆಲವು ಹಂತಗಳಿವೆ, ಅವೆಂದರೆ:

- ಸ್ವಯಂ ಮೋಹಗೊಳ್ಳುವಿಕೆ
- ಜತೆಗಾರ (ಒಂದೇ ಲಿಂಗದವರೊಡನೆ) ಮೋಹ
- ಭಿನ್ನಲಿಂಗದ ಮೋಹ.

ಸಲಿಂಗಕಾಮಿಗಳಲ್ಲಿ ಭಿನ್ನ ಲಿಂಗದ ಮೋಹದ ಹಂತದವರಿಗೆ ಅವರ ವ್ಯಕ್ತಿತ್ವದ ಬೆಳವಣಿಗೆ ಆಗಿರುವುದಿಲ್ಲ.

ಈ ರೀತಿ ಮಾನಸಿಕವಾಗಿ, ಭಾವನಾತ್ಮಕವಾಗಿ ಭಿನ್ನವಾಗಿರುವುದು ಆ ವ್ಯಕ್ತಿಯ ತಪ್ಪಲ್ಲ. ತನ್ನ ಲೈಂಗಿಕತೆಯ ಬಗ್ಗೆ ಎಷ್ಟು ಒತ್ತಡ ಇರುತ್ತದೆ ಎಂದರೆ, ಅದನ್ನು ಬಹಳ ಕಾಲ ನಿಗ್ರಹಿಸಲಾರ. ಕೆಲವರು ಬದಲುಡುಗೆಗೆ ಶರಣಾದರೆ, ಕೆಲವರು ಲಿಂಗ ಬದಲಾವಣೆ ಮಾಡಿಸಿಕೊಳ್ಳಲು ಇಚ್ಛಿಸುತ್ತಾರೆ. ಇನ್ನೂ ಕೆಲವರು ಲಿಂಗಚ್ಛೇದ ಮಾಡಿಸಿಕೊಂಡು ಹಿಜಡಾಗಳಾಗುತ್ತಾರೆ. ತನ್ನ ಲೈಂಗಿಕತೆಯ ಬಗ್ಗೆ ಅವರಿಗೆ ಎಷ್ಟು ಒತ್ತಡವಿರುತ್ತದೆಂದರೆ ಅದನ್ನು ಬಹಳ ಕಾಲ ಮುಚ್ಚಿಡಲಾರರು. ಸಲಿಂಗ ವರ್ತನೆ ಹದಿಹರೆಯಕ್ಕೆ ಕಾಲಿಡುವಾಗಲೇ ವರ್ತಿಸಲು ಅವನಿಗೆ ಆತನ ಕುಟುಂಬ ಹಾಗೂ ಸುತ್ತಲಿನ ಸಮಾಜ ಬಿಡುವುದಿಲ್ಲ. ತನ್ನ ಲೈಂಗಿಕತೆಯನ್ನು ಬಹಳ ಕಾಲ ನಿಗ್ರಹಿಸಿ ಕೊನೆಗೊಮ್ಮೆ ಆತನ ರೀತಿಯಲ್ಲಿ ಹೊರಹಾಕಿದಾಗ ಅವನ ಕುಟುಂಬ ಅದನ್ನು ಒಪ್ಪದಾದಾಗ, ಅವನು ಹೊರಹಾಕಲ್ಪಡುತ್ತಾನೆ. ಸುತ್ತಲಿನ ಸಮಾಜ ಆತನನ್ನು ತಿರಸ್ಕರಿಸುತ್ತದೆ. ಶಾಲಾ-ಕಾಲೇಜುಗಳಲ್ಲಿ ಜತೆಗಾರರ ಗೇಲಿಗೊಳಗಾಗಿ ಶಿಕ್ಷಣ ಮುಂದುವರಿಸಲಾಗುವುದಿಲ್ಲ. ಉದ್ಯೋಗ ಸ್ಥಳಗಳಲ್ಲಿ ಸಹೋದ್ಯೋಗಿಗಳ ಮೂದಲಿಕೆ, ತಾತ್ಸಾರಗಳಿಂದಾಗಿ ಕೆಲಸ ಮಾಡಲಾಗುವುದಿಲ್ಲ. ಹೀಗಾಗಿ ಅನೇಕರು ಜೀವನ ನಿರ್ವಹಣೆಗಾಗಿ ವೇಶ್ಯಾವೃತ್ತಿ, ಭಿಕ್ಷಾಟನೆಗಳಿಗೆ ಇಳಿಯಬೇಕಾಗುತ್ತದೆ.

ದೈಹಿಕ, ಮಾನಸಿಕ ನ್ಯೂನತೆ ಉಳ್ಳವರನ್ನು ಸಮಾಜ ಹೆಚ್ಚಾಗಿ ಪುರಸ್ಕರಿಸದಿದ್ದರೂ ತಿರಸ್ಕರಿಸುವುದಿಲ್ಲ. ಅಂಥ ವ್ಯಕ್ತಿಗಳು ತಮ್ಮನ್ನು ತಾವು ಇರುವಂತೆಯೇ ಒಪ್ಪಿಕೊಳ್ಳಲಾಗದೆ, ಕೀಳರಿಮೆ, ಖಿನ್ನತೆಗಳಿಂದ ಬಳಲುತ್ತಿದ್ದಾರೆ. ಇದರಿಂದ ಆತ್ಮಹತ್ಯೆ ಮಾಡಿಕೊಳ್ಳುವುದುಂಟು. ಅವರಲ್ಲಿ ಕೆಲವರು ಮಾತ್ರ ಧೈರ್ಯವಾಗಿ ತಮ್ಮಲ್ಲಿನ ಲೈಂಗಿಕ ಅಸ್ವಾಭಾವಿಕತೆಯನ್ನು ಒಪ್ಪಿಕೊಂಡು, ತಮ್ಮಂತೆಯೇ ಇರುವ,

ತಮ್ಮ ಆತ್ಮಗೌರವವನ್ನು ಉಳಿಸಿಕೊಂಡು ಬದುಕಿಕೊಂಡಿರುವ, ಇತರರಿಗೆ ಸಹಾಯ ಹಸ್ತವನ್ನು ಚಾಚುವ ಜನಗಳ ಗುಂಪನ್ನು (ಉದಾಹರಣೆಗೆ, ಹಿಜಡಾಗಳು) ಸೇರಿ ಬಾಳ್ವೆಯನ್ನು ಮುಂದುವರಿಸುತ್ತಾರೆ.

ಜೀವನ ನಿರ್ವಹಣೆಗಾಗಿ ಅನೇಕರು ಲೈಂಗಿಕ ಉದ್ಯೋಗವನ್ನು ಅವಲಂಬಿಸುವುದುದರಿಂದ ಎಷ್ಟೋ ಬಾರಿ ಕೆಟ್ಟ ಜನರಿಂದ, ಗೂಂಡಾಗಳಿಂದ, ಕೆಲವು ಸಲ ಪೋಲಿಸರಿಂದ ಕೂಡ ವಿವಿಧ ರೀತಿಯ ಲೈಂಗಿಕ ಅತ್ಯಾಚಾರ, ಹಿಂಸೆ, ಕಿರುಕುಳಗಳಿಗೆ ಒಳಗಾಗಬೇಕಾಗುತ್ತದೆ. ಇವರು ಹೆಚ್ಚಾಗಿ ಗುದ ಸಂಭೋಗ, ಮುಖ ಮೈಥುನಗಳನ್ನು ಮಾಡುವುದರಿಂದ, ಆ ಜಾಗಗಳ ಹುಣ್ಣು, ಗಾಯ, ರಕ್ತಸ್ರಾವಗಳಿಂದಲೂ ನರಳುವಂತಾಗುತ್ತದೆ.

೧.೨೨ ವೈದ್ಯಕೀಯ ನೆರವು, ಚಿಕಿತ್ಸೆ

ಅಮೇರಿಕಾದ ಪ್ರಖ್ಯಾತ ಲೈಂಗಿಕ ತಜ್ಞ ಆಲ್ಫ್ರೆಡ್ ಕಿನ್ಸೆ ಮೊದಲ ಬಾರಿಗೆ ಲೈಂಗಿಕ ಅಲ್ಪಸಂಖ್ಯಾತರ ಸಂಖ್ಯೆ, ಸಲಿಂಗ ಕಾಮಿಗಳ ಸಂಖ್ಯೆ, ಅವರ ವರ್ತನೆ, ಇವುಗಳ ಬಗ್ಗೆ ಅಧ್ಯಯನ ಮಾಡಿದರು. ಅವರ ಪ್ರಕಾರ, ಒಂದು ಅಳತೆ ಮಾಪಕದಲ್ಲಿ 'ಸೊನ್ನೆಯಿಂದ ಆರರ' (೦–೬) ವರೆಗೆ ವ್ಯಕ್ತಿಗಳನ್ನು ವಿಂಗಡಿಸಿದಾಗ '೦' ಶ್ರೇಣಿಯಲ್ಲಿ ಭಿನ್ನಲಿಂಗಿಗಳು, '೬' ಶ್ರೇಣಿಯಲ್ಲಿ ಪರಿಪೂರ್ಣ ಸಲಿಂಗ ಹಾಗೂ ಇವೆರದರ ನಡುವಿನ ಶ್ರೇಣಿಗಳಲ್ಲಿ ವಿವಿಧ ತೀವ್ರತೆಯ ದ್ವಿಲಿಂಗ ವರ್ತನೆ ಕಂಡುಬರುತ್ತದೆ (ಪದ್ಮಿನಿ ಪ್ರಸಾದ್, ೨೦೦೮:೧೪).

ಬದಲುಡುಗೆ, ಲಿಂಗ ಬದಲಾವಣೆ, ಸಲಿಂಗ ಕಾಮ ಇವುಗಳಿಗೆ ಹಲವಾರು ರೀತಿಯ ವೈದ್ಯಕೀಯ ನೆರವು ನೀಡಲು ಪ್ರಯತ್ನ ನಡೆಸಿದರೂ ಯಾವೊಬ್ಬ ವ್ಯಕ್ತಿಯೂ ತನ್ನಲ್ಲಿನ ಲೈಂಗಿಕತೆಯ ರೀತಿಯನ್ನೇ ಒಪ್ಪಿಕೊಂಡು ತಾನಿರುವಂತೆಯೇ ಇರಲು ನಿರ್ಧರಿಸಿದರೆ, ಯಾವ ರೀತಿಯ ಚಿಕಿತ್ಸೆಯೂ ಫಲಿಸುವುದಿಲ್ಲ, ಮಾನಸಿಕ ಚಿಕಿತ್ಸೆ, ಸಮ್ಮೋಹನ ಚಿಕಿತ್ಸೆ, ಶಾಕ್ ಚಿಕಿತ್ಸೆ, ನಡವಳಿಕೆ ಚಿಕಿತ್ಸೆ, ಹೇರಿಕೆ (ಅವರ್ಯನ್) ಚಿಕಿತ್ಸೆ, ಆತಂಕ, ಖಿನ್ನತೆ ನಿವಾರಕ ಔಷಧಗಳು ಮುಂತಾದವುಗಳಿಂದ ಕೆಲವರಿಗೆ ಉಪಯೋಗವಾಗಬಹುದು ಅಷ್ಟೇ.


ಇಂಥ ವ್ಯಕ್ತಿಗಳಲ್ಲಿ 'ಇಗೋಸಿನ್ಟೋನಿಕ್' (ತನ್ನಲೈಂಗಿಕತೆಯ ರೀತಿಯನ್ನು ಒಪ್ಪಿಕೊಂಡಿರುವವರು) ಉಳ್ಳವರನ್ನು ಬದಲಾಯಿಸಲು ಪ್ರಯತ್ನ ಪಡಬಾರದು. ಅಂಥವರನ್ನು ಮದುವೆ ಮಾಡಿಕೊಳ್ಳಲೂ ಸಹ ಒತ್ತಾಯಿಸಬಾರದು. ಅಂಥವರನ್ನು ಮದುವೆ ಮಾಡಿಕೊಳ್ಳಲೂ ಸಹ ಒತ್ತಾಯಿಸಬಾರದು. ಎಷ್ಟೋ ಜನ ಹುಡುಗರು ಮದುವೆ ಮುಂದೆ ಹಾಕುವುದಕ್ಕೆ, ಮದುವೆ ಬೇಡವೆನ್ನುವುದಕ್ಕೆ ಇದೂ ಒಂದು ಕಾರಣ. ಇಗೋಡಿಸ್ಟೋನಿಕ್ (ತನ್ನ ಲೈಂಗಿಕತೆ ಬಗ್ಗೆ ಗೊಂದಲ, ದ್ವಂದ್ವ ಇರುವವರು) ವ್ಯಕ್ತಿಗಳನ್ನು, ಅವರು ತಮ್ಮಲ್ಲಿನ ಕೊರತೆ (ತೊಂದರೆ) ಯಿಂದ ಹೊರಬರಲು ಇಚ್ಚಿಸಿದರೆ ಮಾತ್ರ ಚಿಕಿತ್ಸೆ ನೀಡಬೇಕು. ಅವರ ಕುಟುಂಬದವರಿಗೆ, ಸಂಬಂಧಪಟ್ಟವರಿಗೂ ಸಲಹೆ, ಮಾರ್ಗದರ್ಶನ ನೀಡಬೇಕಾಗುತ್ತದೆ.

ಹೊರದೇಶಗಳಲ್ಲಿ ಲಿಂಗ ಬದಲಾವಣೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವ ಮೊದಲು ಆ ವ್ಯಕ್ತಿಯನ್ನು ಎರಡು ವರ್ಷಗಳ ದೀರ್ಘ ಅವಧಿಯ ಆಪ್ತಸಮಾಲೋಚನೆಗೆ ಒಳಪಡಿಸಿ ಬಹಳ ಶಿಸ್ತಿನ ನಿಯಮಗಲನ್ನು ಪಾಲಿಸುತ್ತಾರೆ. ಆ ವ್ಯಕ್ತಿಗೆ ಸ್ತ್ರೀ ಹಾರ್ಮೋನ್‌ಗಳನ್ನು ಕೊಡಲಾಗುತ್ತದೆ. ಎರಡು ವರ್ಷದ ಅನಂತರವೂ ಆತ ಲಿಂಗ ಬದಲಾವಣೆಗಾಗಿ ಮಾನಸಿಕವಾಗಿ ಪೂರ್ತಿ ತಯಾರಿದ್ದರೆ ಮಾತ್ರ ಶಸ್ತ್ರಕ್ರಿಯೆಗೆ ಒಪ್ಪಿಗೆ ನೀಡಲಾಗುತ್ತದೆ. ಆದರೆ ಭಾರತದಲ್ಲಿ ಕೆಲವೆಡೆ ಮಾತ್ರ ಇಂಥ ಶಸ್ತ್ರಚಿಕಿತ್ಸೆಗಳು ನಡೆಯುತ್ತವೆ. ಬಹಳಷ್ಟು ಸಂದರ್ಭಗಳಲ್ಲಿ ಹಿಜಿಡಾಗಳು ತಜ್ಞರಲ್ಲದ ಜನರಿಂದ ಬಹಳ ಅನಾರೋಗ್ಯಕರ ವಾತಾವರಣಗಳಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದಾರೆ. ಇದರಿಂದ ಸೋಂಕು, ರಕ್ತಸ್ರಾವ, ಮೂತ್ರದ ತೊಂದರೆಗಳು ಉಂಟಾಗುತ್ತವೆ. ಬಹಳ ಜನ ಹಿಜಿಡಾಗಳಿಗೆ ಹಣದ ಕೊರತೆಯಿಂದಾಗಿ ತಜ್ಞ ವೈದ್ಯರ ಬಳಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲಾಗುತ್ತಿಲ್ಲ.

ಸಲಿಂಗ ವರ್ತನೆಯುಳ್ಳ ಅನೇಕರು ವಿವಾಹವಾಗಲು ಇಷ್ಟಪಡದಿದ್ದರೂ ಮನೆಯವರ ಒತ್ತಾಯಕ್ಕಾಗಿಯೋ, ತನ್ನ ಪುರುಷತ್ವವನ್ನು ತೋರ್ಪಡಿಸಿ ಕೊಳ್ಳಲೋ ವಿವಾಹವಾಗಬಹುದು. ಆದರೆ ಇವರ ವರ್ತನೆಯಿಂದ ಇವರನ್ನು ಮದುವೆಯಾದ ಹೆಣ್ಣು ಮಾನಸಿಕವಾಗಿ ಬಹಳಷ್ಟು ತೊಂದರೆಯನ್ನು ಅನುಭವಿಸಬೇಕಾಗಬಹುದು. ಕೆಲವು ಸಲ ವಿವಾಹ ವಿಚ್ಛೇದನದಲ್ಲಿ ಕೊನೆಗೊಳ್ಳಬಹುದು

೧.೨೩ ಎಚ್.ಐ. ವಿ ಹಾಗು ಸಲಿಂಗಕಾಮ

ಎಚ್.ಆಯಿ.ವ್ಹಿ ಸೋಂಕಿತ/ಪ್ರಭಾವಿತ ಗುಂಪುಗಳು



- ಕೇಂದ್ರಿತ ಗುಂಪು ಅಥವಾ ಅಪಾಯದಂಚಿನಲ್ಲಿರುವ ಗುಂಪು – FSW, SM/TG & IDU
- ಬ್ರಿಡ್ಜ್ ಪಾಪುಲೇಶನ್ – ಟ್ರಕರ್ಸ್ ಮತ್ತು ವಲೆಸೆ ಹೋಗುವ ಕಾರ್ಮಿಕರು

ಈ ಮೇಲಿನ ರೇಖಾ ಚಿತ್ರವು ತಿಳಿಸಿದಂತೆ ರಾಷ್ಟ್ರೀಯ ಏಡ್ಸ್ ನಿಯಂತ್ರಣ ಆಯೋಗ ವು ಎಚ್. ಐ .ವಿ ಹರಡುವಿಕೆಗೆ ಅನುಗುಣವಾಗಿ ಸಮಾಜವನ್ನು ಮೂರು ಗುಂಪುಗಲಾಗಿ (೧. ಕೇಂದ್ರೀಕೃತ ಗುಂಪು, ೨. ಸೇತುಬಂದ ಗುಂಪು, ೩ ಸಾಮಾನ್ಯ ಜನರು.) ವಿಂಗಡಿಸಿದ್ದು, ಕೇಂದ್ರೀಕೃತ ಗುಂಪು ಅಥವಾ ಅಪಾಯದಂಚಿನಲ್ಲಿರುವ ಗುಂಪು, ಇದರಲ್ಲಿ ಲೈಂಗಿಕ ವೃತ್ತಿನಿರತ ಮಹಿಳೆಯರು, ಪುರುಷ ಸಲಿಂಗಕಾಮಿಗಳು/ಅಂತರ್ ಲಿಂಗಿಗಳು ಮತ್ತು ಸೂಜಿ ಮೂಲಕ ಮಾದಕ ದ್ರವ್ಯ ತೆಗೆದುಕೊಳ್ಳುವವರು. ಬರುತ್ತಾರೆ. ಸೇತುಬಂದ ಗುಂಪು ಇದರಲ್ಲಿ ಲಾರಿ ಚಾಲಕರು ಮತ್ತು ವಲಸೆ ಕಾರ್ಮಿಕರು ಇರುತ್ತಾರೆ. ಮೂರನೇ ಗುಂಪಿನಲ್ಲಿ ಸಾಮಾನ್ಯ ಜನರು ಬರುತ್ತಾರೆ.

ಹೆಚ್ಚುಅಪಾಯದಂಚಿನಲ್ಲಿರುವ ಗುಂಪಿನ ಜನಸಂಖ್ಯೆ ಅಂದಾಜು

ಗುಂಪು		ಕಡಿಮೆ ಅಂದಾಜು	ಹೆಚ್ಚಿನ ಅಂದಾಜು
ಲೈಂಗಿಕ ವೃತ್ತಿನಿರತ ಮಹಿಳೆಯರು		೮,೩೧,೧೯೯	೧೨,೫೦,೧೫೫
ಪುರುಷ ಸಲಿಂಗಕಾಮಿಗಳು		–	೨೩,೫೨,೧೩೩
ಸೂಜಿ ಮೂಲಕ ಮಾದಕ ದ್ರವ್ಯ ತೆಗೆದುಕೊಳ್ಳುವವರು	ಗಂಡು	೯೬,೪೬೩	೧,೮೯,೭೨೯
	ಹೆಣ್ಣು	೧೦,೦೫೫	೩೩,೩೯೨

ಕೃಪೆ ರಾಜ್ಯ ತರಭೇತಿ ಮತ್ತು ಸಂಪನ್ಮೂಲ ಕೇಂದ್ರ ಕರ್ನಾಟಕ – ಬರ್ಡ್ಸ್

ಈ ಮೇಲಿನ ಕೋಷ್ಟಕವು ಭಾರತದಲ್ಲಿರುವ ಹೆಚ್ಚು ಅಪಾಯ ಸಾದ್ಯ ಗುಂಪುಗಳ ಬಗ್ಗೆ ವಿವರಿಸುತ್ತದೆ.

ಬೇರೆ ಬೇರೆ ಸಮುದಾಯದ ಗುಂಪಿನಲ್ಲಿ ಎಚ್.ಆಯಿ.ವ್ಹಿ ಸೋಂಕು





	ANC	STD	FSW	IDU	MSM
2003	0.87	5.61	10.3	13.3	12.1
2004	0.89	5.55	9.43	11.2	7.5
2005	0.88	5.66	8.44	10.16	8.74
2006	0.68	4.56	9.4	10.6	11.6

- ಭಾರತದಲ್ಲಿ, ಎಚ್.ಐ.ವಿ./ಏಡ್ಸ್ ಹೆಚ್ಚಾಗಿ ಈ ಮುಖ್ಯ ಗುಂಪುಗಳು ಕೇಂದ್ರಿಕರಿಸಿದ (FSW,MSM/TG & IDU) ಮತ್ತು ಲಾರಿ ಚಾಲಕರು ಮತ್ತು ವಲಸೆ ಕಾರ್ಮಿಕರು ಇದ್ದರಿಂದ ಎಚ್.ಆಯಿ.ವ್ಹಿ. ನಿಯಂತ್ರಣ ಚಟುವಟಿಕೆಗಳನ್ನು ಈ ಗುಂಪಿನಲ್ಲಿ ಮಾಡುವ ಬೇಡಿಕೆ ಇದೆ

ಭಾರತದಲ್ಲಿ ಎಚ್.ಐ.ವಿ.

- ಪಹರೆ ಸಮೀಕ್ಷೆಯ ಪ್ರಕಾರ:
- 22.7 ದಶಲಕ್ಷ ಜನರ ಎಚ್.ಐ.ವಿ ಹೊಂದಿದ್ದಾರೆ





೧.೨೪ ಸಲಿಂಗಕಾಮ ಮತ್ತು ಕಾನೂನು

ಭಾರತೀಯ ದಂಡ ಸಂಹಿತೆ ವಿಭಾಗ ೩೭೭ ಈ ರೀತಿ ತಿಳಿಸುತ್ತದೆ

"ಅಸಾಮಾನ್ಯ ಅಪರಾಧಗಳು–ಪ್ರಕೃತಿಯ ವಿರುದ್ಧ ಯಾವುದೇ ವ್ಯಕ್ತಿ ಸ್ವ ಇಚ್ಛೆಯಿಂದ, ಯಾವುದೇ ಪುರುಷ, ಸ್ತ್ರೀ, ಅಥವಾ ಪ್ರಾಣಿಯೊಂದಿಗೆ ಲೈಂಗಿಕ ಸಂಪರ್ಕ ಹೊಂದಿದ್ದಲ್ಲಿ, ಅವರಿಗೆ ಜೀವಾವಧಿ ಸೆರೆವಾಸದ ಶಿಕ್ಷೆ ಅಥವಾ ಕೆಲವೊಮ್ಮೆ ಹತ್ತು ವರ್ಷಗಳ ಕಾಲ ವಿಸ್ತರಣೆಯಾಗಬಹುದಾದಂತಹ ಸೆರೆಮನೆವಾಸ ಮತ್ತು ದಂಡ ಎರಡನ್ನೂ ವಿಧಿಸಿ ಶಿಕ್ಷಿಸಲಾಗುತ್ತದೆ.

ವಿವರಣೆ–ಈ ವಿಭಾಗದಲ್ಲಿ ವಿವರಿಸಲಾದ ಅಪರಾಧಕ್ಕೆ ಅಗತ್ಯವಾಗುವಂತೆ ಸಂಭೋಗ ಕ್ರಿಯೆ ಏರ್ಪಡಿಸಲು ಸಾಕಾಗುವಷ್ಟು ತೂರಿಕೆ"

ಗುದ ಮೈಥುನ, ವಿಕೃತ ಸಂಭೋಗ ಮತ್ತು ಮನುಷ್ಯಪ್ರಾಣಿ ಸಂಭೋಗದ ಅಪರಾಧವನ್ನು ಶಿಕ್ಷಿಸುವುದು ಈ ಕಾಯಿದೆಯ ಉದ್ದೇಶ. ಪ್ರಕೃತಿಗೆ ವಿರುದ್ಧವಾಗಿ, ತಿಳಿದೂ ಮನುಷ್ಯನೊಂದಿಗೆ,ಪುರುಷ ಅಥವಾ ಸ್ತ್ರೀಯೊಂದಿಗೆ ಅಸಹಜವಾಗಿ ಪುರುಷ ಅಥವಾ ಸ್ತ್ರೀ ಪ್ರಾಣಿಯೊಂದಿಗೆ ನಡೆಸುವ ಸಂಭೋಗ



ಅಪರಾಧವಾಗುತ್ತದೆ. ಇದಕ್ಕೆ ಹತ್ತು ವರ್ಷಗಳ ಸೆರೆವಾಸ ಅಥವಾ ದಂಡನೆ ವಿಧಿಸಲಾಗಿದೆ. ಈ ರೀತಿಯ ಅಪರಾಧವನ್ನು ಮಾಡಿ ಹತ್ತು ವರ್ಷಗಳವರೆಗೆ ಸೆರೆವಾಸ ಶಿಕ್ಷೆಗೆ ಗುರಿಯಾದವರು ಈವರೆಗೆ ಇಲ್ಲ. ಅಪರಾಧ ಸ್ಥಾಪನೆಗೆ ತಕ್ಕಂತೆ, ಈವರೆಗೆ ವಿಧಿಸಲ್ಪಟ್ಟ ವರದಿಯಾದ ಶಿಕ್ಷೆ ಎರಡು ವರ್ಷಗಳ ಸೆರೆವಾಸ.

ಭಾರತ ಈ ಕಾಯಿದೆಯನ್ನು ಯಾವ ರೀತಿ ಪಡೆಯಿತು?

ಭಾರತೀಯ ದಂಡ ಸಂಹಿತೆ, ೧೮೫೭ರಲ್ಲಿ ಮೊಟ್ಟಮೊದಲ ಸ್ವಾತಂತ್ರ್ಯ ಹೋರಾಟ ನಡೆದ ಕೂಡಲೇ ಬ್ರಿಟೀಷರಿಂದ ಸ್ಥಾಪಿಸಲ್ಪಟ್ಟಿತು. ಆಗ ಇಂಗ್ಲೆಂಡ್‌ನಲ್ಲಿ ಪ್ರಚಲಿತದಲ್ಲಿದ್ದ ಕಾನೂನುಗಳ ಆಧಾರದ ಮೇಲೆ ಭಾರತೀಯ ದಂಡ ಸಂಹಿತೆಯನ್ನು ರಚಿಸಲಾಗಿತ್ತು, ಆದರೆ ೮ನೇ ಹೆನ್ರಿ, ರೋಮ್‌ನ ಚರ್ಚ್ ನೊಂದಿಗೆ ತನ್ನ ಸಂಬಂಧವನ್ನು ಕಡಿದುಕೊಂಡ ನಂತರ, ಅವನು "ವಿಕೃತ ಸಂಭೋಗ"ಕ್ಕೆ ಸಂಬಂಧಿಸಿದ ಕಾನೂನನ್ನು, ಇಂಗ್ಲೆಂಡ್‌ನ ಅಪರಾಧಿಕ ಕಾನೂನಿನಲ್ಲಿ ಸೇರಿಸಿದನು. ೧೮೬೧ರಲ್ಲಿ ಅದನ್ನು ತಿದ್ದುಪಡಿ ಮಾಡಿ,ಮರಣದಂಡನೆ ಮತ್ತು ಆಸ್ತಿಯ ಮುಟ್ಟುಗೋಲು ದಂಡನೆಗಳಿಗೆ ಬದಲಾಗಿ ಜೀವಾವಧಿ ಸೆರೆವಾಸ ಶಿಕ್ಷೆ ಅಥವಾ ಕನಿಷ್ಟ ಹತ್ತು ವರ್ಷಗಳವರೆಗಿನ ಸೆರೆವಾಸ ಶಿಕ್ಷೆ ವಿಧಿಸಲಾಯಿತು. ಭಾರತೀಯ ದಂಡ ಸಂಹಿತೆ ೧೮೬೨ರಿಂದ ಜಾರಿಗೆ ಬಂದಿತು.

ಈ ಕಾಯಿದೆ ಭಾರತಕ್ಕೆ ಮಾತ್ರ ವಿಶಿಷ್ಟವಾದುದೆ?

ಈ ಕಾನೂನು ಭಾರತಕ್ಕೆಮಾತ್ರ ವಿಶಿಷ್ಟವಾದುದಲ್ಲ. ಬ್ರಿಟೀಷ್ ಸಾಮ್ರಾಜ್ಯದ ಭಾಗವಾಗಿದ್ದ, ಪಾಕಿಸ್ತಾನದಿಂದ ಹಾಂಗ್‌ಕಾಂಗ್‌ವರೆಗಿನ ಏಷ್ಯಾದ ದೇಶಗಳೆಲ್ಲೆಡೆ, ಈ ಕಾನೂನು ಒಂದೇ ಪ್ರಕಾರವಾಗಿದೆ. ಫ್ರೆಂಚ್ ಅಥವಾ ಡಚ್ ಆದಳಿತದಡಿಯಲ್ಲಿ ಇದ್ದ ದೇಶಗಳಲ್ಲಿ ಈ ಕಾನೂನು ಇರಲಿಲ್ಲ. ಪಾಶ್ಚಾತ್ಯ ವಸಾಹತಿನ ಹಿಡಿತದಿಂದ ತಪ್ಪಿಸಿಕೊಂಡ ಚೀನಾ, ಮಂಗೋಲಿಯಾ, ಜಪಾನ್, ಕೊರಿಯಾ ಅಥವಾ ಥ್ಯಾಲೆಂಡ್ ದೇಶಗಳಲ್ಲಿ ಸಲಿಂಗ ಕ್ರಿಯೆಯನ್ನು ಅಪರಾಧವನ್ನಾಗಿಸುವ ಕಾನೂನು ಇಲ್ಲ. ಪೂರ್ವದಲ್ಲಿನ ಬ್ರಿಟೀಷ್ ಸಾಮ್ರಾಜ್ಯಕೆ ಭಾರತೀಯ ದಂಡ ಸಂಹಿತೆ ಒಂದು ಮಾದರಿಯಾಗಿದ್ದು, ಇಂದಿಗೂ ಈ ಎಲ್ಲಾ ಸ್ವತಂತ್ರ ದೇಶಗಳೂ ಇದೇ ಕಾನೂನನ್ನು ಹೊಂದಿವೆ ಮತ್ತು ತಮ್ಮ ದಂಡ ಸಂಹಿತೆಯಲ್ಲಿ ಅದೇ ವಿಭಾಗವನ್ನೂ ಹೊಂದಿವೆ. ಹಾಂಗ್‌ಕಾಂಗ್ ಮಾತ್ರ ೧೯೮೧ರಲ್ಲಿ ತನ್ನ ಕಾನೂನನ್ನು ಬದಲಾಯಿಸಿತು. ಸ್ಕಾಟ್ಲೆಂಡ್, ಅಮೇರಿಕದ ಅನೇಕ ರಾಜ್ಯಗಳು ಹಾಗು ಕೆರಿಬಿಯನ್‌ನಲ್ಲಿನ ಮುಂಚಿನ ಬ್ರಿಟೀಷ್ ವಸಾಹತುಗಳು,ಸಲಿಂಗ ಕ್ರಿಯೆ ಚಟುವಟಿಕೆಯ ವಿರುದ್ಧದ ಕಾನೂನು ನಿಷೇಧಾಜ್ಞೆಗಳನ್ನು, ಇಂಗ್ಲಿಷ್ ಕಾನೂನಿನಿಂದ ಪಡೆದವು.

ಸಿಂಗಾಪುರದಂತಹ ದೇಶಗಳು, ವಿಭಾಗ ೩೭೭ಎ ಎಂಬ ಹೊಸ ಕಾನೂನನ್ನು ಸೃಷ್ಟಿಸಿ, ಇದು ವಿಶಿಷ್ಟವಾಗಿ ಪುರುಷ ಸಲಿಂಗಕಾಮ ಚಟುವಟಿಕೆಗಳಿಗೆ ಸಂಬಂಧಿಸಿದುದಾಗಿದೆ.

ಈ ಕಾನೂನನ್ನು ಏಕೆ ವಿರೋಧಿಸಲಾಗುತ್ತಿದೆ?

೧೯೯೪ಳರಿಂದ ವಿಭಾಗ ೩೭೭ಅನ್ನು ಪ್ರಶ್ನಿಸಲಾಗುತ್ತಿದೆ. ತಿಹಾರ್ ಸೆರೆಮನೆಯಲ್ಲಿ ಕಾಂಡೋಮ್‌ಗಳು ಲಭ್ಯವಾಗಬೇಕು ಎಂದು ಒಂದು ವೈದ್ಯಕೀಯ ತಂಡ ಸಲಹೆ ನೀಡಿದಾಗ ಮೊಟ್ಟ ಮೊದಲ ಸವಾಲು ಉದ್ಭವವಾಯಿತು. ಆದರೆ ಆಗಿನ ಸೆರೆಮನೆಗಳ ಐಜಿ ಆಗಿದ್ದ ಕಿರಣ್ ಬೇಡಿ ಅವರು ಇದನ್ನು ನಿರಾಕರಿಸಿದರು.ಏಕೆಂದರೆ, ಇದು ಸಲಿಂಗ ಲೈಂಗಿಕ ಕ್ರಿಯೆ ಒಪ್ಪಿಕೊಂಡಂತಾಗಿ, ಕಾನೂನನ್ನು ಮುರಿಯಬಹುದು ಎಂದು ಶಂಕಿಸಲಾಯಿತು.ನಂತರ ಏಡ್ಸ್ ಬೇದಭಾವ ವಿರೋಧ ಆಂದೋಲನ (ಎಬಿವಿಎ/ಆ್ಯಂಟಿ ಏಡ್ಸ್ ಡಿಸ್ಕ್ರಿಮಿನೇಶನ್ ಕ್ಯಾಂಪೇನ್) ಎಂಬ ಮಾನವ ಹಕ್ಕುಗಳ ತಂಡವೊಂದು,ದೆಹಲಿ ಉಚ್ಚನ್ಯಾಯಾಲಯದಲ್ಲಿ, ವಿಭಾಗ೩೭೭ರ ಸಾಂವಿಧಾನಿಕ ಮೌಲ್ಯತೆ ಮತ್ತು ಸೆರೆಮನೆವಾಸಿಗರಿಗೆ ಕಾಂಡೋಮ್‌ಗಳನ್ನು ಒದಗಿಸುವ ಬಗ್ಗೆ ಪ್ರಶ್ನಿಸಿ, ಒಂದು ಸಾರ್ವಜನಿಕ ಹಿತಾಸಕ್ತಿದಾವೆಯನ್ನು ಹೂಡಿತು.೨೦೦೧ರಲ್ಲಿ ನಾಜ಼್ ಫೌಂಡೇಶನ್, ದೆಹಲಿ ಉಚ್ಚನ್ಯಾಯಾಲಯದಲ್ಲಿ, ವಿಭಾಗ ೩೭೭ಅನ್ನು ಹಿಂದೆಗೆದುಕೊಳ್ಳುವಂತೆ, ಇನ್ನೂ ಹೆಚ್ಚಿನ ತೀವ್ರವಾದ ಕೋರಿಕೆ ಸಲ್ಲಿಸಿತು. ಇದು ಖಸಗಿತನದ ಹಕ್ಕಿಗೆ ವಿರುದ್ಧವಾಗಿರುವುದರಿಂದ, ವಯಸ್ಕರ ನಡುವಿನ ಖಾಸಗಿ ಒಪ್ಪಿಗೆ ಪಡೆದ ಲೈಂಗಿಕ ಕ್ರಿಯೆಯನ್ನು ನಿರಪರಾಧಿಕರಣಗೊಳಿಸುವಂತೆ ಅದು ಕೋರಿತ್ತು.ಲೈಂಗಿಕ ಚಟುವಟಿಕೆಗಳ ಆಧಾರದ ಮೇಲೆ ತೆಗೆದುಕೊಂಡರೆ, ಈ ಕಾನೂನು ಬಹಳ ತಾರತಮ್ಯಯುಕ್ತವಾಗಿತ್ತು ಎಂದೂ ಅದು ವಾದಿಸಿತು. ಹೆಚ್‌ಐವಿ/ಏಡ್ಸ್ ತಡೆ ಕಾರ್ಯವನ್ನು ಕುಂಠಿತಗೊಳಿಸಿ, ಎಮ್ ಎಸ್ ಎಮ್ ಸಮುದಾಯ ಭೂಗತವಾಗುವುದರಿಂದ ಇದು ಜೀವಿಸುವ ಹಕ್ಕನ್ನು ಉಲ್ಲಂಘಿಸುತ್ತದೆ ಎಂದೂ ಅದು ವಾದಿಸಿತು. ಅದು ನೀಡಿದ ಮತ್ತೊಂದು ಕಾರಣವೆಂದರೆ, ವಿಭಾಗ ೩೭೭ ನೀಡಿದ ಅಧಿಕಾರಗಳು ಮತ್ತು ಶಾಶ್ವತ ಸಾಮಾಜಿಕ ಕಳಂಕ ಮತ್ತು ಪೋಲೀಸ್ ದೌರ್ಜನ್ಯ. ದೆಹಲಿ ಉಚ್ಚನ್ಯಾಯಾಲಯದಲ್ಲಿ ಈ ಅಪೀಲು ತಿರಸ್ಕೃತಗೊಂಡರೂ, ಇದು ಭಾರತದ ಸರ್ವೋಚ್ಚ ನ್ಯಾಯಾಲಯದಿಂದ ಅಂಗೀಕರಿಸಲ್ಪಟ್ಟಿದೆ.

ವಿಭಾಗ ೩೭೭ ಯಾವ ರೀತಿ ಹೆಚ್. ಐ. ವಿ. ಕಾರ್ಯಗಳನ್ನು ಬಾಧಿಸುತ್ತದೆ?

ಹೆಚ್.ಐ.ವಿ./ಏಡ್ಸ್ ಕೆಲಸಗಳಿಗೆ ಸಹಾಯ ಮಾಡುವ ಕಾರ್ಯಕರ್ತರನ್ನು ಅವಮಾನಿಸಲು ಪೋಲೀಸರು ಸಾಮಾನ್ಯವಾಗಿ ವಿಭಾಗ ೩೭೭ನ್ನು ಬಳಸಿ ತಮ್ಮ ಕಾರ್ಯವನ್ನು ಸಮರ್ಥಿಸಿಕೊಳ್ಳುತ್ತಾರೆ

ಆದರೆ, ಆ ಕಾನೂನಿನಡಿಯಲ್ಲಿ ವಿದ್ಯುಕ್ತ ಆಪಾದನೆಗಳನ್ನು ಅಪರೂಪಕ್ಕೆ ದಾಖಲು ಮಾಡುತ್ತಾರೆ ಎಂದು ಪುರುಷರೊಂದಿಗೆ ಲೈಂಗಿಕ ಸಂಪರ್ಕವಿರುವ ಪುರುಷರ ಪರವಾಗಿ ವಾದಿಸುವ ವಕೀಲರು ವರದಿಮಾಡಿದ್ದಾರೆ. ಇದರ ಪರಿಣಾಮವಾಗಿ, ವಿಭಾಗ ೩೭೭, ಒಂದು ಗಂಭೀರ ಸ್ವರೂಪದ್ದಲ್ಲದ ಮತ್ತು ಅಪರೂಪವಾಗಿ ಬಳಸಲ್ಪಡುವ ಕಾನೂನು ಎಂದು ಸರ್ಕಾರ ಘೋಷಿಸಬಹುದು ಎಂದು ಅವರು ಹೇಳುತ್ತಾರೆ. ಇತ್ತಕಡೆ, ಪೋಲೀಸರೂ ಕೂಡ, ಏಡ್ಸ್ ಜನರಿಗೆ ಸಹಾಯ ಒದಗಿಸುವವರೂ ಸಲಿಂಗ ಕಾಮವನ್ನು ಪ್ರೋತ್ಸಾಹಿಸುತ್ತಿದ್ದಾರೆ ಎಂದು ಆಪಾದಿಸುತ್ತಿದ್ದು, ಇದು, ವಿಭಾಗ ೩೭೭ಕ್ಕೆ ಸಂಬಂಧಿಸಿದ ಮತ್ತೊಂದು ಅಪಾಯ ಮತ್ತು ಕೆಲವೊಮ್ಮೆ ಇದನ್ನು ರಾಷ್ಟ್ರೀಯ ಸುರಕ್ಷಾ ಅಪರಾಧಗಳು, ಮಾದಕ ಔಷಧ ಅಪರಾಧಗಳು, ಅಥವಾ ಇತರ ಅಪರಾಧಿಕ ಚಟುವಟಿಕೆಗಳೊಂದಿಗೆ ಸಂಪರ್ಕಿಸಲು ಪ್ರಯತ್ನಿಸಲಾಗಿದೆ. (ಆಪಾದನೆಯ ಸಾಂಕ್ರಾಮಿಕತೆ ಎಂಬ ಮಾನವ ಹಕ್ಕು ವೀಕ್ಷಣಾ ವರದಿಯಿಂದ). ಇದು ಎಮ್ ಎಸ್ ಎಮ್ ಸಮುದಾಯದೊಂದಿಗಿನ ಕಾರ್ಯವನ್ನು ಕುಂಠಿತಗೊಳಿಸಿ, ಅವರುಗಳು ಹೆಚ್ಐ ವಿಗೆ ಇನ್ನಷ್ಟು ಸುಲಭವಾಗಿ ತುತ್ತಾಗುವಂತೆ ಮಾಡುತ್ತಿದೆ.

೧.೨೫ ಕಾನೂನು ಹೋರಾಟ

ನಾಜ್ ಫೌಂಡೇಷನ್ ಭಾರತ ಸರಕಾರ ಪ್ರಕರಣ ಕುರಿತು ಜುಲೈ ೨,೨೦೦೯ ರಂದು ದೆಹಲಿ ಉಚ್ಚ ನ್ಯಾಯಾಲಯವು ನೀಡಿದ ತೀರ್ಪು. ಕಾನೂನು ಹೋರಾಟವು ಪ್ರಾರಂಭವಾಗಿದ್ದು ೧೯೯೦ಳರಲ್ಲಿ. ಜೈಲಿನಲ್ಲಿ ಕಾಂಡೊಮ್‌ಗಳನ್ನು ವಿತರಿಸುವುದು ಕಲಮು ೩೭೭ರಡಿಯ ಅಪರಾಧಕ್ಕೆ ಪ್ರೇರಣೆ ನೀಡಿದಂತಾಗುತ್ತದೆ ಎಂದು ಕಿರಣ್ ಬೇಡಿಯವರು ಹೇಳಿಕೆ ನೀಡಿದಾಗ ಅದನ್ನು ವಿರೋಧಿಸಿ ಯವರು ಅರ್ಜಿ ಸಲ್ಲಿಸಿದ್ದರು. ಆ ಗುಂಪು ನಿಷ್ಕ್ರಿಯಗೊಂಡದ್ದರಿಂದ ಅರ್ಜಿಯನ್ನು ತಿರಸ್ಕರಿಸಲಾಗಿತ್ತು.

ಮುಂದೆ ೨೦೦೧ರಲ್ಲಿ ಕಲಮು ೩೭೭ನ್ನು ಪ್ರಶ್ನಿಸಿ ನಾಜ್ ಫೌಂಡೇಷನ್‌ನವರು ಅರ್ಜಿ ಸಲ್ಲಿಸಿದ್ದು ಒಂದು ಪ್ರಮುಖ ಬೆಳವಣಿಗೆ. ಸರ್ಕಾರೇತರ ಸಂಸ್ಥೆಯೊಂದು ಅರ್ಜಿ ಸಲ್ಲಿಸಿದ್ದರಿಂದ ಪ್ರಾರಂಭವಾದ ಕಾನೂನು ಹೋರಾಟ ಕ್ರಮೇಣ ವಿಸ್ತಾರವಾದ ಬೆಂಬಲ ಪಡೆಯಿತು. ಎಲ್.ಜಿ.ಬಿ.ಟಿ ಸಮುದಾಯವಲ್ಲದೆ ಸಾರ್ವಜನಿಕವಲಯದಿಂದಲೂ ಬೆಂಬಲ ದೊರೆತದ್ದು ವಿಶೇಷವಾದ ಬೆಳವಣಿಗೆ. ಹೀಗೆ ನಾಜ್ ಫೌಂಡೇಷನ್ ಅರ್ಜಿ ಇಡೀ ಸಮುದಾಯದ ನಿರೀಕ್ಷೆಯ ಭಾರವನ್ನು ಹೊತ್ತುಕೊಂಡಿತು. ಪ್ರಕರಣದ ಪ್ರತಿಯೊಂದು ಅಂಕುಡೊಂಕಿನ ತಿರುವನ್ನು ಸಮುದಾಯವು ಅತ್ಯಂತ ಆಸಕ್ತಿಯಿಂದ ಗಮನಿಸಿತು .ಪ್ರಾರಂಭದಲ್ಲಿ ನ್ಯಾಯಿಕ ಬೆಳವಣಿಗೆಯನ್ನು ಸಮುದಾಯಕ್ಕೆ ಕಾಲಕಾಲಕ್ಕೆ ತಿಳಿಸುವ ಕೆಲಸವನ್ನು ಎಲ್.

ಜಿ. ಬಿ. ಟಿ ಪರ ಲಾಯರ್ ್ಸ ಕಲೆಕ್ಟಿವ್ (ನಾಜ್ ಫೌಂಡೇಷನ್ ವಕೀಲರು) ಮಾಡಿತು. ಆಲೋಚನಾ ಸಭೆಗಳ ಮೂಲಕ ಹಾಗೂ ನಿಯಮಿತವಾಗಿ ಸಂಪರ್ಕ ಜಾಲದ ಮೂಲಕ ಲಾಯರ್ ್ಸ ಕಲೆಕ್ಟಿವ್ ಆ ಕೆಲಸವನ್ನು ಮಾಡಿತು. ಬಹುಬೇಗ ಮಾಧ್ಯಮಗಳು ಹೆಚ್ಚಿನ ಆಸಕ್ತಿ ವಹಿಸಿ ಬೆಳವಣಿಗೆಗಳ ಕುರಿತು ನಿಯಮಿತವಾಗಿ ವರದಿ ಮಾಡಿದವು. ಸಾರ್ವಜನಿಕ ಗುಣ ವನ್ನು ಕಟ್ಟಿ ಕೊಟ್ಟ ಗೌರವ ಸಲ್ಲಬೇಕಾಗಿರುವುದು ಲಾಯರ್ಸ್ ಕಲೆಕ್ಟಿವ್'ಗೆ. ಈ ಗುಂಪು ಪ್ರತಿ ಹಂತದಲ್ಲೂ ಸಮುದಾಯದೊಂದಿಗೆ ಆಲೋಚಿಸುವ ಪ್ರಕ್ರಿಯೆಯನ್ನು ಆರಂಭಿಸಿತು. ನಾಜ್ ಅರ್ಜಿ ಕುರಿತು ಹಲವಾರು ತಿರುವುಗಳನ್ನು ಎಲ್.ಜಿ.ಬಿ.ಟಿ ಸಮುದಾಯವು ಗಮನಿಸುತ್ತಿತ್ತು. ವಿವರ ಇಂತಿದೆ:

೨೦೦೨	ಜಾಯಿಂಟ್ ಆ್ಯಕ್ಷನ್ ಕನ್ನೂರು ರವರು ಹೆಚ್.ಐ. ವಿ ಯಿಂದ ಏಯ್ಡ್ಸ್ ಬರುವುದಿಲ್ಲ,ಹೆಚ್. ಐ.ವಿ ಹರಡುವುದನ್ನು ತಡೆಯಲು ಈ ಕಾನೂನು ಬೇಕು ಎಂಬ ಆಧಾರದ ಮೇಲೆ ಕಾನೂನನ್ನು ಉಳಿಸಿಕೊಳ್ಳಲು ಬೆಂಬಲಿಸಿ ಮಧ್ಯ ಪ್ರವೇಶ ಅರ್ಜಿ ಸಲ್ಲಿಸಿತು;
೨೦೦೩	ಭಾರತ ಸರ್ಕಾರ (ಗೃಹ ಖಾತೆ ಸಚಿವಾಲಯ) ಅಪರಾಧ ಕಾನೂನು ಸಾರ್ವಜನಿಕ ನೈತಿಕತೆಯನ್ನು ಪ್ರತಿಬಿಂಬಿಸಬೇಕು ಮತ್ತು ಭಾರತೀಯ ಸಮಾಜವು ಸಲಿಂಗ ಕಾಮವನ್ನು ಸಮ್ಮತಿಸುವುದಿಲ್ಲ ಎಂಬ ಆಧಾರದ ಮೇಲೆ ಕಾನೂನನ್ನು ಉಳಿಸಿಕೊಳ್ಳಲು ಬೆಂಬಲಿಸಿ ಶಪಥ ಪತ್ರ ಸಲ್ಲಿಸಿತು;
೨೦೦೪	ಮೇಲಿನ ಆದೇಶವನ್ನು ಪ್ರಶ್ನಿಸಿ ಹಾಕಿದ್ದ ಮರು ಪರಿಶೀಲನಾ ಅರ್ಜಿಯನ್ನು ದೆಹಲಿ ಉಚ್ಚ ನ್ಯಾಯಾಲಯವು ತಿರಸ್ಕರಿಸಿತು;
೨೦೦೬	ನಾಜ್ ಫೌಂಡೇಷನ್‌ನವರು ಸಲ್ಲಿಸಿದ್ದ ಅರ್ಜಿಯ ಮೇಲೆ ಸರ್ವೋಚ್ಚ ನ್ಯಾಯಾಲಯ ಆದೇಶ ಹೊರಡಿಸಿ ಪ್ರಕರಣವನ್ನು ಯೋಗ್ಯತೆ ಮೇರೆಗೆ ಕೇಳಬೇಕೆಂದು ಪುನರ್ ವಿಚಾರಣೆಗಾಗಿ ದೆಹಲಿ ಉಚ್ಚನ್ಯಾಯಾಲಯಕ್ಕೆ ಮತ್ತೆ ಕಳಿಸಿತು;
೨೦೦೬	ರಾಷ್ಟ್ರೀಯ ಏಯ್ಡ್ಸ್ ನಿಯಂತ್ರಣ ಸಂಸ್ಥೆ ಶಪಥ ಪತ್ರ ಸಲ್ಲಿಸಿ ಕಲಮು ೩೭೭ನ್ನು ಜಾರಿಗೊಳಿಸುವುದರಿಂದ ಹೆಚ್. ಐ. ವಿ ತಡೆಯುವ ಪ್ರಯತ್ನಗಳಿಗೆ ಅಡ್ಡಿಯಾಗುತ್ತದೆ ಎಂದು ಹೇಳಿತು;
೨೦೦೬	ಬಿ,ಪಿ. ಸಿಂಘಾಲ್ ರವರು ಮಧ್ಯಪ್ರವೇಶ ಅರ್ಜಿ ಸಲ್ಲಿಸಿ ಸಲಿಂಗ ಕಾಮವು ಭಾರತೀಯ ಸಂಸ್ಕೃತಿಗೆ ವಿರುದ್ಧವಾಗಿದೆ ಮತ್ತು ಕಾನೂನನ್ನು ಉಳಿಸಿಕೊಳ್ಳಬೇಕೆಂದು ಕೋರಿದರು;

೨೦೦೬	‘೩೭೭ ವಿರೋಧಿ ದನಿಗಳು’ ಮಧ್ಯ ಪ್ರವೇಶ ಅರ್ಜಿ ಸಲ್ಲಿಸಿ ಅರ್ಜಿದಾರರನ್ನು ಬೆಂಬಲಿಸಿದರು ಮತ್ತು ಕಲಮು ೩೭೭ ಎಲ್.ಜಿ.ಬಿ.ಟಿ ವ್ಯಕ್ತಿಗಳ ಸಂವಿಧಾನಾತ್ಮಕ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂದು ಹೇಳಿತು;
೨೦೦೬	ಪ್ರಕರಣವನ್ನು ಮುಖ್ಯ ನ್ಯಾಯಮೂರ್ತಿ ಎ.ಪಿ.ಷಾ ಮತ್ತು ನ್ಯಾಯಮೂರ್ತಿ ಎಸ್. ಮುರಳೀಧರ್ ಅವರ ಮುಂದೆ ಅಚಿತಿಮ ವಾದಕ್ಕಾಗಿ ಇಡಲಾಯಿತು;
೨೦೦೯	೨, ಜುಲೈ- ತೀರ್ಪು ನೀಡಲಾಯಿತು.

ಮೇಲಿನ ಘಟನೆಗಳನ್ನು ನೋಡುವಾಗ ಕೆಲವು ಮುಖ್ಯ ಬೆಳವಣಿಗೆಗಳನ್ನು ಗಮನಿಸಬಹುದು. ಅವೆಂದರೆ, ಜಾಯಿಂಟ್ ಆ್ಯಕ್ಷನ್ ಕಣ್ಣೂರು ಎಂಬ ಏಯ್ಡ್ಸ್ ನಿರಾಕರಿಸುವ ಗುಂಪು ಹಾಗೂ ಮಾಜಿ ಬಿ.ಜೆ.ಪಿ ರಾಜ್ಯಸಭಾ ಸದಸ್ಯ ಬಿ.ಬಿ. ಸಿಂಘಾಲ್ರವರು ಸಲ್ಲಿಸಿದ್ದ ಮಧ್ಯ ಪ್ರವೇಶ ಅರ್ಜಿಗಳು. ಈಬೆಳವಣಿಗೆಗಳು ಸೂಚಿಸಿದ್ದೇನೆಂದರೆ ಕಲಮು ೩೭೭ರ ವಿರುದ್ಧದ ಹೋರಾಟದಲ್ಲಿ ಪರಿಗಣಿಸಬೇಕಾದ್ದು ಪ್ರಭುತ್ವವನ್ನಷ್ಟೇ ಅಲ್ಲ ಏಯ್ಡ್ಸ್ ನಿರಾಕರಣೆಯಂತಹ ನಾಗರಿಕ ಸಮಾಜವೂ ಇದೆ ಎಂಬುದನ್ನು.೨೦೦೬ ನಾಜ್ ಪೌಂಡೇಷನ್ ಅರ್ಜಿಯನ್ನು ಮತ್ತಷ್ಟು ಬಲಗೊಳ್ಳಲು ಮಕ್ಕಳ, ಮಹಿಳೆಯರ,ಕ್ವೀರ್ ಹಕ್ಕುಗಳ ಗುಂಪುಗಳ ಒಕ್ಕೂಟ ‘ಕಲಮು ೩೭೭ರ್ ವಿರೋಧಿ ದನಿಗಳು’ ಮಧ್ಯ ಪ್ರವೇಶ ಅರ್ಜಿ ಸಲ್ಲಿಸಿ ಕಾನೂನನ್ನು ತೆಗೆದುಹಾಕಬೇಕೆಂಬ ಬೇಡಿಕೆಯನ್ನು ಬೆಂಬಲಿಸಿತು.

ದೆಹಲಿ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಷಾ ಹಾಗೂ ನ್ಯಾಯಮೂರ್ತಿ ಮುರಳೀಧರ್ ಅವರು ೨೦೦೮ರಲ್ಲಿ ಅಚಿತಿಮ ವಾದಗಳನ್ನು ಕೇಳಿದರು. ಅವರುಗಳು ತೀರ್ಪು ನೀಡುವ ಮೊದಲು ಹಲವು ಶ್ರೇಣಿಯ ಅಭಿಪ್ರಾಯಗಳನ್ನು ಕೇಳಿ ವಾದಿಸಬೇಕಯ್ತು. ನವೆಂಬರ್ ೨೦೦೮ರಲ್ಲೆ ಅಚಿತಿಮ ವಾದಗಳು ಮುಗಿದರೂ ತೀರ್ಪು ಕೊಟ್ಟದ್ದು ೨೦೦೯, ಜುಲೈ ೨ರಣ್ದು. ತೀರ್ಪು ಎಲ್.ಗಿ.ಬಿ.ಟಿ ಸಮುದಾಯಕ್ಕೆ ಯಾವ ಅರ್ಥವನ್ನು ಕೊಡಲಿದೆ ಮತ್ತು ಭಾರತೀಯ ಸಂವಿಧಾನಿಕ ಕಾನೂನಿಗೆ ಸೂಚಿಸುವ ಭವಿಷ್ಯ ಏನಿದೆ ಏಂಬ ಕಾರಣಕ್ಕಾಗಿ ತೀರ್ಪು ಕುತೂಹಲ ಹುಟ್ಟಿಸಿತ್ತು. ಎರಡೂ ಕಾರಣ ಕುರಿತಂತೆ ತೀರ್ಪು ನಿರಾಶೆ ಹುಟ್ಟಿಸಲಿಲ್ಲ. ‘ತೋಳುಗಳ ಮೇಲಿನ ಹೊರೆ ಕಳಚಿ ಬಿಡುಗಡೆ ಹೊಂದಿದಂತಾಯ್ತು’ ಎಂದು ಕರ್ಯಕರ್ತರೊಬ್ಬರು ಪ್ರತಿಕ್ರಿಯಿಸಿದರು. ಕಾನೂನು ತಜ್ಞರು, ನಾಜ್ ತೀರ್ಪು ಅ-ತಾರತಮ್ಯ ಕಾನೂನಿನ ಹೊಸ ವ್ಯಾಖ್ಯಾನಗಳಿಗೆ ದಾರಿ ಮಾಡಿಕೊಟ್ಟಿದೆ ಎಂದು ಹೇಳಿದರು.

ತೀರ್ಪಿನ ಪರಿಣಾಮ ಬಹು ದೊಡ್ಡದು. ನ್ಯಾಯಿಕ ಭಾಷೆಯ ಸ್ವರೂಪ ಕೆಲವೊಮ್ಮೆ ಸುಗಮವಲ್ಲವಾದ್ದರಿಂದ ಹೆಚ್ಚಿನ ಜನಕ್ಕೆ ನಿಲುಕುವುದಿಲ್ಲ. ದೆಹಲಿ ಉಚ್ಚ ನ್ಯಾಯಾಲಯ ಅನುಸರಿಸಿದ ಸ್ವರೂಪ, ತರ್ಕ ಮತ್ತು ವಿವೇಕ ಹಾಗೂ ನಾಜ಼್ ತೀರ್ಪಿನ ಪರಿಣಾಮವನ್ನು ಅರ್ಥ ಮಾಡಿ ಕೊಳ್ಳುವಂತಹ ವಿಶಾಲ ಗ್ರಹಿಕೆಗೆ ಸಾಧನವಾಗುವುದು ಮತ್ತು ನಾಜ಼್ ತೀರ್ಪನ್ನು ಕುರಿತು ಸಂದರ್ಭೋಚಿತಗೊಳಿಸುವುದು, ಬೆಳಕು ಚೆಲ್ಲುವುದು ಮತ್ತು ವಿಶದಪಡಿಸುವುದು ಈ ಸಂಗ್ರಹದ ಉದ್ದೇಶವಾಗಿದೆ.

ವೈಜ್ಞಾನಿಕ ಮತ್ತು ವೈದ್ಯಕೀಯ ಸಾಹಿತ್ಯ

ನಿರ್ಣಯ ಕೈಗೊಳ್ಳಲು ನ್ಯಾಯಮೂರ್ತಿಗಳು ವೈಜ್ಞಾನಿಕ ಮತ್ತು ವೈದ್ಯಕೀಯ ಸಾಹಿತ್ಯವನ್ನು ಗಮನಿಸಿದರು. ಆ ನಿರ್ಣಯ ಇಂತಿದೆ:

"ಸಲಿಂಗಕಾಮವು ರೋಗ ಅಥವಾ ಅಸ್ವಸ್ಥತೆಯಾಗಲಿ ಅಲ್ಲ ಹಾಗೂ ಅದು ಮಾನವ ಲೈಂಗಿಕತೆಯ ಮತ್ತೊಂದು ಅಭಿವ್ಯಕ್ತಿ ಅಷ್ಟೆ ಎಂಬುದಕ್ಕೆ ಬಹುಮಟ್ಟಿಗೆ ಸರ್ವಾನುಮತದ ವೈದ್ಯಕೀಯ ಮತ್ತು ಮನಶಾಸ್ತ್ರೀಯ ಅಭಿಪ್ರಾಯಗಳಿವೆ. ಸಲಿಂಗಲೈಂಗಿಕತೆ ಮಾನಸಿಕ ಅಸ್ವಸ್ಥತೆಯಲ್ಲ ಎಂಬ ಸಾಕ್ಷಿಯ ಪರಾಮರ್ಶೆಯ ನಂತರ ೧೯೭೩ರಲ್ಲಿ ಮಾನಸಿಕ ಅಸ್ವಸ್ಥತೆಗಳ ಚಿಕಿತ್ಸೆ ಮತ್ತು ಸಾಂಖ್ಯಿಕ ಕೈಪಿಡಿಯಿಂದ ಸಲಿಂಗ ಲೈಂಗಿಕತೆಯನ್ನು ತೆಗೆದುಹಾಕಲಾಯಿತು. ೧೯೯೨ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ರೋಗಗಳ ಅಂತರ್‌ರಾಷ್ಟ್ರೀಯ ವಿಭಾಗೀಕರಣದಲ್ಲಿನ ಮಾನಸಿಕ ಕಾಯಿಲೆಗಳ ಪಟ್ಟಿಯಿಂದ ಸಲಿಂಗ ಲೈಂಗಿಕತೆಯನ್ನು ತೆಗೆದು ಹಾಕಿತು".

"ಸಲಿಂಗ ಲೈಂಗಿಕತೆಯು 'ವಾಸಿ' ಮಾಡುವ ಅಥವ 'ಬದಲಾಯಿಸುವ' ಅಗತ್ಯ ಅಥವಾ ಸಾಧ್ಯತೆ ಇರುವ ರೋಗ ಅಥವಾ ಮಾನಸಿಕ ಕಾಯಿಲೆ ಅಲ್ಲ" ಎಂಬ ನಿರ್ಧಾರವನ್ನು ಎತ್ತಿ ಹಿಡಿದ ಲಾರೆನ್ಸ್ ಟೆಕ್ಸಾಸ್ ಪ್ರಕರಣವನ್ನು ನ್ಯಾಯಮೂರ್ತಿಗಳು ಉಲ್ಲೇಖಿಸಿದರು. ಈ ಪ್ರಕರಣವನ್ನು ಅಮೆರಿಕನ್ ಸೈಕಿಯಾಟ್ರಿಕ್ ಅಸೋಸಿಯೇಷನ್ ರವರು ದಾಖಲಿಸಿದ್ದರು.

ಅಭಿವೃದ್ಧಿಶೀಲ ಅಂತರ್‌ರಾಷ್ಟ್ರೀಯ ಕಾನೂನಿನ ಬಳಕೆ

ಲೈಂಗಿಕ ಅಭಿವ್ಯಕ್ತತೆ ಮತ್ತು ಲಿಂಗ ಅಸ್ಮಿತೆಗೆ ಸಂಬಂಧ ಪಟ್ಟಂತೆ ಅನ್ವಯಿಸುವ ಮಾನವ ಹಕ್ಕುಗಳ ಕಾನೂನು ಕುರಿತ ಯೋಗ್ಯಕರ್ತ ತತ್ವಗಳನ್ನು ನ್ಯಾಯಮೂರ್ತಿಗಳು ಉಲ್ಲೇಖಿಸಿದರು.

"ತತ್ವಗಳ ಉದ್ದೇಶ, ಲೈಂಗಿಕ ಅಭಿವ್ಯಕ್ತತೆ ಅಥವ ಲಿಂಗ ಅಸ್ಮಿತೆ ಭೇದವಿಲ್ಲದೆ ಎಲ್ಲಾ ವ್ಯಕ್ತಿಗಳ ಮಾನವ ಹಕ್ಕುಗಳನ್ನು ಗೌರವಿಸಬೇಕಾಗಿರುವ, ರಕ್ಷಿಸಬೇಕಾಗಿರುವ ಮತ್ತು ಪೂರೈಸಬೇಕಾಗಿರುವ ಪ್ರಭುತ್ವದ ಜವಾಬ್ದಾರಿಯನ್ನು ಸಮಗ್ರವಾಗಿ, ಸಮಂಜಸವಾಗಿ ಗುರುತಿಸವುದಾಗಿದೆ" ವಿಶೇಷವಾಗಿ ಅವರು ಗಮನಿಸಿದ್ದು:

- "ಎಲ್ಲಾ ಲೈಂಗಿಕ ಅಭಿವ್ಯಕ್ತತೆ ಮತ್ತು ಲಿಂಗ ಅಸ್ಮಿತೆಗಳುಳ್ಳ ಮನುಷ್ಯ ಜೀವಿಗಳಿಗೂ ಎಲ್ಲಾ ಮಾನವ ಹಕ್ಕುಗಳನ್ನು ಪೂರ್ಣ ಅನುಭವಿಸುವ ಅಧಿಕಾರವಿದೆ;
- ಲೈಂಗಿಕ ಅಭಿವ್ಯಕ್ತತೆ ಅಥವಾ ಲಿಂಗ ಅಸ್ಮಿತೆ ಭೇದವಿಲ್ಲದೆ ಎಲ್ಲ ವ್ಯಕ್ತಿಗಳು ಖಾಸಗಿತನದ ಹಕ್ಕನ್ನು ಅನುಭವಿಸುವ ಅಧಿಕಾರವಿದೆ;
- ಲೈಂಗಿಕ ಅಭಿವ್ಯಕ್ತತೆ ಮತ್ತು ಲಿಂಗ ಅಸ್ಮಿತೆಯ ತಾರತಮ್ಯವಿಲ್ಲದೆ ಚುನಾವಣೆಗೆ ನಿಲ್ಲುವ ಅವರ ಕಲ್ಯಾಣಕ್ಕೆ ಸಂಬಂಧ ಪಟ್ಟ ನೀತಿಗಳ ರಚನೆಯಲ್ಲಿ ಭಾಗವಹಿಸುವ, ಸಾರ್ವಜನಿಕ ಸೇವೆಯ ಎಲ್ಲ ಹಂತಗಳಲ್ಲಿ ಸಮಾನ ಅವಕಾಶ ಪಡೆಯುವ, ಸಾರ್ವಜನಿಕ ಆಚರಣೆಗಳಲ್ಲಿ ಭಾಗಿಯಾಗುವ ಹಕ್ಕು ಪ್ರತಿಯೊಬ್ಬ ನಾಗರಿಕರಿಗಿದೆ; ಎಂಬುದನ್ನು ತತ್ವಗಳು ಗುರುತಿಸುತ್ತವೆ".

ಸಮಾನತೆಯ ತತ್ವಗಳ ಘೋಷಣೆ ೨೦೦೮

ಏಪ್ರಿಲ್ ೨೦೦೮ರಲ್ಲಿ ಈಕ್ವಲ್ ರೈಟ್ಸ್ ಟ್ರಸ್ಟ್ ನವರು ಹೊರಡಿಸಿದ 'ಸಮಾನತಾ ತತ್ವಗಳ ಘೋಷಣೆ'ಯನ್ನು ನ್ಯಾಯಮೂರ್ತಿಗಳು ಉಲ್ಲೇಖಿಸಿದರು. ಈ ಘೋಷಣೆಯನ್ನು ಸಮಾನತೆ ಕುರಿತಂತೆ ಪ್ರಸ್ತುತದಲ್ಲಿರುವ ಅಂತರ್‌ರಾಷ್ಟ್ರೀಯ ತಿಳುವಳಿಕೆ ಎಂದು ಕರೆಯಬಹುದು.

ಈ ತತ್ವಗಳ ಮೂಲಕ ಅವರು 'ಪರೋಕ್ಷ ತಾರತಮ್ಯ' ಭಾವನೆಗಳ ಮೇಲೆ ಬೆಳಕು ಚೆಲ್ಲಿದರು. ನ್ಯಾಯಮೂರ್ತಿಗಳು ಗಮನಿಸಿದ್ದು, "ತಾರತಮ್ಯ ಸಂಭವಿಸುವುದು ಇತರೆ ವ್ಯಕ್ತಿಗಳಿಗೆ ಹೋಲಿಸಿದಾಗ ಒಂದು ಅಥವಾ ಹೆಚ್ಚಿನ ನಿಷೇಧಿತ ಕಾರಣಗಳಿಗೆ ಸಂಬಂಧ ಪಟ್ಟ ಸ್ಥಾನ ಅಥವ ಲಕ್ಷಣ ಹೊಂದಿರುವ ವ್ಯಕ್ತಿಗಳನ್ನು ಒಂದು ನ್ಯಾಯ ಸಮ್ಮತ ಗುರಿಯಿಂದ ವಸ್ತುನಿಷ್ಟವಾಗಿ ಸಮರ್ಥಿಸಲ್ಪಟ್ಟಿವೆ ಹಾಗೂ ಎಂಬುದನ್ನು ಮಾತ್ರ ಹೊರತುಪಡಿಸಿದ ಅವಕಾಶ, ಪ್ರಮಾಣ ಅಥವಾ ಆಚರಣೆಯು ಅನಾನುಕೂಲತೆಗೆ ದೂಡಿದಾಗ. ಯಾವುದೇ ವ್ಯಕ್ತಿಯೊಬ್ಬರ ಘನತೆಯ ಉಲ್ಲಂಘನೆ ಅಥವಾ ಭೀತಿ, ದ್ವೇಷ, ಅಪಮಾನ,

ಕಳಂಕ ಅಥವಾ ಜಿಗುಪ್ಸೆಯ ವಾತಾವರಣ ಸೃಷ್ಟಿಸುವ ಉದ್ದೇಶ ಅಥವಾ ಅಂತಹ ಪರಿಣಾಮ ಹೊಂದಿದ್ದಾಗ ಕಿರುಕುಳವು ತಾರತಮ್ಯಕ್ಕೆ ಕಾರಣವಾಗುತ್ತದೆ

ತೀರ್ಪಿನ ಪ್ರಾದೇಶಿಕ ಅನ್ವಯನೀಯತೆ

ನ್ಯಾಯಲಯ ತೀರ್ಪು ಪ್ರಾದೇಶಿಕ ಮಟ್ಟಕ್ಕೆ ತಲುಪುವ ಬಗ್ಗೆ ವಿವಾದವಿದೆ. ಸಂವಿಧಾನದ ಉಲ್ಲಂಘನೆಗಾಗಿ ಸಂಸದೀಯ ಶಾಸನವನ್ನು ತೀರ್ಪು ಮಾರ್ಪಾಟು ಮಾಡಿರುವುದರಿಂದ ಅದು ಇಡೀ ದೇಶಕ್ಕೆ ಅನ್ವಯವಾಗಬೇಕೆಂಬ ಪ್ರಬಲವಾದ ವಾದವಿದೆ. ಒಂದು ಉಚ್ಚ ನ್ಯಾಯಲಯವು ಕಾನೂನೊಂದನ್ನು ಅಸಂವಿಧಾನಾತ್ಮಕ ಎಂದು ತೆಗೆದು ಹಾಕಿದಾಗ, ಇನ್ನೊಂದು ಉಚ್ಚ ನ್ಯಾಯಲಯವು ವಿರೋಧಾತ್ಮಕ ನಿಲುವು ವ್ಯಕ್ತಪಡಿಸುವವರೆಗೂ ಆ ಕಾನೂನು ಭಾರತದ ಎಲ್ಲ ಪ್ರದೇಶಗಳಲ್ಲೂ ಅಸಂವಿಧಾನಾತ್ಮಕವಾಗಿಯೇ ಇರುತ್ತದೆ ಎಂಬ ನಿಲುವನ್ನು ನ್ಯಾಯಿಕ ವಿವರಣೆಯು ಬೆಂಬಲಿಸುತ್ತದೆ. ಯಾಕೆಂದರೆ, ದೆಹಲಿಯಲ್ಲಿ ವಾಸಿಸುವವರು ಇತರ ಭಾರತೀಯ ನಾಗರಿಕರಿಗಿಂತ ಬಲವಾದ ಸಂವಿಧಾನಾತ್ಮಕ ಹಕ್ಕುಗಳನ್ನು ಹೊಂದಿದ್ದಾರೆಂಬುದು ವಿಲಕ್ಷಣ ಎನಿಸುತ್ತದೆ; ಸಂವಿಧಾನಾತ್ಮಕ ಹಕ್ಕುಗಳು ಸ್ವಾಭಾವತಃ ರಾಜ್ಯದ ಗಡಿಗಳನ್ನು ಗೌರವಿಸುವುದಿಲ್ಲ.

ಹಾಗಾದರೂ ದೆಹಲಿಯ ಉಚ್ಚ ನ್ಯಾಯಾಲಯವು ತನ್ನದೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯೊಳಗೆ ಮಾತ್ರ ಆದೇಶ ನೀಡಬಹುದು ಎಂಬ ಪ್ರತಿವಾದವಿದೆ. ಆದ್ದರಿಂದ, ಸರ್ವೋಚ್ಚ ನ್ಯಾಯಾಲಯವು ಆದೇಶ ನೀಡುವವರೆಗೂ ಇನ್ಯಾವುದೇ ಉಚ್ಚ ನ್ಯಾಯಾಲಯವು ದೆಹಲಿ ಉಚ್ಚ ನ್ಯಾಯಾಲಯದ ತೀರ್ಪನ್ನು ವಿರೋಧಿಸುವ ಸ್ವಾತಂತ್ರ್ಯ ಹೊಂದಿದೆ. ಇನ್ಯಾವುದೇ ನ್ಯಾಯಾಲಯ ಅಸಮ್ಮತಿ ವ್ಯಕ್ತ ಪಡಿಸಿದರೆ ಅದು ಕಲಮು ೩೭೭ ರ ಪ್ರಾದೇಶಿಕ ಅನ್ವಯತೆ ಕುರಿತು ಗೊಂದಲದ ವಾತಾವರಣ ನಿರ್ಮಿಸಬಹುದು. ಆದರೆ, ಸಧ್ಯಕ್ಕೆ ದೆಹಲಿ ಉಚ್ಚ ನ್ಯಾಯಾಲಯದ ತೀರ್ಪೇ ದೇಶದ ಕಾನೂನು ಹಾಗೂ ಅದು ಭಾರತದ ಉದ್ದಗಲಕ್ಕೂ ಅನ್ವಯವಾಗುತ್ತದೆ.

ಸ್ವಾತಂತ್ರ್ಯದ ಹಾದಿಯಲ್ಲಿ

ದೆಹಲಿ ಉಚ್ಚ ನ್ಯಾಯಾಲಯವು ಗುರುವಾರದಂದು ಕಲಮು ೩೭೭ನ್ನು ತೆಗೆದು ಹಾಕುವ ಐತಿಹಾಸಿಕ ತೀರ್ಪು ನೀಡಿತು. ಬಹು ಎಚ್ಚರಿಕೆಯಿಂದ ತೀರ್ಪಿನ ಪದಗಳನ್ನು ಆರಿಸಲಾಗಿದೆ. ಈ ತೀರ್ಪು

೧೯೪೬ರ ಸಂವಿಧಾನ ಕುರಿತ ಚರ್ಚೆಯನ್ನು ಉಲ್ಲೇಖಿಸುವ ಮೂಲಕ ಸಹಾಯವನ್ನು ಅರಸಿದ್ದು ಹಳೆಯ, ಮೂಲ ಗಳಿಗೆಯಲ್ಲಿ.

ಇದು ಮತ್ತೊಂದು ಭಾರತವನ್ನು ನೆನಪಿಸಿತು. ಸ್ವಲ್ಪ ಕಾಲದಲ್ಲೇ ಸ್ವಾತಂತ್ರ್ಯ ಪಡೆದುಕೊಳ್ಳಲ್ಲಿದ್ದ ಸಮಯದಲ್ಲಿ ಕಲ್ಪಿಸಿಕೊಂಡಿದ್ದ ಭಾರತವದು. ಆ ಚರ್ಚೆಯ ಸಂದರ್ಭದಲ್ಲಿ ನೆಹರೂರವರು, 'ಸಂವಿಧಾನವನ್ನು ಯಾವುದೇ ಸೀಮಿತ ನ್ಯಾಯಿಕ ಪದಗಳಿಂದ ನೋಡದೇ ಅದರ ಮೂಲ ಪ್ರೇರಣೆಯಲ್ಲಿ ಕಾಣಬೇಕು' ಎಂದು ಒತ್ತಾಯಿಸಿದ್ದರು. ಗುರುವಾರದಂದು ನ್ಯಾಯಮೂರ್ತಿಗಳಾದ ಷಾ ಮತ್ತು ಮುರುಳೀಧರ್ ಅವರು ಆ ಮೂಲ ಪ್ರೇರಣೆಯನ್ನು ಅರಸುವ ಪ್ರಯತ್ನ ಮಾಡಿದರು. "ಭಾರತೀಯ ಸಂವಿಧಾನದಲ್ಲಿ ಅಂತರ್ಗತವಾಗಿರಬಹುದಾದ ಒಂದು ಸಂವಿಧಾನಾತ್ಮಕ ತತ್ವವೇನಾದರೂ ಇದ್ದರೆ" ಅದು 'ಒಳಗೊಳ್ಳುವಿಕೆ' ಎಂದು ಅವರು ವಾದಿಸಿದರು. ಭಾರತೀಯ ಸಮಾಜದಲ್ಲಿ ಆಳವಾಗಿ ಬೇರೂರಿರುವ ಹಲವಾರು ತಲೆಮಾರುಗಳಿಂದ ಪೋಷಿಸಿಕೊಂಡು ಬಂದಿರುವ ಈ ಮೌಲ್ಯವನ್ನು ಭಾರತೀಯ ಸಂವಿಧಾನವು ಪ್ರತಿಬಿಂಬಿಸುತ್ತದೆ ಎಂದು ಈ ನ್ಯಾಯಾಲಯವು ನಂಬುತ್ತದೆ. ಮುಂದುವರೆದು ಅವರು: "ಭಾರತೀಯ ಸಂವಿಧಾನಾತ್ಮಕ ಕಾನೂನು ಬಂಧಿಯಾಗುವುದಕ್ಕೆ ಅನುವು ಮಾಡಿಕೊಡುವುದಿಲ್ಲ" ಎಂದು ವಾದಿಸಿದರು. ತಾರತಮ್ಯವೆನ್ನುವುದು ಸಮಾನತೆಯ ವಿರೋಧಿ ನೆಲೆಯಾಗಿದೆ ಹಾಗೂ ಸಮಾನತೆಯನ್ನು ಮಾನ್ಯ ಮಾಡುವುದೇ ಪ್ರತಿ ವ್ಯಕ್ತಿಯ ಘನತೆಯನ್ನು ಪೋಷಿಸುವುದು.

ನ್ಯಾಯಾಲಯ ೧, ದೆಹಲಿ ಉಚ್ಚ ನ್ಯಾಯಾಲಯದ ಪ್ರಕರಣಗಳ ಪಟ್ಟಿಯ ಮೊದಲನೆ ವಿಷಯ, ದಿನಾಂಕ ಜುಲೈ ೩, ಬೆಳ್ಳಿಗೆ ೧೦.೩೦ ಹೈಕೋರ್ಟ್ ಪಾಸ್ ಪಡೆದುಕೊಂಡಿದ್ದ ಕೆಲವು ಆ್ಯಕ್ಟಿವಿಸ್ಟ್‌ಗಳು ಕಲಮು ೩೭೭ರ ವಿರುದ್ಧ ಕಳೆದ ದಶಕದಿಂದ ನಡೆಯುತ್ತಿರುವ ಹೋರಾಟದ ಗಳಿಗೆಗಳನ್ನು ನೆನಪು ಮಾಡಿಕೊಳ್ಳುತ್ತಿದ್ದರು. ಈ ಕೆಲವು ಮಾತುಗಳು ಮತ್ತು ಎಲೆಕ್ಟ್ರಾನಿಕ್ ಪಾಸ್ ರಸೀದಿಯೊಂದಿಗೆ ಹಲವು ದಶಕಗಳ ಹೋರಾಟ, ಹಾಗೂ ಕಳೆದ ಎಂಟು ವರ್ಷಗಳ ಕಾನೂನಿನ ಹೋರಾಟ ಕೊನೆಯ ಹಂತಕ್ಕೆ ಬಂದಿತು. ಕೊನೆಗೆ ಸಾಕೆನಿಸಿತು. ತೀರ್ಪನ್ನು ಓದಿದಾಗ ಆ ಕೋಣೆಯೊಳಗಿನ ಭಾವನೆ ಅರಿವಾಗುತ್ತಿತ್ತು. ಕಣ್ಣೀರು ಹರಿದವು, 'ಗೆದ್ದೆವು' ಎಂಬುದಕ್ಕಲ್ಲ, ನಮ್ಮನ್ನು ಬಿಡುಗಡೆಗೊಳಿಸಿದ ತೀರ್ಪಿಗಾಗಿ. ಈ ತೀರ್ಪು ಘನತೆ ಕುರಿತ ತೀರ್ಪು. ನೆಹರು ಕಲ್ಪಿಸಿದ ಭಾರತ ಕುರಿತ ತೀರ್ಪು –ತನ್ನ ತೋಳುಗಳನ್ನು ಚಾಚಿ ತನ್ನೊಳಗೆ ಬದುಕುತ್ತಿರುವ ಎಲ್ಲರನ್ನೂ ತಬ್ಬಿಕೊಳ್ಳುವ ಭಾರತದ ಕಲ್ಪನೆಯದು. ಇದು ಸಾವಿರಾರು ಕ್ವೀರ್ ಭಾರತೀಯರ ಜೀವನದಲ್ಲಿ ಬೇರು ಹುಡುಕಿಕೊಳ್ಳುತ್ತಿರುವ ಸಮಾನತೆ, ಘನತೆ ಮತ್ತು ಹಕ್ಕುಗಳೆಂಬ

ಪದಗಳ ಕುರಿತದ್ದು. ಅವರಿಂದು ತಮ್ಮದೇ ದೇಶದ ನೆಲದ ಮೇಲೆ ತಮ್ಮ ಪಾದವಿರುವುದನ್ನು ಅನುಭವಸಬಲ್ಲರು.

ಈ ತೀರ್ಪು ಅಂಬೇಡ್ಕರೆಡಗಿನ ಮರು ಪಯಣ. ತನ್ನ ಕಲ್ಪನೆಯ ಸಂವಿಧಾನಕ್ಕಾಗಿ ಉತ್ಕಟವಾಗಿ ಹೋರಾಡಿದ ಅಂಬೇಡ್ಕರ್ ಅವರನ್ನು ನ್ಯಾಯಮೂರ್ತಿಗಳು ನಮಗೆ ನೆನಪಿಸಿದರು. ಅಂಬೇಡ್ಕರ್ ಅವರ ಭಾರತದಲ್ಲಿ ನಮ್ಮ ನೆಲದ ನ್ಯಾಯಾಲಯಗಳನ್ನು ಆಳಬೇಕಾಗಿರುವುದು "ಸಂವಿಧಾನಾತ್ಮಕ ನೈತಿಕತೆ"ಯ ಹೊರತು ಸಾರ್ವಜನಿಕ ನೈತಿಕತೆಯಲ್ಲ ಎಂದು ಅವರು ಉದ್ವೇಗದಿಂದ ಬರೆದರು. ಪ್ರಭುತ್ವದ ಆಸಕ್ತಿಯನ್ನು ಸಂವಿಧಾನದ ಪ್ರೇರಣೆಯು ನಿಯಂತ್ರಿಸಬೇಕೆ ಹೊರತು ಸಾರ್ವಜನಿಕ ನೈತಿಕತೆಯಲ್ಲ ಎಂದು ವಾದಿಸಿದರು. ಮುಂಬರುವ ದಿನಗಳಲ್ಲಿ ಮಾಧ್ಯಮ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ನೈತಿಕತೆ ಕುರಿತ ಚರ್ಚೆಯ ಮಹಾಪೂರವೇ ಹರಿಯಬಹುದು. ಆಗ ನಾವು ನೆನಪಿಟ್ಟುಕೊಳ್ಳಬೇಕಾಗಿರುವುದು, ವ್ಯಕ್ತಿಗಳಾಗಿ ಅಷ್ಟೇ ಅಲ್ಲ ನಾಗರಿಕರಾಗಿ ನಾವು ಹಂಚಿಕೊಳ್ಳುವ ನೈತಿಕತೆಯನ್ನ.

ಈ ತೀರ್ಪು ಸಮಾನತೆ ಕುರಿತದ್ದು. ಸಂವಿಧಾನದ ಪರಿಚ್ಛೇದ ೧೫ನ್ನು ಉಲ್ಲೇಖಿಸುತ್ತ ಅ-ತಾರತಮ್ಯ ಶಾಸನಗಳಲ್ಲಿ ಸಾಮಾನ್ಯವಾಗಿ ಬಳಸುತ್ತ ಬಂದಿರುವ 'ಲಿಂಗ' ಎಂಬುದು "ಲೈಂಗಿಕ ಅಭಿವ್ಯಕ್ತತೆ"ಯನ್ನು ಒಳಗೊಳ್ಳಬೇಕೆಂದು ನ್ಯಾಯಮೂರ್ತಿಗಳು ಆದೇಶಿಸಿದರು. ಈ ಲೈಂಗಿಕ ಅಭಿವ್ಯಕ್ತತೆಯನ್ನು ಸೇರಿಸಕೊಂಡು ಲಿಂಗ/ಲೈಂಗಿಕತೆ ಆಧರಿಸಿದ ಅ-ತಾರತಮ್ಯ ಶಾಸನವನ್ನು ಓದಬೇಕು. ತೀರ್ಪಿನಲ್ಲಿ ಪರಿಚ್ಛೇದ ೧೫ನ್ನು ಸೇರಿಸುವ ಮೂಲಕ ಕ್ವೀರ್ ಜನರನ್ನು ನಿರಪರಾಧಿಕರಣಗೋಲಿಸುವುದೆಂದರೆ ಏಕ ಕಾಲಕ್ಕೆ ಅವರನ್ನು ಉದ್ಯೋಗ, ಆಸ್ಪತ್ರೆ, ಮನೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಸಮಾನ ಗೌರವದಿಂದ ಕಾಣುವುದು ಎಂದು ನ್ಯಾಯಮೂರ್ತಿಗಳು ನಮಗೆ ನೆನಪಿಸಿದ್ದಾರೆ.

ಆದಾಗ್ಯೂ ಕ್ವೀರ್ ಜನರಾಗಷ್ಟೇ ಅಲ್ಲ, ನಮ್ಮ ಲೈಂಗಿಕತೆ, ಲಿಂಗ, ಧರ್ಮ, ಜಾತಿ, ಭಾಷೆ ಅಥವಾ ಪ್ರದೇಶ ಏನೇ ಆಗಿರಲಿ ಭಾರತೀಯರಾಗಿ ನಾವು ಈ ತೀರ್ಪನ್ನು ಹೇಗೆ ಓದುತ್ತೇವೆ? ದೇಶದ ಉದ್ದಗಲಕ್ಕೂ ಚಳುವಳಿಗಳು ತಮ್ಮ ಹಕ್ಕುಗಳಿಗಾಗಿ ಹೋರಾಡಿವೆ, ಹೋರಾದುತ್ತ ಬಂದಿವೆ. ಸರ್ಕಾರ ಮತ್ತು "ವ್ಯವಸ್ಥೆ" ಕುರಿತ ಹತಾಶೆ ಸಾಮಾನ್ಯ. ಭಾರತದಲ್ಲಿ, ಅದರಲ್ಲೂ ತನ್ನ ಹೊಳಪಿನಲ್ಲಿ ಇಲ್ಲಿನ

ನಿವಾಸಿಗಳಿಂದ ಪ್ರತ್ಯೇಕಗೊಂಡಿರುವ ಹೊಸ ಭಾರತದಲ್ಲಿ ಬದಲಾವಣೆ ಸಾಧ್ಯವೇ ಇಲ್ಲವೆಂದು ಹಲವರು ವಾದಿಸಿದ್ದರು.

ಈ ತೀರ್ಪು, ವ್ಯವಸ್ಥೆ ಕುರಿತ ನಂಬಿಕೆಯನ್ನು ಮರುಸ್ಥಾಪಿಸಿದೆ. ನನ್ನನ್ನೂ ಸೇರಿದಂತೆ ನಮ್ಮಂತಹ ಹಲವರಿಗೆ ನಂಬಿಕೆ ಕಳೆದುಕೊಳ್ಳುವುದು ಬಹಳ ಸುಲಭ. ಸಂವಿಧಾನವಿನ್ನೂ ಜೀವಂತವಾಗಿದೆ ಮತ್ತು ಚಳುವಳಿಗಳು, ಹೋರಾಟಗಳು ಕೆಲವೊಮ್ಮೆ ವಿಜಯದ ದಿನಗಳಲ್ಲಿ ಕೊನೆಯಾಗುತ್ತವೆ ಎಂಬುದನ್ನು ಈ ತೀರ್ಪು ಜ್ಞಾಪಿಸಿದೆ. ಕ್ವೀರ್ ಹಕ್ಕುಗಳಷ್ಟೇ ಅಲ್ಲ ಎಲ್ಲ ಭಾರತೀಯರ, ಎಲ್ಲ ಹಕ್ಕುಗಳನ್ನು ರಕ್ಷಿಸಲ್ಪಟ್ಟಿರುವುದರಿಂದ ಎಲ್ಲ ಭಾರತೀಯರೂ ಸಂಭ್ರಮಿಸಬೇಕು.

ಮುಂದೆ ಜಾಗೃತರಾಗಿರಬೇಕೆಂಬುದು ನಮಗೆ ನೆನಪಿದೆ. ಕ್ವೀರ್ ಚಳುವಳಿ ಬಹಳ ಹಿಂದೆಯೇ, ಕ್ವೀರ್ ಜನರ ಘನತೆಯನ್ನು ನ್ಯಾಯಾಲಯದ ಕೋಣೆಯೊಳಗೆ ಜಯಿಸಲಾಗದು ಎಂದು ಹೇಳಿದೆ. ನಮ್ಮ ಹೋರಾಟವಿರುವುದು ಜನ ಜೀವನದಲ್ಲಿ ಸಲಿಂಗ ಭೀತಿಯ ಪರಿಣಾಮ ಹೊಂದಿರುವ ಕುಟುಂಬಗಳು, ಚಿಕಿತ್ಸಾಲಯಗಳು, ಪೋಲಿಸ್ ಠಾಣೆಗಳು, ಕಛೇರಿಗಳು ಮತ್ತು ನಗರದ ಬೀದಿಗಳಂತಹ ಸ್ಥಳಗಳಲ್ಲಿ. ಈ ಸ್ಥಳಗಳಲ್ಲಿ ಕಾನೂನಿನಿಂದಾಗಿ ರಾತ್ರೋರಾತ್ರಿ ಬದಲಾವಣೆಯಾಗುವುದಿಲ್ಲ. ಹೋರಾಟ ಮುಗಿಯುವುದು ಇನ್ನೂ ದೂರದ ಮಾತು. ಈ ತೀರ್ಪು ನಮ್ಮನ್ನು ಒಗ್ಗೂಡಿಸಿರುವುದು ಸತ್ಯ. ಸಾರ್ವಜನಿಕರ ಅಭಿಪ್ರಾಯವನ್ನು ಬದಲಾಯಿಸಬೇಕೆಂಬ ನಮ್ಮ ಚರ್ಚೆ ನಡೆಯಬೇಕಾಗಿರುವುದು ನಾಗರಿಕ ನಡುವೆ ಸಮಾನರಾಗಿ, ಸಮಾನ ನೆಲೆಯಲ್ಲಿ. ನಮ್ಮ ಬಳಿ ಈಗಿರುವುದು ಈ ತೀರ್ಪಿನ ಮಾತುಗಳು ಮತ್ತು ಅವನ್ನು ನ್ಯಾಯಾಲಯದ ಹೊರಗೆ ಜೀವಂತಗೊಳಿಸುವ ಅವಕಾಶ.

ಬಹುದೊಡ್ಡ ಬದಲಾವಣೆಯಾಗುವುದು ಕ್ವೀರ್ ಜನರ ಎದೆಯೊಳಗೆ, ಮನದೊಳಗೆ. ನಮ್ಮನ್ನು ನಾವೇ ಒಪ್ಪಿಕೊಳ್ಳುವ, ನಮ್ಮ ಬಗ್ಗೆ ನಾವೇ ಅವಮಾನಪಡದ, ಹಕ್ಕುಗಳನ್ನು ಹೊಂದುವ ಹಕ್ಕು ನಮಗಿದೆ ಎಂದು ನಂಬುವ ಪ್ರಕ್ರಿಯೆಯು ದೀರ್ಘವಾದುದು, ಒಂಟಿಯಾದುದು. ಸಮಾನ ನಾಗರಿಕರೆಂದು ನಮ್ಮ ಬಗ್ಗೆ ನಾವೇ ಯೋಚಿಸುವ ಪ್ರಕ್ರಿಯೆ ಇನ್ನೂ ದೀರ್ಘವಾದುದು. ಹರೆಯದ ಕ್ವೀರ್ ಹೆಣ್ಣು ಮಗಳು ಕನ್ನಡಿಯಲ್ಲಿದ್ದಾಗ ಏನನ್ನು ನೋಡುತ್ತಾಳೆಂಬುದನ್ನು ಈ ತೀರ್ಪು ಬದಲಾಯಿಸುತ್ತದೆ. ಅದರರ್ಥವೇನೆಂದು ಅಥವಾ ಅದೆಷ್ಟು ಅಮೂಲ್ಯ ಎಂಬುದನ್ನು ಹೇಳಲು ಪದಗಳಿಲ್ಲ.

ಇತ್ತೀಚೆಗೆ ಕಲಮು ೩೭೭ನ್ನು ಕುರಿತು ಮಾತನಾಡಿದ ಭಾರತ ಸರ್ಕಾರ ಮತ್ತದರ ಸಚಿವರುಗಳು 'ಒಮ್ಮತಕ್ಕೆ' ಬರಲು ತೀರ್ಪನ್ನು ಆಳವಾಗಿ ಓದಲೇ ಬೇಕು. ಈ ತೀರ್ಪನ ಯಾವ ತತ್ವವನ್ನು ಪರಿಗಣಿಸಬೇಕು, ಬೀಡಬೇಕು ಎಂಬುದನ್ನು ಅವರಿಗವರೇ ಕೇಳಿಕೊಳ್ಳಬೇಕು. ಅಂಬೇಡ್ಕರ್ ಮತ್ತು ನೆಹರೂರವರು ಅವರ ಸದನದಲ್ಲಿ ಮುತ್ಸದ್ದಿಗಳನ್ನು ಕಲ್ಪಿಸಿಕೊಂಡಿದ್ದರು. ಅವರು ಕಲ್ಪಿಸಿದ್ದ ಸದನಕ್ಕೆ ಅವರು ನಮ್ಮೆಲ್ಲರೊಂದಿಗೆ ಹಿಂತಿರುಗುವ ದಿನ ಬಂದಿದೆ.

ಒಳಗೊಳ್ಳುವಿಕೆ, ಮೌಲ್ಯಗಳು, ಸಹನೆ, ಸಂವಿಧಾನಾತ್ಮಕ ನೈತಿಕತೆ, ಸಮಾನತೆ, ಈ ಪದಗಳು ಹಿಂದಿನ ಭಾರತದ ಕಲ್ಪನೆಯಲ್ಲಿ ಕ್ವೀರ್ ಜನರು ಅಥವಾ ಸಲಿಂಗ ಲೈಂಗಿಕತೆ ಕುರಿತದ್ದಷ್ಟೇ ಆಗಿರಲಿಲ್ಲ. ಇವು ಇಂದು ಮತ್ತೆ ಭಾರತೀಯ ಪದಗಳಾಗುತ್ತ ಮೊದಲ ಹೆಜ್ಜೆ ಆಗಿವೆ. ಇವು ಹಲವಾರು "ಸಮರ್ಥುತ್ತಿರುವ" ಭಾರತೀಯ ಸಂಸ್ಕೃತಿಯಲ್ಲಿ ಅಂತರ್ಗತವಾಗಿರುವ ಮೌಲ್ಯಗಳೆಂದು ನ್ಯಾಯಮೂರ್ತಿಗಳು ನಮಗೆ ನೆನಪಿಸಿದ್ದಾರೆ. ಈ ತೀರ್ಪನ್ನು ನಾವೆಲ್ಲರೂ ಸಲಿಂಗಿಯಾಗಿರಲಿ, ಪರಲಿಂಗಿಯಾಗಿರಲಿ, ಲೈಂಗಿಕತೆ ಮತ್ತು ಸಲಿಂಗ ಲೈಂಗಿಕತೆ ಕುರಿತು ನಾವೇನೇ ಯೋಚಿಸಲಿ, ಜಾತ್ಯಾತೀತ, ಪ್ರಜಾಸತ್ತಾತ್ಮಕ, ಸಂವಿಧಾನಾತ್ಮಕ ಮತ್ತು ಸ್ವತಂತ್ರ ಭಾರತಕ್ಕೆ ಸಂದ ವಿಜಯವೆಂದು ಕಾಣಬೇಕು, ನಾವೆಲ್ಲರೂ ಹೆಮ್ಮೆ ಪಡಬೇಕು. ಇಂದು ಕ್ವೀರ್ ಜನರು ಅಂತಿಮವಾಗಿ, ಹೆಮ್ಮೆಯಿಂದ, ಸಂತೋಷದಿಂದ, ಜೊತೆಗೆ ದಿನ ನಿತ್ಯದ ಭಾರತೀಯರು ಸ್ವತಂತ್ರರಾಗಿದ್ದಾರೆ, ಸಮಾನರಾಗಿದ್ದಾರೆ ಹಾಗೂ ಎಲ್ಲ ದಿನದಂತಲ್ಲದ ದಿನದ ಗಾಳಿಯನ್ನು ಆಳವಾಗಿ ಉಸಿರಾಡುತ್ತಿದ್ದಾರೆ. ಇಂದು ಕ್ವೀರ್ ಜನರು ಸಹ ನಾಗರಿಕರು. ಇವರಿಂದು ತಮ್ಮ ಪಾದದಡಿಯ ನೆಲದ ಕಾವನ್ನು ಅನುಭವಿಸುತ್ತಿದ್ದಾರೆ.

೧.೨೬ ಪರಾಮರ್ಶನ ಗ್ರಂಥಗಳು

ಪುರುಷ– ಪುರುಷ ಸಲಿಂಗ ಕಾಮವನ್ನು ಇಂಗ್ಲೀಷ್‌ನಲ್ಲಿ 'ಗೇ' ಎಂದು ಕರೆಯುವರು. ಸ್ತ್ರೀ ಸಲಿಂಗಕಾಮ ಹಾಗು ಪುರುಷಸಲಿಂಗಕಾಮವು ಅನಾದಿ ಕಾಲದಿಂದಲೂ ಅಸ್ತಿತ್ವದಲ್ಲಿದೆ ಎಂದು ಹೇಳಬಹುದು. ಸ್ತ್ರೀಸಲಿಂಗಕಾಮಿಗಳೇ ವಾಸಿಸುತ್ತಿದ್ದ 'ಲೆಸ್ಬಾಸ್' ದ್ವೀಪದ ವರ್ಣನೆ ದೊರೆಯುತ್ತದೆ. ಹಾಗು ಲೆಸ್ಬಾಸ್ ದ್ವೀಪ ವಾಸಿಗಳನ್ನು ಲೆಸ್ಬಿಯನ್ಸ್ ಎಂದು ಕರೆದರು. ಈ ದ್ವೀಪದಲ್ಲಿ ಗ್ರೀಕ್ ಮಹಾಕವಯತ್ರಿ ಸ್ಯಾಪ್ಪೋ, ಸ್ತ್ರೀಸಲಿಂಗಕಾಮದ ಮುಕ್ತವಾಗಿ ಕಾವ್ಯವನ್ನು ಬರೆದಿರುವಳು. ಸ್ತ್ರೀ ಸಲಿಂಗಕಾಮವನ್ನು ವೈಭವೀಕರಿಸಿ ಬರೆದಿರುವಳು (ಸೋಮೇಶ್ವರ, ೨೦೧೦: ೭೩).

ಭಾರತ ದೇಶದಲ್ಲಿ ಐ.ಪಿ.ಸಿ ೩೭೭ ನೇಸೆಕ್ಷನ್ ಪ್ರಕಾರ ನಾವು ಅಪರಾಧಿಗಳು.ಈ ಸೆಕ್ಷನ್ ಅಡಿ ಅಸಹಜ ಲೈಂಗಿಕ ಕ್ರಿಯೆಗಳಿಗೆ ಜೀವಾವಧಿ ಶಿಕ್ಷೆ ವಿಧಿಸಬಹುದಾಗಿದೆ. ಯಾಕೆ ಇಷ್ಟೊಂದು ವ್ಯತ್ಯಾಸ? ವಾತ್ಸಾಯನನ ಕಾಲದಲ್ಲಿ ನಮ್ಮ ದೇಶದಲ್ಲಿ ಸ್ವಲಿಂಗ ಸಂಪರ್ಕವಿತ್ತು ಎಂದು ಕೆಲವು ದೇವಾಲಯಗಳ ಗೋಡೆಗಳ ಮೇಲೆ ಕಾಣಿಸುವ ಪುರುಷ ಸಂಭೋಗ ಶಿಲ್ಪಗಳು ತಿಳಿಸುತ್ತಿವೆ. ಆ ನಂತರ ಅದನ್ನು ಯಾಕೆ ಅಪರಾಧವನ್ನಾಗಿ ಪರಿಗಣಿಸಲಾಯಿತು? ಯಾಕಿದನ್ನು ಕತ್ತಲ ವ್ಯವಹಾರವಾಗಿ ಭಾವಿಸುತ್ತಾರೆ?

ಈಗಲಾದರು ಹೀಗೆ ಹೊರಬಂದು ಮಾತನಾಡಲು ಕಾರಣ ಎಚ್.ಐ.ವಿ./ಏಡ್ಸ್. ಇದು ಇಲ್ಲದಿದ್ದಲ್ಲಿ ಬಹುಶಃ ಈ ದಿನ ಸಹ ಇಂತಹ ಸಂದರ್ಭ ಸಿಗುತಿರಲಿಲ್ಲ. ಇದು ಒಳ್ಳೆಯದಕ್ಕೊ ಕೆಟ್ಟದಕ್ಕೋ? ಕಾಲವೇ ನಿರ್ಣಯಿಸಬೇಕು. ಒಂದು ವಿಷಯದಲ್ಲಿ ಮಾತ್ರ ನಾವು ಸ್ಪಷ್ಟವಾಗಿದ್ದೇವೆ. ನಮ್ಮ ಜೀವನಕ್ಕಾಗಿ ಇತರರಿಗೆ ಯಾವುದೇ ರೀತಿಯ ನಷ್ಟ ಉಂಟಾಗದಿರಲು ನಾವು ಈಗ ಈ ರೀತಿ ಹೊರ ಬಂದಿದ್ದೇವೆ. ಅರ್ಥಮಾಡಿಕೊಳ್ಳುತ್ತಾರೆಂಬಾಸೆ... ನಾವು ನಿಮ್ಮ ಜೊತೆ ಸಾಧಾರಣ ಪೌರರಾಗಿ ಬೆರೆತು ಬದುಕಬೇಕೆಂಬ ನಮ್ಮ ಆಸೆ, ಆಕಾಂಕ್ಷೆ ನಮ್ಮನ್ನು ಇವತ್ತು ಹೀಗೆ ಮಾತನಾಡಲು ಪ್ರೇರೇಪಿಸಿದೆ”. (ಹೈದರಾಬಾದ್ ನಲ್ಲಿ ಪುರುಷ ಸ್ವಲಿಂಗ ಸಂಪರ್ಕವಿರುವವರು ತಮ್ಮ ನೋವನ್ನು ಹೇಳಿಕೊಳ್ಳಲು ಏರ್ಪಾಡುಮಾಡಿದ ಸಮಾವೇಷದ ಮಾತುಗಳು (ಕ್ರೈಂ ನ್ಯೂಸ್ ಸೆಪ್ತಂಬರ್ ೨೦೦೯).

ಪವಿತ್ರ ಖುರ್‌ಆನ್, ಹದೀಸ್ ಗ್ರಂಥಗಳು ಮತ್ತು ಇಸ್ಲಾಮೀ ಚರಿತ್ರೆ ಗ್ರಂಥಗಳಲ್ಲಿ ಸಲಿಂಗಕಾಮವನ್ನು ಪ್ರಾರಂಭಿಸಿದವರು ಯಾರು ಎಂಬುವುದನ್ನು ಸ್ಪಷ್ಟವಾಗಿ ಪ್ರತಿಪಾದಿಸಲಾಗಿದೆ. ಪ್ರಕೃತಿ ವಿರುದ್ಧವಾದ ಸಲಿಂಗಕಾಮ ಅಥವಾ ಸಲಿಂಗರತಿಯನ್ನು ಪ್ರಾರಂಭಿಸಿದ್ದು ಪ್ರವಾದಿ ಲೂತ್ವ್ (ಅ) ರವರ ಸತ್ಯನಿಷೇಧಿಗಳಾದ ಜನತೆಯಾಗಿತ್ತು. ಇಂದಿನ ಜೋರ್ಡಾನ್ ಮತ್ತು ಫೆಲಸ್ತೀನ್‌ನ ನಡುವೆ ನೆಲೆಸಿರುವ ಸದೂಮ್ ಎಂಬ ನಾಡಿನಿಂದ ಈ ಪ್ರಕೃತಿ ವಿರುದ್ದವಾದ ದುಷ್ಕೃತ್ಯವು ಪ್ರಾರಂಭವಾಯಿತು (ಇಸ್ಮಾಈಲ್ ೨೦೧೦: ೭೩).

ಸಲಿಂಗಕಾಮವನ್ನು ಮೊಟ್ಟಮೊದಲು ಹುಟ್ಟು ಹಾಕಿದವರು ಯಾರು? ಮತ್ತು ಅದು ಎಲ್ಲಿ ಪ್ರಾರಂಭವಾಯಿತು ಎಂಬುವುದರ ಬಗ್ಗೆ ಮುಸ್ಲಿಮರಿಗೆ ಅದರಲ್ಲೂ ಧಾರ್ಮಿಕ ಜ್ಞಾನವುಳ್ಳವರಿಗೆ ಸ್ಪಷ್ಟವಾಗಿ ತಿಳಿದಿದೆ. ಪವಿತ್ರ ಖುರ್‌ಆನ್, ಹದೀಸ್ ಗ್ರಂಥಗಳು ಮತ್ತು ಇಸ್ಲಾಮೀ ಚರಿತ್ರೆ ಗ್ರಂಥಗಳಲ್ಲಿ

ಸಲಿಂಗಕಾಮವನ್ನು ಪ್ರಾರಂಭಿಸಿದವರು ಯಾರು ಎಂಬುವುದನ್ನು ಸ್ಪಷ್ಟವಾಗಿ ಪ್ರತಿಪಾದಿಸಲಾಗಿದೆ (ಇಸ್ಮಾಈಲ್ ೨೦೧೦: ೭೩).

ಸಲಿಂಗರತಿಯನ್ನು ಪ್ರಾರಂಭಿಸಿದ್ದು ಪ್ರವಾದಿ ಲೂತ್ವ್ (ಬಿ) ರವರ ಸತ್ಯನಿಷೇಧಿಗಳಾದ ಜನತೆಯಾಗಿತ್ತು.ಇಂದಿನ ಜೋರ್ಡಾನ್ ಮತ್ತು ಫೆಲಸ್ತೀನ್ ನಡುವೆ ನೆಲೆಸಿರುವ ಸದೂಮ್ ಎಂಬ ನಾಡಿನಿಂದ ಈ ಪ್ರಕೃತಿ ವಿರುದ್ಧವಾದ ದುಷ್ಕೃತ್ಯವು ಪ್ರಾರಂಭವಾಯಿತು. ಇಂದು ಜನರು ಆ ಪ್ರದೇಶದಲ್ಲಿ ಡೆಡ್ ಸೀ (ಮೃತ್ಯು ಸಮುದ್ರ) ಎಂಬ ವಿಚಿತ್ರವನ್ನು ನೋಡಲು ಹೋಗುತ್ತಾರೆ.

ಪ್ರವಾದಿ ಲೂತ್ವ್(ಅ) ರವರು ಪ್ರವಾದಿ ಇಬ್ರಾಹಿಂ(ಅ)ರವರ ಸಹೋದರ ಹಾರಾನ್ ರವರ ಪುತ್ರರಾಗಿದ್ದಾರೆ. ಪ್ರವಾದಿ ಲೂತ್ವ್(ಅ)ರವರಿಗೆ ಪ್ರವಾದಿತ್ವ ಲಭಿಸುವುದಕ್ಕಿಂತ ಮುಂಚೆ ಅವರು ಪ್ರವಾದಿ ಇಬ್ರಾಹಿಂರವರ ಜೊತೆಯಲ್ಲೇ ವಾಸಿಸುತ್ತಿದ್ದರು. ಪ್ರವಾದಿ ಇಬ್ರಾಹಿಂ(ಅ) ರವರು ಫೆಲಸ್ತೀನ್‌ಗೆ ವಲಸೆ ಬಂದ ಬಳಿಕ ಅವರಿಗೆ ಪ್ರವಾದಿತ್ವ ಲಭಿಸಿತು. ಅಲ್ಲಿಂದಲೇ ಅವರನ್ನು ಸದೂಮ್ ಜನಾಂಗಕ್ಕೆ ಪ್ರವಾದಿಯಾಗಿ ನಿಯೋಗಿಸಲಾಯಿತು. ಸದೂಮ್ ನಾಡಿನಲ್ಲಿ ನೆಲೆಸಿದ್ದ ಜನರು ಧಿಕ್ಕಾರಿಗಳೂ ನೀಚರೂ ಆಗಿದ್ದರು. ವಿಗ್ರಹಾರಾಧನೆ, ಕೊಲೆ, ಸುಲಿಗೆಯೊಂದಿಗೆ ಗುದ ಸಂಭೋಗದಂತಹ ಹೇಯ ಕೃತ್ಯವನ್ನು ಅವರು ಎಸಗುತ್ತಿದ್ದರು. ಸುಂದರ ಹುಡುಗರನ್ನೋ ತರುಣರನ್ನೋ ಕಂಡರೆ ಅವರ ಮೇಲೆ ಎಗರಿಬಿದ್ದು ತಮ್ಮ ಕಾಮ ತೃಷೆಯನ್ನು ತೀರಿಸುತ್ತಿದ್ದರು. ಇದು ಕೆಲವೊಮ್ಮೆ ಏಕಾಂಗಿಯಾಗಿಯೂ ಸಾಮೂಹಿಕವಾಗಿಯೂ ನಡೆಯುತ್ತಿತ್ತು.

ಪ್ರಸ್ತುತ ಸಲಿಂಗರತಿಯನ್ನು ಸದೂಮ್ ಜನಾಂಗವೇ ಹುಟ್ಟು ಹಾಕಿತ್ತೇ? ಅದಕ್ಕಿಂತ ಮುಂಚಿನವರು ಈ ದುಷ್ಕೃತ್ಯವನ್ನು ಎಸಗಿರುವ ಸಾಧ್ಯತೆಯಿಲ್ಲವೇ? ಅಷ್ಟಕ್ಕೂ ಈ ಜನಾಂಗದಿಂದಲೇ ಪ್ರಾರಂಭವಾಯಿತು ಎನ್ನುವುದಕ್ಕೆ ಪುರಾವೆಯೇನು? ಎಂಬ ಪ್ರಶ್ನೆಗಳಿಗೆ ಪವಿತ್ರ ಖುರ್‌ಆನಿನಲ್ಲಿ ಸ್ಪಷ್ಟವಾದ ಉತ್ತರವಿದೆ. "ಇನ್ನು ಲೂತ್ವ್‌ರನ್ನು (ನಾವು ಪ್ರವಾದಿಯನ್ನಾಗಿ ಕಳುಹಿಸಿದೆವು) ಅವರು ತನ್ನ ಜನಾಂಗದವರಿಗೆ ಹೇಳಿದ ಸಂದರ್ಭ. ನೀವು ಅನೈತಿಕತೆ ಎಸಗುತ್ತಿರುವಿರಾ? ಲೋಕದಲ್ಲಿ ಹಿಂದೆಂದೂ ಯಾವೊಬ್ಬನಿಂದಲೂ ನಡೆಯದ ದುಷ್ಕೃತ್ಯವಿದು. ಸ್ತ್ರೀಯರ ಬದಲಿಗೆ ನಿಜವಾಗಿಯೂ ಕಾಮೋದ್ರಿಕ್ತರಾಗಿ ಪುರುಷರನ್ನು ಸಂಪರ್ಕಿಸುತ್ತಿರುವಿರಿ. ನೀವು ಹದ್ದು ಮೀರಿದ ಜನಾಂಗವಾಗಿರುವಿರಿ" (ಅಲ್‌ರಾಫ್–೮೦)

ಪ್ರಸ್ತುತ ಸೂಕ್ತದಿಂದ ಸದೂಮ್ ಜನಾಂಗವೇ ಮನುಕುಲಕ್ಕೆ ಅದುವರೆಗೂ ಪರಿಚಯವಿಲ್ಲದ ಸಲಿಂಗಕಾಮವನ್ನು ಪ್ರಾರಂಭಿಸಿತ್ತೆಂದು ತಿಳಿದು ಬರುತ್ತದೆ (ಇಸ್ಮಾಈಲ್ ೨೦೧೦: ೧೪).

ಬೈಬಲ್ಲಿನ ಬುಕ್ ಆಫ್ ಜೆನೆಸಿಸ್ ನಲ್ಲಿ ಸೋಡಮ್ ಮತ್ತು ಗೋಮೊರ ನಗರಗಳ ಪ್ರಸ್ತಾಪ ಬರುತ್ತದೆ. ಈ ನಗರವಾಸಿಗಳು ಪುರುಷ ಸಲಿಂಗಕಾಮದಲ್ಲಿ ತೊಡಗಿದ್ದರು. ಈ ಅಸಹಜ ನಡವಳಿಕೆಯನ್ನು ನೋಡಿ ದೇವರು ಈ ಎರಡೂ ನಗರಗಳ ಮೇಲೆ ಬೆಂಕಿಯ ಮಳೆಗರೆದು ನಾಶಗೊಳಿಸುತ್ತಾನೆ (ಸೋಮೇಶ್ವರ ೨೦೧೦ ೭೩).

ಪ್ರಾಚೀನ ಗ್ರೀಕ್ ದೇಶಗಳಲ್ಲಿ ಸಲಿಂಗಕಾಮ ಅಂಗೀಕಾರವೇ ಅಲ್ಲದೆ, ಪ್ರೋತ್ಸಾಹವನ್ನು ಕೂಡಾ ಹೊಂದಿತ್ತು. ಬೆಳೆದವರಿಗೂ, ಆಗ ತಾನೇ ಯೌವನದಲ್ಲಿ ಹೆಜ್ಜೆಯಿರಿಸಿದ ಹುಡುಗರಿಗೂ ಮಧ್ಯೆ ಸಲಿಂಗ ಸಂಪರ್ಕ ಸಾಮಾನ್ಯವಾದ ವಿಷಯವಾಗಿತ್ತು. ಯುವಕರ ನೈತಿಕತೆಯ ಬಗ್ಗೆ ಹೇಳಬೇಕಾಗಿದ್ದ ವಯಸ್ಕ ಈ ಸಲಿಂಗಕಾಮದಲ್ಲಿ ಮುಕ್ತವಾಗಿ ನಡೆದುಕೊಳ್ಳುತ್ತಿದ್ದ. ಆ ಕಾಲದಲ್ಲಿ ಈ ವಿಷಯವನ್ನು ಒಂದು ಶೈಕ್ಷಣಿಕಕ್ಕೆ ಸಂಬಂಧಿಸಿದಂತೆಯೇ ಕಾಣಲಾಗುತ್ತಿತ್ತು. ಅದೇ ಸಮಯದಲ್ಲಿ ಬೇರೆ ಇಬ್ಬರು ವ್ಯಕ್ತಿಗಳ ನಡುವೆ ಸಲಿಂಗ ಕಾಮವನ್ನು ಅನುಮೋದಿಸುತ್ತಿರಲಿಲ್ಲ. (ಟನ್ನಾ ಹಿಲ್, ೧೯೮೦; ಕಮಲಾಕರ೨೦೧೦ ೦೬).

ಲೈಂಗಿಕತೆಗೆ ಸಂಬದಪಟ್ಟಂತೆ ಲೈಂಗಿಕತೆ ಲೈಂಗಿಕ ಅಲ್ಪಸಂಖ್ಯಾತರು ಎತ್ತುತ್ತಿರುವ ಪ್ರಶ್ನೆಗಳು ಸಾಂಪ್ರದಾಯಿಕ ಲೈಂಗಿಕ ಅಭಿವ್ಯಕ್ತಿಯ ಹಿಂದಿರುವ ಸನಾತನ ಧೋರಣೆಗಳನ್ನು, ಮೌಲ್ಯಗಳನ್ನು ಪ್ರಶ್ನಿಸುತ್ತವೆ. ಸಹಜವಾದ ನೈಸರ್ಗಿಕ ಸಂಬಂಧವೆಂದರೇನು? ಹಿಜಡಾಗಳು, ದ್ವಿಲಿಂಗಿಗಳು, ಪುರುಷ–ಪುರುಷರ ನಡುವಿನ, ಮಹಿಳೆ –ಮಹಿಳೆಯರ ನಡುವಿನ ಲೈಂಗಿಕ ಸಂಬಂಧಗಳು ನಮ್ಮ ಸಂಸ್ಕೃತಿಯ ಇತಿಹಾಸದಲ್ಲಿ ಇಲ್ಲವೆ? ಇದು ಸಹಜ ಹಾಗು ನೈಸರ್ಗಿಕವಾದುದಲ್ಲವೆ? ಇಂತಹ ಲೈಂಗಿಕ ಅಭಿವ್ಯಕ್ತಿಯನ್ನು ಬಹುಸಂಖ್ಯಾತರ ಸಾಂಸ್ಕೃತಿಕ ಮೌಲ್ಯಗಳ ನೈತಿಕತೆಯ ಹಿನ್ನೆಲೆಯಲ್ಲಿ ಮರೆ ಮಾಚುವುದೇಕೆ? ಎಂಬುದು ಲೈಂಗಿಕ ಅಲ್ಪಸಂಖ್ಯಾತರ ಸವಾಲು (ತರಬೇತಿ ಸಾಮಾಗ್ರಿ೨೦೦೮).

ಲೈಂಗಿಕ ಅಲ್ಪಸಂಖ್ಯಾತರು, ಹೀಯಾಳಿಕೆಗೆ, ಅವಮಾನಕ್ಕೆ, ಅಪಹಾಸ್ಯಕ್ಕೊಳಗಾಗುವ ಗುಂಪುಗಳಾಗಿ ಪರಿಗಣಿಸಲ್ಪಟ್ಟಿದ್ದಾರೆ. ಅವರ ದೈಹಿಕ ವ್ಯತ್ಯಾಸಗಳನ್ನು, ಲೈಂಗಿಕ ಅಭಿವ್ಯಕ್ತಿಯನ್ನು ವಿಕೃತ ನಡವಳಿಕೆಯೆಂದು, ರೋಗಗ್ರಸ್ತವೆಂದು 'ವಿಕಲಾಂಗತೆ' ಎಂದು ಕರೆಯಲಾಗುತ್ತದೆ. ಸಮಾಜದ

ಸ್ವಾಸ್ಥ್ಯವನ್ನು ಕಾಪಾಡಬೇಕೆಂದರೆ ಈ ರೋಗಕ್ಕೆ ಚಿಕಿತ್ಸೆ ನೀಡಬೇಕೆಂಬುದು ಸಂಪ್ರದಾಯಸ್ಥ ಬಹುಸಂಖ್ಯಾತರ ನಿಲುವು. ಈ ಪೂರ್ವಾಗ್ರಹ ಪೀಡಿತ ನೋಟದಿಂದಾಗಿ ಲೈಂಗಿಕ ಅಲ್ಪಸಂಖ್ಯಾತರು ಮೂಲಭೂತ ಹಕ್ಕುಗಳು, ಸೌಕರ್ಯಗಳಿಂದ ಸಂಪೂರ್ಣವಾಗಿ ವಂಚಿತರಾಗಿ ಭೀತಿ, ಕಳಂಕದ ಕರಿ ನೆರಳಲ್ಲಿ ಬದುಕುವ ಜೀವಿಗಳಾಗಿದ್ದಾರೆ. ರಕ್ಷಣೆಯಿಲ್ಲದೆ ಅವರ ಬದುಕು ಅತಂತ್ರವಾಗಿದೆ (ನಮ್ಮ ಮಾನಸ ಆಗಷ್ಟ, ೨೦೦೯).

ಹೆಂಗಸು-ಹೆಂಗಸಿನೊಂದಿಗೆ, ಗಂಡಸು-ಗಂಡಸಿನೊಂದಿಗೆ ಹಾಗೂ ಹೆಂಗಸು-ಗಂಡಸಿನೊಂದಿಗೆ ಲೈಂಗಿಕ ಸಂಬಂಧವಿರುವುದು ನಮ್ಮ ಅನುಭವದಿಂದ ತಿಳಿದಿದೆ. ಎಲ್ಲಾ ಜಾತಿ, ವರ್ಗಗಳಲ್ಲೂ, ಹಳ್ಳಿ ನಗರಗಳಲ್ಲೂಸಲಿಂಗ ಕಾಮದ ಸಂಬಂಧಗಳಿವೆಯೆಂದು ನಮಗೆ ತಿಳಿದಿದೆ. ನಮ್ಮ ಸಾಂಪ್ರದಾಯಕ ದೇವಾಲಯಗಳ ಶಿಲ್ಪಗಳು (ಉದಾ: ಖಜುರಾಹೋ) ಸಲಿಂಗ ಕಾಮ ಕುರಿತು ಹೇಳುತ್ತವೆ. ನಮ್ಮ ಪ್ರಾಚೀನ ಗ್ರಂಥವಾದ ಕಾಮಸೂತ್ರವು ಸಲಿಂಗ ಕಾಮಕ್ಕೆ ಧರ್ಮಶಾಸ್ತ್ರಗಳಲ್ಲಿ ಒಪ್ಪಿಗೆ ಪಡೆದಿತ್ತೆಂಬುದನ್ನು ಕುರಿತು ಹೇಳುತ್ತದೆ. ನಮ್ಮ ಸಾಂಪ್ರದಾಯಿಕ ಆಚರಣೆಗಳಾದ ಜೋಗತಿ, ಜೋಗಪ್ಪ, ಹಿಜಡಾ, ಶಿವಶಕ್ತಿ ಮತ್ತು ತಂತ್ರಗಳು ಸಲಿಂಗಕಾಮವನ್ನು ನೂರಾರು ವರ್ಷಗಳಿಂದ ಆಚರಿಸುತ್ತಾ ಬಂದಿವೆ.

ಹೆಚ್ಚು ಕಡಿಮೆ ನಮ್ಮ ದೇಶದ ವೈದ್ಯಕೀಯ ವ್ಯವಸ್ಥೆಯು ಸಲಿಂಗ ಕಾಮವನ್ನು ಖಾಯಿಲೆ ಎಂದು ಪರಿಗಣಿಸಿ, ಎಲೆಕ್ಟ್ರಿಕ್ ಶಾಕ್ ನೀಡುವುದರ ಮೂಲಕ ಮಾನಸಿಕ ಅಸ್ವಸ್ಥತೆಯ ಔಷಧಿಗಳನ್ನು ನೀಡುವ ಮೂಲಕ, ಆ ಬಗ್ಗೆ ಅಸಹ್ಯ ಥೆರಪಿಗಳ ಮೂಲಕ,ಸರಿಪಡಿಸಬಹುದೆಂದು ಭಾವಿಸುತ್ತದೆ. ಜೈಲು, ಆಸ್ಪತ್ರೆ, ನ್ಯಾಯಾಲಯ ಮತ್ತು ಸಮೂಹ ಒಟ್ಟಾರೆ ಸಂಚು ನಡೆಸಿ ನಮ್ಮ ಮನಸ್ಸಿನಲ್ಲಿ ನಾವು ರೋಗಿಗಳು, ದುರ್ಮಾರ್ಗಿಗಳು, ನೀತಿಗೆಟ್ಟವರು, ಅಸಹಜರು ಎಂಬ ಭಾವನೆಯನ್ನು ಹುಟ್ಟಿಸುತ್ತದೆ. ಸಾಮಾಜಿಕ ನಿಯಮವನ್ನು ಬಿಟ್ಟು ನಮ್ಮದೆ ರೀತಿಯಲ್ಲಿ ಲೈಂಗಿಕತೆಯನ್ನು ಹೊಂದುವುದು ನಮ್ಮಲ್ಲೇ ಅನುಮಾನ, ಪಾಪಪ್ರಜ್ಞೆ, ನಮ್ಮನ್ನೇ ದ್ವೇಷಿಸಿಕೊಳ್ಳುವುದನ್ನು ಹುಟ್ಟು ಹಾಕುತ್ತದೆ. ಅವರಿಗೆ ಅವರೇ ಮೋಸಮಾಡಿಕೊಂಡು ದ್ವಂದ್ವ ಬದುಕನ್ನು ನಡೆಸುವಂತೆ ಮಾಡುತ್ತದೆ. ಅವರ ಬಗ್ಗೆ ಅವರೇ ಅಗೌರವಿಸಿಕೊಳ್ಳುತ್ತಾ, ಮಾನಸಿಕ ಖಿನ್ನತೆ ಬೆಳೆಸಿಕೊಳ್ಳುತ್ತಾರೆ. ಈ ಖಿನ್ನತೆಯಿಂದ ಕೆಲವರು ಆತ್ಮಹತ್ಯೆಯ ದಾರಿ ಹಿಡಿಯುವುದುಂಟು (ಕ್ರೈಂ ನ್ಯೂಸ್ ೨೦೦೯).

ಖಾಯಿಲೆ ಇರುವುದು, ಸಲಿಂಗ ಕಾಮವನ್ನು ಅಪರಾಧೀಕರಣಗೊಳಿಸುವ ಸಮಾಜದಲ್ಲಿದೆ. ಎಷ್ಟೋ ದೇಶಗಳಲ್ಲಿ ಕಾನೂನುಗಳು ಬದಲಾಗಿ ಸಲಿಂಗಕಾಮ ಒಪ್ಪಿತವಾಗಿದೆ. ಅಂತರಾಷ್ಟ್ರೀಯ ಸಂಸ್ಥೆ (W.H.O) ಮತ್ತು ಅಮೇರಿಕಾದಮಾನಸಿಕ ಆರೋಗ್ಯ ಸಂಸ್ಥೆಯು (American Phychiatric Association) ಸಲಿಂಗ ಕಾಮವನ್ನು ಸಹಜ ಅಭ್ಯಾಸವೆಂದು ಪರಿಗಣಿಸಿದೆ.

ಪ್ರತಿಯೊಬ್ಬ ವ್ಯಕ್ತಿಗೂ (ಹೆಣ್ಣಿರಲಿ, ಗಂಡಿರಲಿ) ತನ್ನದೇ ಆದ ಲೈಂಗಿಕ ಭಾವನೆಗಳು, ವರ್ತನೆಗಳು, ನಂಬಿಕೆಗಳು ಮತ್ತು ಅವುಗಳ ಅಭಿವ್ಯಕ್ತಿಯ ಸ್ವಾತಂತ್ರ್ಯವಿರುತ್ತದೆ. ಇದು ಆ ವ್ಯಕ್ತಿಯ ವ್ಯಕ್ತಿಗತ ವೈಯಕ್ತಿಕ ಅನುಭವಗಳು ಹಾಗೂ ಸುತ್ತಮುತ್ತಲಿನ ಪರಿಸರದ, ಸಮಾಜದ ಪ್ರಭಾವವನ್ನು ಅವಲಂಬಿಸಿರುತ್ತದೆ. ಮಗು ಹುಟ್ಟಿದಾಗ ಹೆಣ್ಣು ಅಥವಾ ಗಂಡು ಎಂದು ಲಿಂಗ ನಿರ್ಧಾರವಾದ ಅನಂತರ ಅದು ಹೆಣ್ಣಾಗಿ ಅಥವ ಗಂಡಾಗಿ ಬೆಳೆಯಲು ತಂದೆ– ತಾಯಿ, ಪೋಷಕರು, ಸ್ನೇಹಿತರು, ಶಿಕ್ಷಕರು ಮತ್ತು ಸುತ್ತಲಿನ ಸಮಾಜ ಮುಖ್ಯ ಪಾತ್ರ ವಹಿಸುತ್ತದೆ. ಆ ವರ್ಗಕ್ಕೆ (ಹೆಣ್ಣು ಅಥವಾ ಗಂಡು) ಸಂಬಂಧಪಟ್ಟಂತೆ ಮಾತುಕತೆ, ಉಡುಗೆ – ತೊಡುಗೆ, ಆಟಗಳು, ನಡೆವಳಿಕೆ ಇವೆಲ್ಲದರ ಪ್ರಭಾವವೂ ಇರುತ್ತದೆ. ಮಗುವು ಕಿಶೋರಾವಸ್ಥೆ, ಬಾಲ್ಯಾವಸ್ಥೆ, ಪ್ರೌಢಾವಸ್ಥೆಗಳಿಗೆ ಕಾಲಿಟ್ಟಾಗ, ಸಂದರ್ಭಕ್ಕೆ ತಕ್ಕಂತೆ ಶಾರೀರಿಕ, ಮಾನಸಿಕ ಬದಲಾವಣೆಗಳಾಗಿ ಅದರ ಲೈಂಗಿಕತೆಗೆ, ಲಿಂಗ ಸಂಬಧಿತ ನಡವಳಿಕೆ, ಭಾವನೆಗಳಿಗೆ ಸರಿಯಾದ ಆಯಾಮ ದೊರೆಯುತ್ತದೆ. ಇದು ಮಗುವು ಸ್ತ್ರೀ ಅಥವಾ ಪುರುಷನಾಗಿ ಮಾರ್ಪಾಡಾಗುವ ರೀತಿ, ಈ ರೀತಿಯಲ್ಲಿ ಸಮಾಜ ಎರಡು ಲಿಂಗಗಲನ್ನು ಮಾತ್ರ ಗುರುತ್ತಿಸುತ್ತದೆ. ಇವಲ್ಲದೆ ಮೂರನೆಯ ಲೈಂಗಿಕ ವಿಭಾಗವೊಂದು ಇರಬಹುದು ಎನ್ನುವುದನ್ನು ಜನಸಾಮಾನ್ಯರು ಒಪ್ಪಿಕೊಳ್ಳಲಾರರು, ಹಾಗೆ ಒಪ್ಪಿಕೊಳ್ಳಲು ಸಮಾಜವೂ ಹಿಂಜರಿಯುತ್ತದೆ (ಪ್ರಸಾದ್ ೨೦೦೮: ೬).

ಕೆಲವೊಮ್ಮೆ ತಮ್ಮದಲ್ಲದ ತಪ್ಪಿಗೆ, ಜನನಾಂಗಗಳ ಬೆಳವಣಿಗೆಯ ನ್ಯೂನತೆಯಿಂದಾಗಿಯೋ, ಲೈಂಗಿಕ ಅಭಿವ್ಯಕ್ತತೆಯ ತೊಂದರೆಯಿಂದಲೋ, ವರ್ಣತಂತುವಿನ ತೊಂದರೆಯ ಪರಿಣಾಮದಿಂದಲೋ, ಅಥವಾ ಮಾನಸಿಕ ಅಸ್ವಸ್ಥತೆಯ ಕಾರಣದಿಂದಾಗಿಯೋ, ಕೆಲವರಿಗೆ ಮಾತ್ರ ಪರಿಪೂರ್ಣ ಹೆಣ್ಣು ಅಥವಾ ಪರಿಪೂರ್ಣ ಗಂಡಾಗಿರಲು ಸಾಧ್ಯವಾಗುವುದಿಲ್ಲ.

ಇಂಥ ಗುಂಪಿಗೆ ಸೇರಿದ, ಶಾರೀರಿಕವಾಗಿ ಗಂಡಸಾಗಿದ್ದು, ಹೆಣ್ಣಾಗುವ ಆಸೆ, ಮನಃಸ್ಥಿತಿ ಹೊಂದಿರುವ (ಗಂಡಿನ ದೇಹದಲ್ಲಿ ಸೆರೆಯಾಗಿರುವ ಹೆಣ್ಣು) ವ್ಯಕ್ತಿಗಳು ಮತ್ತು ಜನನಾಂಗದ ನ್ಯೂನತೆ

ಇರುವ ವ್ಯಕ್ತಿಗಳು ತಮ್ಮದೇ ಆದ ಒಂದು ಗುಂಪಾಗಿ ಬದುಕು ನಡೆಸಿದ್ದಾರೆ.ಇವರೇ ಹಿಜಿಡಾಗಳು, ಹಿಜಿಡಾಗಳಲ್ಲಿ ಬಹಳಷ್ಟು ಜನ ವೃಷಣ, ಶಿಶ್ನಗಳ ಛೇದವಾಗಿರುವ ಮತ್ತು ಹೆಣ್ಣಿನಂತೆ ವೇಷ ಧರಿಸುವ ಆಸೆವುಳ್ಳ ಗಂಡಸರು, ಕೆಲವರು ಅಪರೂಪವೆನ್ನಿಸುವ ಉಭಯ ಲಿಂಗಿಗಳಾಗಿರುತ್ತಾರೆ.ಕೆಳವರ್ಗ, ಮಧ್ಯಮವರ್ಗಗಳಿಂದ ಬಂದ ಹಿಜಿಡಾಗಳು ಮನೆಬಿಟ್ಟು ಹೊರಬಂದು ಅವರದೇ ಒಂದು ಜನಾಂಗವಾಗಿ ಬದುಕು ತೊಡಗಿದಾಗ ಅವರಿಗೆ ಜೀವನ ನಿರ್ವಹಣೆಗೆ, ಹಣ ಸಂಪಾದನೆಗೆ ಇರುವ ಮಾರ್ಗ ಭಿಕ್ಷಾಟನೆ ಅಥವಾ ಲೈಂಗಿಕ ವೃತ್ತಿಯಾಗಿರುತ್ತದೆ. ಏಕೆಂದರೆ, ಅವರಿಗೆ ಯಾರೂ ಸಾಮಾನ್ಯವಾಗಿ ಉದ್ಯೋಗ ನೀಡುವುದಿಲ್ಲ. ಮನೆಯವರೂ ತಮ್ಮಲ್ಲಿ ಒಬ್ಬರೆಂದು ಒಪ್ಪಿಕೊಳ್ಳಲೂ ಸಿದ್ಧರಿರುವುದಿಲ್ಲ. ವೈಜ್ಞಾನಿಕವಾಗಿ, ವೈದ್ಯಕೀಯವಾಗಿ ಒಬ್ಬ ವ್ಯಕ್ತಿ ಹಿಜಿಡಾ ಆಗಲು ಮೂರು ಕಾರಣಗಳಿವೆ. ಅವೆಂದರೆ: (೧) ಬೆಳವಣಿಗೆಯಲ್ಲಿನ ನ್ಯೂನತೆ, (೨) ಬದಲುಡುಗೆಯ ಮೂಲಕ ಲೈಂಗಿಕ ಅಭಿವ್ಯಕ್ತತೆ, (೩) ಬದಲೀ ಲಿಂಗದ ಅಭಿವ್ಯಕ್ತತೆ.

ಇತಿಹಾಸದಲ್ಲಿ, ಅನಾದಿಕಾಲದಿಂದಲೂ ಶಿಖಂಡಿ, ನಪುಂಸಕ ಎಂದು ಕರೆಯಿಸಿಕೊಳ್ಳುತ್ತಿದ್ದ ವ್ಯಕ್ತಿಗಳು ಇರುವುದನ್ನು ಕಂಡಿದ್ದೇವೆ, ಕೇಳಿದ್ದೇವೆ. ರಾಜ ಮಹಾರಾಜರ ಅಂತಃಪುರಗಳನ್ನು ಕಾಯಲು ನಪುಂಸಕರನ್ನು ನೇಮಿಸಿಕೊಳ್ಳುತ್ತಿದ್ದುದು ಅವರಿಂಗ ಅಂತಃಪುರದಲ್ಲಿನ ರಾಣಿಯರ ಲೈಂಗಿಕ ಅತ್ಯಾಚಾರವಾಗುವುದಿಲ್ಲವೆಂಬ ನಂಬಿಕೆಯಿಂದ. ಪಾಶ್ಚಾತ್ಯರು ನಪುಂಸಕರನ್ನು ಹಾಡು ಹೇಳುವ ಗುಂಪುಗಳಲ್ಲಿ ಸೇರಿಸಿಕೊಳ್ಳುತ್ತಿದ್ದರು. ನಮ್ಮ ದೇಶದಲ್ಲಿನ ಹಲವಾರು ಶಿಲ್ಪಕಲೆಗಳಲ್ಲಿ ಶಿಖಂಡಿಗಳ ಚಿತ್ರಣವಿರುವುದನ್ನು ನೋಡಬಹುದು. ಇಂಥ ಶಿಖಂಡಿಗಳಿಗೆ ಯಾವುದೋ ಅಗೋಚರ ಶಕ್ತಿ ಇದೆ. ಅದರಿಂದ ಅವರು ಸಾಮಾನ್ಯ ಜನರನ್ನು ಆಶೀರ್ವದಿಸುವ ಸಾಮರ್ಥ್ಯವನ್ನು ಪಡೆದಿರುತ್ತಾರೆ ಎಂದೆಲ್ಲಾ ನಂಬಿದ್ದರು (ಪ್ರಸಾದ್ ೨೦೦೮:೭).

ಕೆಲವು ಕಾರಣಗಳಿಂದಾಗಿ, ಉದಾಹರಣೆಗೆ, ವಂಶವಾಹಿನಿಯಲ್ಲಿನ ತೊಂದರೆ, ವರ್ಣತಂತುವಿನ ತೊಂದರೆ, ಗರ್ಭಿಣಿಯಾದವಳು ಕೆಲವು ರಾಸಾಯನಿಕ ಔಷಧಗಳ ಸೇವನೆಯಿಂದ ಅಥವಾ ಎಕ್ಸ್-ರೇಯಿಂದಾಗಿ, ನ್ಯೂನತೆಯುಳ್ಳ ಗರ್ಭವನ್ನು ಹೊಂದಿದ್ದರೆ, ಕೆಲವು ಸಂದರ್ಭಗಳಲ್ಲಿ ಹುಟ್ಟಿದ ಮಗು ಹೆಣ್ಣು ಅಥವಾ ಗಂಡು ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಇದರಿಂದ ಲಿಂಗ ತಪ್ಪಾಗಬಹುದು. ಅಂಥ ಮಕ್ಕಳಲ್ಲಿ ಹೆಣ್ಣು ಮತ್ತು ಗಂಡಿಗೆ ಸಂಬಂಧಿಸಿದ ಅವಯವಗಳೆಲ್ಲವೂ ಇರಬಹುದು.

ಅಂಡಾಶಯ, ಗರ್ಭಕೋಶ ಮತ್ತು ವೃಷಣಗಳೂ ಇರಬಹುದು. ಇಂಥ ಮಕ್ಕಳನ್ನೇ ಮುಂದೆ ನಪುಂಸಕ, ಶಿಖಂಡಿ, ಉಭಯ ಲಿಂಗಿ, ನಿರಿಂದ್ರಿಯ ಎಂದೆಲ್ಲಾ ಕರೆಯುವುದು.

ಶರೀರದ ಇತರ ಅಂಗಗಳ ನ್ಯೂನತೆಗಳನ್ನು ಒಪ್ಪಿಕೊಂಡು ಅವರೊಡನೆ ಸಹಕರಿಸುವ ಸಮಾಜ, ಲೈಂಗಿಕ ನ್ಯೂನತೆಗಳಿರುವವರನ್ನೂ ಒಪ್ಪಿಕೊಂಡು ಅವರ ದೈಹಿಕ, ಮಾನಸಿಕ, ಲೈಂಗಿಕ ಬೆಳವಣಿಗೆಗಳಿಗೆ ಅನುಕೂಲವಾಗುವಂತೆ ಸಹಕರಿಸುವುದು ಕಷ್ಟವಾದರೂ ಮುಖ್ಯದ್ದಾಗಿದೆ. ಹುಟ್ಟಿದಾಗ ಹೆಣ್ಣು ಅಥವಾ ಗಂಡು ಎಂದುಕೊಂಡ ಮಗು ಹದಿಹರೆಯಕ್ಕೆ ಕಾಲಿಟ್ಟಾಗ ತನ್ನ ದೇಹದಲ್ಲಿ ವಿರುದ್ಧ ಲೈಂಗಿಕ ಬೆಳವಣಿಗೆ, ಅದಕ್ಕೆ ಪೂರಕ ಭಾವನೆಗಳು ಮೂಡುವುದನ್ನು ಗುರುತಿಸುವಂತಾಗಬಹುದು. ಅಂಥ ಸಮಯದಲ್ಲಿ ಮತ್ತೊಮ್ಮೆ ಲೈಂಗಿಕ ಅವಯವಗಳು, ಹಾರ್ಮೋನ್‌ಗಳು, ಮಾನಸಿಕ ಪರಿಸ್ಥಿತಿ ಇವುಗಳನ್ನು ಅಭ್ಯಸಿಸಿ ಅದಕ್ಕೆ ಪೂರವಾದ ಲಿಂಗ ನಿರ್ಧಾರಿತ ಶಸ್ತ್ರಚಿಕಿತ್ಸೆಯನ್ನು ಮಾಡಿಸಿ ಆ ವ್ಯಕ್ತಿಯ ಸರಿಯಾದ ಲಿಂಗವನ್ನು ತಿಳಿಸಬೇಕಾಗುತ್ತದೆ. ಇದಕ್ಕಾಗಿ ಲಿಂಗ ಬದಲಾವಣೆ ಶಸ್ತ್ರಚಿಕಿತ್ಸೆಯನ್ನು ಮಾಡಿಸಬೇಕಾಗುತ್ತದೆ. ಇದು ದುಬಾರಿ ಮತ್ತು ಸಾಮಾನ್ಯರಿಗೆ ಕಷ್ಟಕವಾಗುವುದರಿಂದ, ಇಂಥ ವ್ಯಕ್ತಿಗಳು ಮನೆಯ ವಾತಾವರಣದಿಂದ ದೂರ ಸರಿದು (ಅಥವಾ ಕೆಲವೊಮ್ಮೆ ಹೊರಹಾಕಲ್ಪಟ್ಟು) ಹಿಜಿಡಾ ಸಮುದಾಯವನ್ನು ಸೇರುವಂತಾಗಬಹುದು (ಪ್ರಸಾದ್ ೨೦೦೮:೮).

ಶಾರೀರಿಕವಾಗಿ ಗಂಡಾಗಿದ್ದರೂ ಕೆಲವರಲ್ಲಿ ತಾವು ಹೆಣ್ಣಾಗಿರಬೇಕೆಂಬ ತೀವ್ರವಾದ ಹಂಬಲ ಮನಸ್ಸಿನಲ್ಲಿ ಬೇರೂರಿರುತ್ತದೆ. ಅವರು 'ಗಂಡು ದೇಹದಲ್ಲಿ ಬಂದಿಯಾದ ಹೆಣ್ಣು' ಆಗಿರುತ್ತಾರೆ. ಈ ಭಾವನೆ ೧೨-೧೩ ವರ್ಷ ವಯಸ್ಸಿನಲ್ಲಿ ಪ್ರಾರಂಭವಾಗಿ ೧೮-೨೦ ವರ್ಷಗಳ ವೇಳೆಗೆ ಮನಸ್ಸಿನಲ್ಲಿ ಬಲವಾಗಿ ಬೇರೂರಬಹುದು. ಆ ಸಮಯದಲ್ಲಿ ಅವರು ಹೆಣ್ಣಿನಂತೆ ಅಲಂಕರಿಸಿಕೊಳ್ಳುವುದು ಅವರಂತೆ ಹಾವಭಾವ ತೋರುವುದು, ಹೆಣ್ಣಿನಂತೆಯೇ ಇದ್ದು ಗಂಡಸರೊಡನೆ ಲೈಂಗಿಕ ಆಕರ್ಷಣೆಯನ್ನು ಹೊಂದುವುದು ಮುಂತಾದ ಲೈಂಗಿಕ ಅಭಿವ್ಯಕ್ತತೆಯನ್ನು ತೋರಬಹುದು. ಈ ರೀತಿ ಹೆಣ್ಣು ವೇಷ ಧರಿಸುವುದನ್ನು 'ಟ್ರಾನ್ಸ್‌ವೆಸ್ಟಿಸಮ್' ಎನ್ನುತ್ತಾರೆ. ಒಂದು ಸಮಯದಲ್ಲಿ ಇಂಥ ವ್ಯಕ್ತಿಗೆ ತಾನು ಹೆಣ್ಣಾಗಬೇಕೆಂಬ ಬಯಕೆ ಎಷ್ಟು ತೀವ್ರವಾಗಿರುತ್ತದೆಯೆಂದರೆ, ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳಲು ಮುಂದಾಗುತ್ತಾನೆ (ಟ್ರಾನ್ಸ್‌ಜೆಂಡರ್ ಅಥವಾ ಟ್ರಾನ್ಸ್‌ಸೆಕ್ಸ್ಯುವಲ್). ಇದರಲ್ಲಿ ಪ್ರಮುಖವಾದ ಘಟ್ಟವೆಂದರೆ 'ನಿರ್ವಾಣ' ಅಥವಾ ವೃಷಣಗಳನ್ನು ಛೇದಿಸಿಕೊಳ್ಳುವುದು ಮತ್ತು ಶಿಶ್ನವನ್ನು ತೆಗೆಸಿಹಾಕುವುದು. ಕೆಲವರು ಸ್ತನಗಳ ಕಸಿ ಮಾಡಿಸಿಕೊಳ್ಳುತ್ತಾರೆ. ಮತ್ತೆ ಕೆಲವರು ಸ್ತ್ರೀ

ಹಾರ್ಮೋನುಗಳನ್ನು ಸೇವಿಸುತ್ತಾರೆ. ಇದು ಸ್ತನಗಳ ಗಾತ್ರವನ್ನು ಹೆಚ್ಚಿಸುತ್ತದೆ. ಇಂಥ ಪುರುಷ ಜನನಾಂಗಗಳ ಛೇದನ ಮಾಡಿಸಿಕೊಂಡು ಹೆಣ್ಣಿನಂತೆ ವೇಷ ಭೂಷಣಗಳನ್ನು ತೊಟ್ಟು ಜೀವನ ನಡೆಸುವವರೇ ಹಿಜಡಾಗಳು. ಬರಿಯ ಜನನಾಂಗಗಳ ಛೇದನ ಮಾಡಿಸಿ ಸ್ತ್ರೀವೇಷ ಧರಿಸದೇ ಇರುವವರಿಗೆ ಶಿಖಂಡಿಗಳು ಎನ್ನುತ್ತಾರೆ.

ಸಲಿಂಗ ವರ್ತನೆಯನ್ನು ಪಾಶ್ಚಾತ್ಯರಲ್ಲಿ ಹಾಗೂ ನಮ್ಮಲ್ಲಿ ಮೇಲ್ಪಟ್ಟದ ವರ್ಗದ ಜನಗಳ ಒಂದು ನಡೆವಳಿಕೆ ಎಂದು ತಿಳಿದಿದ್ದಾರೆ. ಕೆಲವರು ಇದನ್ನು ಒಂದು ಕಾಯಿಲೆ, ವಿಕೃತಿ ಎಂದೂ, ಇನ್ನೂ ಕೆಲವರು ಇದನ್ನು ಅಪರಾಧ ಎಂದೂ ತಿಳಿದಿದ್ದಾರೆ. ವೈಜ್ಞಾನಿಕವಾಗಿ ಸಲಿಂಗ ಕಾಮದ ಬಗ್ಗೆ ಬಹಳಷ್ಟು ಅಧ್ಯಯನಗಳು, ಪ್ರಯೋಗಗಳನ್ನು ನಡೆಸಲಾಗಿದೆ. ಮನೋರೋಗ ತಜ್ಞರ ಸಂಘಗಳು ಸಲಿಂಗ ವರ್ತನೆಯನ್ನು ಕಾಯಿಲೆಗಳ ಗುಂಪಿನಿಂದ ತೆಗೆದು ಹಾಕಿವೆ. ಏಕೆಂದರೆ, ಅದು ಒಂದು ಮಾನಸಿಕ, ಭಾವನಾತ್ಮಕ ಸ್ಥಿತಿ ಮತ್ತು ಲೈಂಗಿಕ ಅಭಿವ್ಯಕ್ತಿಯ ಒಂದು ಕ್ರಮ. ಇದಕ್ಕೆ ಸ್ಪಷ್ಟವಾದ ಕಾರಣ ಇದುವರೆಗೂ ತಿಳಿದಿಲ್ಲ. ವಂಶವಾಹಿನಿ ತೊಂದರೆ, ಲೈಂಗಿಕ ಬೆಳವಣಿಗೆಯಲ್ಲಿರುವ ನ್ಯೂನತೆ, ಭದ್ರತೆಯಿಲ್ಲದ ಜೀವನಕ್ರಮ, ಸ್ತ್ರೀಯರೊಡನೆ ಹೆಚ್ಚಿನ ಒಡನಾಟ, ಚಿಕ್ಕವಯಸ್ಸಿನಿಂದಲೇ ಬದಲುಡುಗೆಯನ್ನು ಹಾಕುವುದು (ತಂದೆ ತಾಯಂದಿರು ಗಂಡು ಮಕ್ಕಳಿಗೆ ಹುಡುಗಿಯಂತೆ ವೇಷ ಹಾಕಿ ಸಂತೋಷಪಡುವುದು), ಹುಡುಗಿಯರ ಆಟ-ಪಾಠಗಳಲ್ಲಿ ಆಸಕ್ತಿ ತೋರಿಸುವುದು ಇತ್ಯಾದಿ. ಮನೆಯವರ ಛೇಡಿಕೆ, ಕೀಟಲೆ ಮುಂತಾದವುಗಳು ಇಂಥ ನಡೆವಳಿಕೆಗೆ ಕೆಲವರಲ್ಲಿ ಕಾರಣವಾದರೂ ನೇರ ಕಾರಣ, ವೈಜ್ಞಾನಿಕ ಸ್ಪಷ್ಟನೆ ಇದುವರೆಗೆ ದೊರೆತಿಲ್ಲ.

ಸಲಿಂಗಕಾಮಿಗಳಲ್ಲಿ ಭಿನ್ನ ಲಿಂಗದ ಮೋಹದ ಹಂತದವರಿಗೆ ಅವರ ವ್ಯಕ್ತಿತ್ವದ ಬೆಳವಣಿಗೆ ಆಗಿರುವುದಿಲ್ಲ.

ಈ ರೀತಿ ಮಾನಸಿಕವಾಗಿ, ಭಾವನಾತ್ಮಕವಾಗಿ ಭಿನ್ನವಾಗಿರುವುದು ಆ ವ್ಯಕ್ತಿಯ ತಪ್ಪಲ್ಲ. ತನ್ನ ಲೈಂಗಿಕತೆಯ ಬಗ್ಗೆ ಎಷ್ಟು ಒತ್ತಡ ಇರುತ್ತದೆ ಎಂದರೆ, ಅದನ್ನು ಬಹಳ ಕಾಲ ನಿಗ್ರಹಿಸಲಾರ. ಕೆಲವರು ಬದಲುಡುಗೆಗೆ ಶರಣಾದರೆ, ಕೆಲವರು ಲಿಂಗ ಬದಲಾವಣೆ ಮಾಡಿಸಿಕೊಳ್ಳಲು ಇಚ್ಛಿಸುತ್ತಾರೆ. ಇನ್ನೂ ಕೆಲವರು ಲಿಂಗಚ್ಛೇದ ಮಾಡಿಸಿಕೊಂಡು ಹಿಜಡಾಗಳಾಗುತ್ತಾರೆ. ತನ್ನ ಲೈಂಗಿಕತೆಯ ಬಗ್ಗೆ ಅವರಿಗೆ ಎಷ್ಟು ಒತ್ತಡವಿರುತ್ತದೆಂದರೆ ಅದನ್ನು ಬಹಳ ಕಾಲ ಮುಚ್ಚಿಡಲಾರರು. ಸಲಿಂಗ ವರ್ತನೆ ಹದಿಹರೆಯಕ್ಕೆ

ಕಾಲಿಡುವಾಗಲೇ ವರ್ತಿಸಲು ಅವನಿಗೆ ಆತನ ಕುಟುಂಬ ಹಾಗೂ ಸುತ್ತಲಿನ ಸಮಾಜ ಬಿಡುವುದಿಲ್ಲ. ತನ್ನ ಲೈಂಗಿಕತೆಯನ್ನು ಬಹಳ ಕಾಲ ನಿಗ್ರಹಿಸಿ ಕೊನೆಗೊಮ್ಮೆ ಆತನ ರೀತಿಯಲ್ಲಿ ಹೊರಹಾಕಿದಾಗ ಅವನ ಕುಟುಂಬ ಅದನ್ನು ಒಪ್ಪದಾದಾಗ, ಅವನು ಹೊರಹಾಕಲ್ಪಡುತ್ತಾನೆ. ಸುತ್ತಲಿನ ಸಮಾಜ ಆತನನ್ನು ತಿರಸ್ಕರಿಸುತ್ತದೆ. ಶಾಲಾ-ಕಾಲೇಜುಗಳಲ್ಲಿ ಜತೆಗಾರರ ಗೇಲಿಗೊಳಗಾಗಿ ಶಿಕ್ಷಣ ಮುಂದುವರಿಸಲಾಗುವುದಿಲ್ಲ. ಉದ್ಯೋಗ ಸ್ಥಳಗಳಲ್ಲಿ ಸಹೋದ್ಯೋಗಿಗಳ ಮೂದಲಿಕೆ, ತಾತ್ಸಾರಗಳಿಂದಾಗಿ ಕೆಲಸ ಮಾಡಲಾಗುವುದಿಲ್ಲ. ಹೀಗಾಗಿ ಅನೇಕರು ಜೀವನ ನಿರ್ವಹಣೆಗಾಗಿ ವೇಶ್ಯಾವೃತ್ತಿ, ಭಿಕ್ಷಾಟನೆಗಳಿಗೆ ಇಳಿಯಬೇಕಾಗುತ್ತದೆ. (ಪ್ರಸಾದ್ ೨೦೦೮:೯)

ದೈಹಿಕ, ಮಾನಸಿಕ ನ್ಯೂನತೆ ಉಳ್ಳವರನ್ನು ಸಮಾಜ ಹೆಚ್ಚಾಗಿ ಪುರಸ್ಕರಿಸದಿದ್ದರೂ ತಿರಸ್ಕರಿಸುವುದಿಲ್ಲ. ಅಂಥ ವ್ಯಕ್ತಿಗಳು ತಮ್ಮನ್ನು ತಾವು ಇರುವಂತೆಯೇ ಒಪ್ಪಿಕೊಳ್ಳಲಾಗದೆ, ಕೀಳರಿಮೆ, ಖಿನ್ನತೆಗಳಿಂದ ಬಳಲುತ್ತಿದ್ದಾರೆ. ಇದರಿಂದ ಆತ್ಮಹತ್ಯೆ ಮಾಡಿಕೊಳ್ಳುವುದುಂಟು. ಅವರಲ್ಲಿ ಕೆಲವರು ಮಾತ್ರ ಧೈರ್ಯವಾಗಿ ತಮ್ಮಲ್ಲಿನ ಲೈಂಗಿಕ ಅಸ್ವಾಭಾವಿಕತೆಯನ್ನು ಒಪ್ಪಿಕೊಂಡು, ತಮ್ಮಂತೆಯೇ ಇರುವ, ತಮ್ಮ ಆತ್ಮಗೌರವವನ್ನು ಉಳಿಸಿಕೊಂಡು ಬದುಕಿಕೊಂಡಿರುವ, ಇತರರಿಗೆ ಸಹಾಯ ಹಸ್ತವನ್ನು ಚಾಚುವ ಜನಗಳ ಗುಂಪನ್ನು (ಉದಾಹರಣೆಗೆ, ಹಿಜಿಡಾಗಳು) ಸೇರಿ ಬಾಳ್ವೆಯನ್ನು ಮುಂದುವರಿಸುತ್ತಾರೆ.

ಜೀವನ ನಿರ್ವಹಣೆಗಾಗಿ ಅನೇಕರು ಲೈಂಗಿಕ ಉದ್ಯೋಗವನ್ನು ಅವಲಂಬಿಸುವುದುದರಿಂದ ಎಷ್ಟೋ ಬಾರಿ ಕೆಟ್ಟ ಜನರಿಂದ, ಗೂಂಡಾಗಳಿಂದ, ಕೆಲವು ಸಲ ಪೋಲಿಸರಿಂದ ಕೂಡ ವಿವಿಧ ರೀತಿಯ ಲೈಂಗಿಕ ಅತ್ಯಾಚಾರ, ಹಿಂಸೆ, ಕಿರುಕುಳಗಳಿಗೆ ಒಳಗಾಗಬೇಕಾಗುತ್ತದೆ. ಇವರು ಹೆಚ್ಚಾಗಿ ಗುದ ಸಂಭೋಗ, ಮುಖ ಮೈಥುನಗಳನ್ನು ಮಾಡುವುದರಿಂದ, ಆ ಜಾಗಗಳ ಹುಣ್ಣು, ಗಾಯ, ರಕ್ತಸ್ರಾವಗಳಿಂದಲೂ ನರಳುವಂತಾಗುತ್ತದೆ.

ಅಮೇರಿಕಾದ ಪ್ರಖ್ಯಾತ ಲೈಂಗಿಕ ತಜ್ಞ ಆಲ್ಫ್ರೆಡ್ ಕಿನ್ಸೆ ಮೊದಲ ಬಾರಿಗೆ ಲೈಂಗಿಕ ಅಲ್ಪಸಂಖ್ಯಾತರ ಸಂಖ್ಯೆ, ಸಲಿಂಗ ಕಾಮಿಗಳ ಸಂಖ್ಯೆ, ಅವರ ವರ್ತನೆ, ಇವುಗಳ ಬಗ್ಗೆ ಅಧ್ಯಯನ ಮಾಡಿದರು. ಅವರ ಪ್ರಕಾರ, ಒಂದು ಅಳತೆ ಮಾಪಕದಲ್ಲಿ 'ಸೊನ್ನೆಯಿಂದ ಆರರ' (೦-೬) ವರೆಗೆ ವ್ಯಕ್ತಿಗಳನ್ನು ವಿಂಗಡಿಸಿದಾಗ '೦' ಶ್ರೇಣಿಯಲ್ಲಿ ಭಿನ್ನಲಿಂಗಿಗಳು, '೬' ಶ್ರೇಣಿಯಲ್ಲಿ ಪರಿಪೂರ್ಣ ಸಲಿಂಗ ಹಾಗೂ ಇವೆರಡರ ನಡುವಿನ ಶ್ರೇಣಿಗಳಲ್ಲಿ ವಿವಿಧ ತೀವ್ರತೆಯ ದ್ವಿಲಿಂಗ ವರ್ತನೆ ಕಂಡುಬರುತ್ತದೆ.

ಬದಲುಡುಗೆ, ಲಿಂಗ ಬದಲಾವಣೆ, ಸಲಿಂಗ ಕಾಮ ಇವುಗಳಿಗೆ ಹಲವಾರು ರೀತಿಯ ವೈದ್ಯಕೀಯ ನೆರವು ನೀಡಲು ಪ್ರಯತ್ನ ನಡೆಸಿದರೂ ಯಾವೊಬ್ಬ ವ್ಯಕ್ತಿಯೂ ತನ್ನಲ್ಲಿನ ಲೈಂಗಿಕತೆಯ ರೀತಿಯನ್ನೇ ಒಪ್ಪಿಕೊಂಡು ತಾನಿರುವಂತೆಯೇ ಇರಲು ನಿರ್ಧರಿಸಿದರೆ, ಯಾವ ರೀತಿಯ ಚಿಕಿತ್ಸೆಯೂ ಫಲಿಸುವುದಿಲ್ಲ, ಮಾನಸಿಕ ಚಿಕಿತ್ಸೆ, ಸಮ್ಮೋಹನ ಚಿಕಿತ್ಸೆ, ಶಾಕ್ ಚಿಕಿತ್ಸೆ, ನಡವಳಿಕೆ ಚಿಕಿತ್ಸೆ, ಹೇರಿಕೆ (ಅವರ್ಯರ್ಷನ್) ಚಿಕಿತ್ಸೆ, ಆತಂಕ, ಖಿನ್ನತೆ ನಿವಾರಕ ಔಷಧಗಳು ಮುಂತಾದವುಗಳಿಂದ ಕೆಲವರಿಗೆ ಉಪಯೋಗವಾಗಬಹುದು ಅಷ್ಟೇ (ಪ್ರಸಾದ್ ೨೦೦೮:೧೩).

ಇಂಥ ವ್ಯಕ್ತಿಗಳಲ್ಲಿ 'ಇಗೋಸಿನ್ಟೋನಿಕ್' (ತನ್ನ ಲೈಂಗಿಕತೆಯ ರೀತಿಯನ್ನು ಒಪ್ಪಿಕೊಂಡಿರುವವರು) ಉಳ್ಳವರನ್ನು ಬದಲಾಯಿಸಲು ಪ್ರಯತ್ನ ಪಡಬಾರದು. ಅಂಥವರನ್ನು ಮದುವೆ ಮಾಡಿಕೊಳ್ಳಲೂ ಸಹ ಒತ್ತಾಯಿಸಬಾರದು. ಅಂಥವರನ್ನು ಮದುವೆ ಮಾಡಿಕೊಳ್ಳಲೂ ಸಹ ಒತ್ತಾಯಿಸಬಾರದು. ಎಷ್ಟೋ ಜನ ಹುಡುಗರು ಮದುವೆ ಮುಂದೆ ಹಾಕುವುದಕ್ಕೆ, ಮದುವೆ ಬೇಡವೆನ್ನುವುದಕ್ಕೆ ಇದೂ ಒಂದು ಕಾರಣ. ಇಗೋಡಿಸ್ಟೋನಿಕ್ (ತನ್ನ ಲೈಂಗಿಕತೆ ಬಗ್ಗೆ ಗೊಂದಲ,ದ್ವಂದ್ವ ಇರುವವರು) ವ್ಯಕ್ತಿಗಳನ್ನು, ಅವರು ತಮ್ಮಲ್ಲಿನ ಕೊರತೆ (ತೊಂದರೆ) ಯಿಂದ ಹೊರಬರಲು ಇಚ್ಛಿಸಿದರೆ ಮಾತ್ರ ಚಿಕಿತ್ಸೆ ನೀಡಬೇಕು. ಅವರ ಕುಟುಂಬದವರಿಗೆ, ಸಂಬಂಧಪಟ್ಟವರಿಗೂ ಸಲಹೆ, ಮಾರ್ಗದರ್ಶನ ನೀಡಬೇಕಾಗುತ್ತದೆ.

ಹೊರದೇಶಗಳಲ್ಲಿ ಲಿಂಗ ಬದಲಾವಣೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವ ಮೊದಲು ಆ ವ್ಯಕ್ತಿಯನ್ನು ಎರಡು ವರ್ಷಗಳ ದೀರ್ಘ ಅವಧಿಯ ಆಪ್ತಸಮಾಲೋಚನೆಗೆ ಒಳಪಡಿಸಿ ಬಹಳ ಶಿಸ್ತಿನ ನಿಯಮಗಲನ್ನು ಪಾಲಿಸುತ್ತಾರೆ. ಆ ವ್ಯಕ್ತಿಗೆ ಸ್ತ್ರೀ ಹಾರ್ಮೋನ್‌ಗಳನ್ನು ಕೊಡಲಾಗುತ್ತದೆ. ಎರಡು ವರ್ಷದ ಅನಂತರವೂ ಆತ ಲಿಂಗ ಬದಲಾವಣೆಗಾಗಿ ಮಾನಸಿಕವಾಗಿ ಪೂರ್ತಿ ತಯಾರಿದ್ದರೆ ಮಾತ್ರ ಶಸ್ತ್ರಕ್ರಿಯೆಗೆ ಒಪ್ಪಿಗೆ ನೀಡಲಾಗುತ್ತದೆ. ಆದರೆ ಭಾರತದಲ್ಲಿ ಕೆಲವೆಡೆ ಮಾತ್ರ ಇಂಥ ಶಸ್ತ್ರಚಿಕಿತ್ಸೆಗಳು ನಡೆಯುತ್ತವೆ. ಬಹಳಷ್ಟು ಸಂದರ್ಭಗಳಲ್ಲಿ ಹಿಜಿಡಾಗಳು ತಜ್ಞರಲ್ಲದ ಜನರಿಂದ ಬಹಳ ಅನಾರೋಗ್ಯಕರ ವಾತಾವರಣಗಳಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದಾರೆ. ಇದರಿಂದ ಸೋಂಕು, ರಕ್ತಸ್ರಾವ, ಮೂತ್ರದ ತೊಂದರೆಗಳು ಉಂಟಾಗುತ್ತವೆ. ಬಹಳ ಜನ ಹಿಜಿಡಾಗಳಿಗೆ ಹಣದ ಕೊರತೆಯಿಂದಾಗಿ ತಜ್ಞ ವೈದ್ಯರ ಬಳಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲಾಗುತ್ತಿಲ್ಲ (ಪ್ರಸಾದ್ ೨೦೦೮:೧೪).

ಸಲಿಂಗ ವರ್ತನೆಯುಳ್ಳ ಅನೇಕರು ವಿವಾಹವಾಗಲು ಇಷ್ಟಪಡದಿದ್ದರೂ ಮನೆಯವರ ಒತ್ತಾಯಕ್ಕಾಗಿಯೋ, ತನ್ನ ಪುರುಷತ್ವವನ್ನು ತೋರ್ಪಡಿಸಿ ಕೊಳ್ಳಲೋ ವಿವಾಹವಾಗಬಹುದು. ಆದರೆ ಇವರ ವರ್ತನೆಯಿಂದ ಇವರನ್ನು ಮದುವೆಯಾದ ಹೆಣ್ಣು ಮಾನಸಿಕವಾಗಿ ಬಹಳಷ್ಟು ತೊಂದರೆಯನ್ನು ಅನುಭವಿಸಬೇಕಾಗಬಹುದು. ಕೆಲವು ಸಲ ವಿವಾಹ ವಿಚ್ಛೇದನದಲ್ಲಿ ಕೊನೆಗೊಳ್ಳಬಹುದು (ಪದ್ಮಿನಿ ಪ್ರಸಾದ್ ೨೦೦೮:೧೫).

ಸಲಿಂಗ ಕಾಮವು ಅಸ್ವಸ್ಥತೆಯಾಗಲಿ ಅಥವಾ ಕಾಯಿಲೆಯಾಗಲಿ ಅಲ್ಲ. ಅದು ಮಾನವ ಲೈಂಗಿಕತೆಯ ಮತ್ತೊಂದು ಅಭಿವ್ಯಕ್ತಿ ಎಂಬ ಸರ್ವಾನುಮತದ ವೈದ್ಯಕೀಯ ಹಾಗೂ ಮನೋವೈಜ್ಞಾನಿಕ ಅಭಿಪ್ರಾಯವಿದೆ. ಸಾಕ್ಷ್ಯ ಪರಿಶೀಲನೆಯ ನಂತರ ೧೯೭೩ರಲ್ಲಿ ಮಾನಸಿ ಅಸ್ವಸ್ಥತೆ ಕುರಿತ ಚಿಕಿತ್ಸೆ ಹಾಗೂ ಸಾಂಖ್ಯಿಕ ಕೈಪಿಡಿಯಿಂದ ಸಲಿಂಗ ಕಾಮವನ್ನು ತೆಗೆದು ಹಾಕಲಾಯಿತು. ೧೯೯೨ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ತನ್ನ ಕಾಯಿಲೆಗಳ ಕುರಿತ ಅಂತರ್‌ರಾಷ್ಟ್ರೀಯ ವಿಂಗಡಣೆಯಲ್ಲಿರುವ ಮಾನಸಿಕ ಕಾಯಿಲೆಗಳ ಪಟ್ಟಿಯಿಂದ ಸಲಿಂಗ ಕಾಮವನ್ನು ತೆಗೆದು ಹಾಕಿತು ಸಲಿಂಗ ಕಾಮವು ಕಾಯಿಲೆಯಾಗಲಿ, ಅಸ್ವಸ್ಥತೆಯಾಗಲಿ ಅಲ್ಲದಿರುವುದರಿಂದ ಚಿಕಿತ್ಸೆ ಮಾಡಲಾಗುವುದಿಲ್ಲ. ಸಲಿಂಗ ಕಾಮಿಗಳನ್ನು ಪರಲಿಂಗ ಕಾಮಿಗಳಂತೆಯೆ 'ಸಾಮಾನ್ಯ' ಅಥವಾ 'ಸ್ವಾಭಾವಿಕ' ಎಂದು ಒಪ್ಪಿಕೊಳ್ಳಬೇಕು. ಇಲ್ಲದಿರುವ ಕಾರಣಗಳ ಹುಡುಕುವುದನ್ನು ನಿಲ್ಲಿಸಬೇಕು (ಶೇಷಾದ್ರಿ ೨೦೧೦).

ಹಾಸ್ಟೆಲ್‌ಗಳಲ್ಲಿ, ಕೆಲವು ಮಠ-ಮಾನ್ಯಗಳಲ್ಲಿ, ವಿದೇಶಗಳಲ್ಲಿ ಕೆಲವರು ಸಲಿಂಗಕಾಮದಲ್ಲಿ ತೊಡಗಿರುತ್ತಾರೆ ಅಂತ ಕೇಳೀವಿ. ಅದರ ಇದರ ಬಗ್ಗೆ ನಮಗ ಹೆಚ್ಚು ಏನೂ ಗೊತ್ತಿಲ್ಲ. ದೆಹಲಿ ಹೈಕೋರ್ಟ್ ಆದೇಶ ಬಂದ ಮ್ಯಾಲ ನಮಗ ಹೆಚ್ಚು ಗೊತ್ತಾಗಿದ್ದು.

ಎಷ್ಟೋ ರಾಷ್ಟಗಳಲ್ಲಿ ಸಲಿಂಗಿಗಳು ಮದುವಿ ಆದದ್ದು ಇದಾ ಅಂತ. ನಮ್ಮ ದೇಶದಾದ ಇದು ಅವರ ಬಹಳ ವರ್ಷದ ಬೇಡಿಕೆ. ಕೋರ್ಟು ತೀರ್ಪು ಕೇಳಿ ಅವರೆಲ್ಲಾ ಹರ್ಷ ಪಟ್ಟದ್ದು ಪೇಪರಿನ್ಯಾಗ ಓದಿದೆ.

ಕೋರ್ಟ್ ತೀರ್ಪು ಸರಿಯಾದದ್ದ ಐತಿ. ಬಾಳ ದೂರದೃಷ್ಟಿಯಿಂದ ಇಂತಾ ತೀರ್ಪು ನೀಡಿರ್ರಾತ. ಸಲಿಂಗಕಾಮ ನಿಸರ್ಗ ಸಹಜ ಅಂತ ಹೇಳಾವು ಅದಾರ. ಯಾವುದೇ ಅಭಿವ್ಯಕ್ತೀನಾ ಹತ್ತಿರಕ್ಕಿದರ ಅದು ಒಂದಲ್ಲ ಒಂದು ದಿನ ಸ್ಫೋಟ ಅಕ್ಕತಿ. ಕೋರ್ಟ್ ತೀರ್ಪು ಸರಿ ಐತಿ (ಸಿದ್ಧಲಿಂಗ ಸ್ವಾಮೀಜಿ ೨೦೧೦).

ಏಶ್ಯಾದಲ್ಲೇ ಮೊದಲ ಬಾರಿಗೆ ಲೈಂಗಿಕ ಅಲ್ಪಸಂಖ್ಯಾತರನ್ನು ೨ಎ ಪ್ರವರ್ಗಕ್ಕೆ ಸೇರಿಸಲು ರಾಜ್ಯ ಸರಕಾರ ಮುಂದಾಗಿದೆ.ಕೋಜಾ, ಕೋತಿ, ಡಬ್ಬಲ್ ಡೆಕ್ಕರ್, ಎಫ್ ಟು ಎಂ (ಹೆಣ್ಣಿನಿಂದ ಗಂಡು), ಎಂ ಟು ಎಫ್ (ಗಂಡಿನಿಂದ ಹೆಣ್ಣು) ಲಿಂಗ ಪರಿವರ್ತನೆ ಹೊಂದಿದವರು ರಾಜ್ಯ ಸರಕಾರ ಮನಸ್ಸು ಮಾಡಿದರೆ ಮೀಸಲು ಮಾತ್ರವಲ್ಲ ಸ್ಥಾನಮಾನದ ಲಾಭ ಪಡೆಯಲ್ಲಿದ್ದಾರೆ, ಸರಕಾರಿ ಸೌಲಭ್ಯವನ್ನೂ ಪಡೆಯಲ್ಲಿದ್ದಾರೆ. ಆದರೆ ಇದರ ಕೀರ್ತಿಯೆಲ್ಲಾ ರಾಜ್ಯ ಶಾಶ್ವತ ಹಿಂದುಳಿದ ವರ್ಗಗಳ ಆಯೋಗಕ್ಕೆ ಸಲ್ಲುತ್ತದೆ. ಗಂಡೂ ಅಲ್ಲ, ಹೆಣ್ಣೂ ಅಲ್ಲವೆನ್ನುವ ನೆಲೆಯಲ್ಲಿ ತ್ರಿಶಂಕು ಸ್ತಿತಿಯಲ್ಲಿದ್ದ ಲೈಂಗಿಕ ಅಲ್ಪಸಂಖ್ಯಾತರನ್ನು ಸ್ವಾತಂತ್ರ್ಯ ದೊರೆತ ೬೦ ವರ್ಷಗಳ ಬಳಿಕ ಸರಕಾರ ಪರಿಗಣಿಸುವಂತಾಗಿದೆ.

ವಿಜಯ ಕರ್ನಾಟಕದೊಂದಿಗೆ ಮಾತನಾಡಿದ ಆಯೋಗದ ಮಾಜಿ ಅಧ್ಯಕ್ಷ ಡಾ.ಸಿ.ಎಸ್.ದ್ವಾರಕಾನಾಥ್ ಪ್ರಕಾರ, ಗಂಡು ಮತ್ತು ಹೆಣ್ಣಿನಂತೆ ಮೂರನೇ ಲಿಂಗಕ್ಕೆ ಯಾವ ಸರಕಾರವೂ ಈ ತನಕ ಮಾನ್ಯತೆ ನೀಡಿಲ್ಲ. ಜನಗಣತಿ ಸಂದರ್ಭ ಮೂರನೇ ಲಿಂಗ ಪರಿಗಣಿಸಲು ಆಯೋಗ ಶಿಫಾರಸು ಮಾಡಿತ್ತು. ಲಿಂಗ ಮತ್ತು ಅಸ್ತಿತ್ವ ಗುರುತಿಸುವಂತಾದರೆ ಲೈಂಗಿಕ ಅಲ್ಪಸಂಖ್ಯಾತರಿಗೆ ಅಥವಾ ಮೂರನೇ ಲಿಂಗಿಗಳಿಗೂ ಸರಕಾರದ ಸೌಲಭ್ಯ ಸಿಗಲು ಸಾಧ್ಯ.

ಕೇಂದ್ರ ಸರಕಾರ ಈ ನಿಟ್ಟಿನಲ್ಲಿ ಧನಾತ್ಮಕ ಹೆಜ್ಜೆಯಿಟ್ಟಿದೆ. ಆದರೆ ೨೦೧೧ರ ಜನಗಣತಿ ಪ್ರಕ್ರಿಯೆ ಆರಂಭವಾಗಿದೆ.ಹೀಗಾಗಿ ಮೂರನೇ ಲಿಂಗಿಗಳು ಸೀರೆ ಉಟ್ಟಿದ್ದರೆ ಹೆಣ್ಣು, ಪ್ಯಾಂಟು-ಶರಟು ತೊಟ್ಟಿದ್ದರೆ ಗಂಡೆಂದು ನಮೂದಿಸದೆ ವಿಧಿಯಿಲ್ಲ, ಪ್ರತ್ಯೇಕಅಸ್ತಿತ್ವವಿಲ್ಲದೇಇವರು ಲೆಕ್ಕಕ್ಕೇ ಸಿಗುತ್ತಿಲ್ಲ. ಗಂಡೂ ಅಲ್ಲದ, ಹೆಣ್ಣೂ ಅಲ್ಲದ ಸ್ಥಿತಿಯಲ್ಲಿರುವ ಜನರನ್ನು ಸರಕಾರ ಮನುಷ್ಯರೆಂದೇಕೆ ತಿಳಿದಿಲ್ಲ (ವಿಜಯ ಕರ್ನಾಟಕ ೨೦೧೦)?

ಪೋಲೀಸರಿಂದ, ಕ್ರಿಮಿನಲ್‌ಗಳಿಂದ ತಪ್ಪಿಸಿಕೊಳ್ಳಲು ನಿಜಕ್ಕೂ ಈ ತೀರ್ಪು ಲೈಂಗಿಕ ಅಲ್ಪಸಂಖ್ಯಾತರಿಗೆ ಸಹಕಾರಿಯಾಗುತ್ತದೆ. ಧಾರ್ಮಿಕ ಮುಖಂಡಾರೇ ಆಗಲಿ, ಯಾರೇ ಪ್ರತಿಗಾಮಿಗಳಾಗಲಿ

ಒಬ್ಬ ವ್ಯಕ್ತಿಯ ಅತ್ಯಂತ ವೈಯಕ್ತಿಕವಾದ ಲೈಂಗಿಕ ವಿಚಾರದಲ್ಲಿ ತಲೆ ಹಾಕುವ ಪ್ರಯತ್ನಗಳು ನಿಜಕ್ಕೂ ಹೇಯಕರ ಹಾಗೂ ಮಾನವ ವಿರೋಧಿಯಾದವು. ಈ 'ಸೋ ಕಾಲ್ಡ್' ಧಾರ್ಮಿಕ ಮುಖಂಡರು ನಂಬುವ ಧರ್ಮವು ನಿರ್ದೇಶಿಸುವ ಲೈಂಗಿಕ ವಿಚಾರಗಳನ್ನು ಇಂಥವರು ಸ್ವ ಇಚ್ಛೆಯಿಂದ ರೂಢಿಸಿಕೊಳ್ಳಲಿ. ಆದರೆ ಇತರರ ಲೈಂಗಿಕ ಸ್ವಾತಂತ್ರದಲ್ಲಿ ಇವರು ಮೂಗು ತೂರಿಸದಿದ್ದರೆ ಸಾಕು.

ಕಡೆಗೆ ಈ ಧಾರ್ಮಿಕ ಕಿಡಿಗೇಡಿಗಳಿಗೆ ಹೇಳಬೇಕಾದುದಿಷ್ಟೆ; ಇವರು ಎಂದಿಗೂ ಅರಿಯದ, ಅರ್ಥ ಮಾಡಿಕೊಳ್ಳಲಾಗದ ಅನುಭಾವಿ ಮಹಾನ್ ಶರಣ ಜೇಡರ ದಾಸಿಮಯ್ಯನವರ ವಚನವನ್ನು...

ಮೊಲೆ ಮೂಡಿ ಬಂದರೆ ಹೆಣ್ಣೆಂಬರಯ್ಯ
ಗಡ್ಡ ಮೀಸೆ ಬಂದೊಡೆ ಗಂಡೆಂಬರಯ್ಯ
ನಡುವೆ ಸುಳಿವಾತ್ಮ
ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ ರಾಮನಾಥಾ ॥

(ದ್ವಾರಕಾನಾಥ್ ಅಗ್ನಿ ವಾರಪತ್ರಿಕೆ ೨೦೧೦).

೧.೨೭ ಸಂಶೋಧನಾ ಅಧ್ಯಯನ ವಿಧಾನ

ಸಂಶೋಧನಾ ಅಧ್ಯಯನ ವಿಧಾನ ಒಂದು ಪ್ರಾಮುಖ್ಯವಾದ ಸ್ತರವಾಗಿದ್ದು, ಇದು ಅಧ್ಯಯನದ ವಿವಿಧ ಪ್ರಕ್ರಿಯೆಯನ್ನು ವಿವರಿಸುವುದರ ಜೊತೆಗೆ ಸಂಶೋದಕನು ಯಾವುದನ್ನು ಅಳವಡಿಸಲಾಗಿದೆ ಎಂಬುವುದನ್ನು ವಿವರಿಸಲಾಗಿದೆ.

೧.೨೮ ಸಂಶೋಧನಾ ಸಮಸ್ಯೆ

ಪುರುಷ ಸಲಿಂಗಕಾಮ ಅಂದರೆ ಪುರುಷ ಪುರುಷರೊಳಗೆ ಏರ್ಪಡುವ ಲೈಂಗಿಕ ಸಂಪರ್ಕ ಎನ್ನಬಹುದು. ಸಾಂಪ್ರದಾಯಿಕ ಹಾಗೂ ಸಾರ್ವತ್ರಿಕ ಅನ್ಯಲಿಂಗ ಕಾಮಕ್ಕೆ ತದ್ವಿರುದ್ಧವಾದುದಾಗಿದೆ. ಸಾಮಾಜಿಕ ನೆಲೆಯಲ್ಲಿ ಆಲೋಚಿಸುವಾಗ ಸಮಾಜದ ಮುಖ್ಯವಾಹಿನಿಗೆ ಸೇರಲ್ಪಡದ ಗುಂಪಾಗಿ ಉಳಿದಿದೆ ಎನ್ನಬಹುದು. ಲೈಂಗಿಕತೆಯ ವಿವಿಧ ಆಯಾಮಗಳಲ್ಲಿ ಇದೂ ಒಂದು ಎಂದು ಪರಿಗಣಿಸಲ್ಪಟ್ಟಿದೆ. ಭಾರತೀಯ ಸಾಂಪ್ರದಾಯಿಕ ಸಮೂಹವು ಮಾನ್ಯಮಾಡದಿರುವ ಗುಂಪು ಎಂದು ಕೂಡಾ ಕರೆಯಬಹುದು. ಇಂದಿನ ಆಧುನಿಕ ಸಮಾಜದಲ್ಲಿ ಇಂತಹ ಒಂದು ಗುಂಪಿನ ಇರುವಿಕೆಯನ್ನು ಆಶ್ಚರ್ಯಪಡಬಹುದು. ಆದರೆ ಇಂದಿನ ಆಧುನಿಕ ಜೀವನ ಕ್ರಮದಲ್ಲಿ ನಿಧಾನವಾಗಿ ಬೆಳಕಿಗೆ ಬಂದು ಸಮಾಜದಲ್ಲಿ ಗುರುತಿಸಿಕೊಂಡಿದೆ.

ಒಬ್ಬ ವ್ಯಕ್ತಿ ಪುರುಷನಾಗಿ ಹುಟ್ಟಿ ಹಾರ್ಮೋನುಗಳ ಏರುಪೇರು, ಜನನಾಂಗದ ನ್ಯೂನ್ಯತೆ, ಮನೆ, ಶಾಲೆ, ಕಾಲೇಜು, ಸಮಾಜದ ಪ್ರಭಾವಕ್ಕೊಳಗಾಗಿ ನಿಧಾನವಾಗಿ ಆತನಲ್ಲಿ ಸ್ವಲ್ಪಮಟ್ಟಿನ ಹೆಣ್ಣಿನ ಭಾವನೆ ಬೆಳೆದು, ವಯೋ ಸಹಜವಾದ ಅನ್ಯಲಿಂಗ ಮೋಹದ ಬದಲಾಗಿ ಸಲಿಂಗ ಮೋಹವು ಆತನಲ್ಲಿ ಜಾಗ್ರತಗೊಳ್ಳುವುದಕ್ಕೆ ಸಲಿಂಗಕಾಮ ಎನ್ನಬಹುದು.

ಮಂಗಳೂರು ನಗರದಲ್ಲಿ ಪುರುಷ ಸಲಿಂಗಕಾಮಿಗಳ ಸಾಮಾಜಿಕ ಆರ್ಥಿಕ ಸ್ಥಿತಿಗತಿ ಉತ್ತಮವಾಗಿಲ್ಲ ಎನ್ನಬಹುದಾಗಿದೆ. ಸಮಾಜದ ಮುಖ್ಯವಾಹಿನಿಯಿಂದ ದೂರ ಉಳಿದಿರುವ ಇವರು ತಮ್ಮ ಸಾಮಾಜಿಕ ಬದುಕಿನಲ್ಲಿ ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ತಮ್ಮನ್ನು ಸಲಿಂಗಿಗಳೆಂದು ಸಮಾಜದ ಮುಂದೆ ಮುಕ್ತವಾಗಿ ಒಪ್ಪಿಕೊಳ್ಳಲಾಗದೆ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸಿಕೊಳ್ಳಲಾಗದೆ ಕುಟುಂಬ, ಸಮಾಜದಲ್ಲಿ ಅವಮಾನಕ್ಕೆ ಒಳಗಾಗುವಂತಹ ಪರಿಸ್ಥಿತಿಯಿಂದ ಇನ್ನೂ ದೂರವಾಗಿಲ್ಲ. ಕುಟುಂಬದ ಒಳಗಡೆ ಪುರುಷರಾಗಿಯೂ, ತಮ್ಮ ಗುಂಪಿನ ನಡುವೆ ತಾನು ಒಬ್ಬಳು ಹೆಣ್ಣು ಎಂಬ ಇಬ್ಬಗೆಯ ಭಾವನೆಗಳ ತೊಳಲಾಟದಲ್ಲಿ ನಲುಗಿದ್ದಾರೆ ಎನ್ನಬಹುದು. ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸುವ ಸಮಯ, ಮನಸ್ಸು ಕಡಿಮೆಯಾಗಿದೆ ಎನ್ನಬಹುದು. ತನ್ನ ಸಂಗಾತಿಯೊಂದಿಗೆ ಹಲವು ಒತ್ತಡಗಳಿಂದ ಲೈಂಗಿಕ ಸಂಪರ್ಕದ ಸಂದರ್ಭದಲ್ಲಿ ಮುನ್ನೆಚ್ಚರಿಕೆ ವಹಿಸದೆ, ವಿವಿಧ ಲೈಂಗಿಕ ಸೋಂಕುಗಳೂ, ಹೆಚ್.ಐ.ವಿ. ಸೋಂಕಿಗೆ ಒಳಗಾಗುವ ಅಪಾಯದ ಸಾಧ್ಯತೆ ಜಾಸ್ತಿಯಾಗಿದೆ.

ಆರ್ಥಿಕವಾಗಿಯೂ ಇವರು ಸಬಲರಾಗಿಲ್ಲ. ಏಕೆಂದರೆ ಇವರ ನಡವಳಿಕೆ, ಹಾವಾಭಾವಗಳನ್ನು ಅರ್ಥೈಸದ ಸಮಾಜವು ಇವರು ಕೆಲಸ ಪಡೆದುಕೊಳ್ಳುವುದು ಅಥವಾ ಇದ್ದ ಉದ್ಯೋಗವನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಸ್ವಲ್ಪ ತೊಂದರೆ ಎದುರಿಸುತ್ತಾರೆ. ಸಣ್ಣಾ ಪುಟ್ಟ ಕೆಲಸಗಳನ್ನು ಮಾಡುತ್ತಾ ತನ್ನ ಗುಂಪಿನವರೊಂದಿಗೆ ಸೇರಿಕೊಂಡು ಖುಷಿಪಡುವುದೇ ಇವರ ಜೀವನ ವಿಧಾನವಾಗಿ ಬಿಟ್ಟಿದೆ. ಆದರೆ ಕೆಲವೊಬ್ಬರು ಇದರ ಹೊರತಾಗಿಯೂ ಉತ್ತಮ ಉದ್ಯೋಗಸ್ಥರಾಗಿ ಇರುತ್ತಾರೆ.

ಇವರ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಉತ್ತಮಗೊಳ್ಳಲು ಬೇಕಾದ ಸರಕಾರಿ ಸವಲತ್ತುಗಳಿಂದಲೂ ವಂಚಿತರಾಗಿದ್ದಾರೆ ಎನ್ನಬಹುದು. ಗಳಿಸಿದ ಹಣವನ್ನು ಉಳಿತಾಯ ಮಾಡುವ ಮನೋಭಾವವು ಕೂಡಾ ಇವರಿಗೆ ಕಡಿಮೆ. ಏಕೆಂದರೆ ಗಳಿಸಿದ ಹಣದಿಂದ ಹೆಚ್ಚು ಮನರಂಜನೆಗೆ

ವ್ಯಯಿಸುತ್ತಾರೆ. ತಮ್ಮ ಪುರುಷ ಗಿರಾಕಿಗಳಿಂದ ವಂಚನೆ, ಗೂಂಡಾ, ಪೊಲೀಸರ ದೌರ್ಜನ್ಯದಿಂದಲೂ ಇವರ ಆರ್ಥಿಕತೆಯ ಮೇಲೆ ಪರಿಣಾಮ ಬೀರಿದೆ.

೧.೨೯ ಅಧ್ಯಯನ ವ್ಯಾಪ್ತಿ

ಪ್ರಸ್ತುತ ಅಧ್ಯಯನದ ವ್ಯಾಪ್ತಿಯು ಮಂಗಳೂರು ನಗರ ವ್ಯಾಪ್ತಿಗೆ ಸೀಮಿತವಾಗಿದೆ. ವ್ಯಾಪ್ತಿಯ ಪುರುಷಸಲಿಂಗಕಾಮಿಗಳ ಸ್ಥಿತಿಯನ್ನು ಅರಿಯಲು; ಅವರ ಕೌಟುಂಬಿಕ ಬಗ್ಗೆ ಅರಿಯಲು ಮತ್ತು ಸಾಮಾಜದಲ್ಲಿ ಅವರ ಪಾತ್ರ; ಅವರ ಲೈಂಗಿಕತೆ ಹಾಗೂ, ಹೆಚ್.ಐ.ವಿ ಮತ್ತು ಅಪಾಯದ ಬಗ್ಗೆ ಇರುವ ಮಾಹಿತಿಯನ್ನು ತಿಳಿಯಲು ಅಧ್ಯಯನ ನಡೆಸಲಾಗಿದೆ.

ಅಧ್ಯಯನವನ್ನು ಕದ್ರಿ ಪಾರ್ಕ್, ಪಣಂಬೂರು ಬೀಚ್, ಟಾಗೋರ್ ಪಾರ್ಕ್, ನೆಹರೂ ಮೈದಾನ, ಕಾರ್ಪೋರೇಶನ್ ಪಾರ್ಕ್, ಮಕ್ಕಳ ಪಾರ್ಕ್, ಲೇಡಿಗೋಶನ್ ಸಾರ್ವಜನಿಕ ಶೌಚಾಲಯದ ಪಕ್ಕ, ಸರ್ವಿಸ್ ಬಸ್ಸು ನಿಲ್ದಾಣ, ಸೆಂಟ್ರಲ್ ಮಾರುಕಟ್ಟೆ, ಗಾಂಧಿ ಪಾರ್ಕ್‌ಗಳನ್ನು ಪುರುಷ ಸಲಿಂಗ ಕಾಮಿಗಳನ್ನು ಸಂದರ್ಶಿಸಿ ಅಧ್ಯಯನ ನಡೆಸಲಾಗಿದೆ.

ಮಂಗಳೂರು ನಗರದ ನಗರೀಕರಣ ಪ್ರಕ್ರಿಯೆಯಲ್ಲಿ ಈ ಸಮುದಾಯದ ಸಮಸ್ಯೆ, ಬೇಡಿಕೆ, ಅವರ ಅನಿಸಿಕೆಗಳ ಬಗ್ಗೆ ಬೆಳಕುಚೆಲ್ಲುವುದರ ಜೊತೆಗೆ ಸಮಾಜದ ಮುಖ್ಯವಾಯಿನಿಯಲ್ಲಿ ಸೇರಲು ವಿವಿಧ ಮಜಲುಗಳ ಬಗ್ಗೆ ವ್ಯಾಪ್ತಿ ಒಳಪಟ್ಟಿದೆ.

೧.೩೦ ಅಧ್ಯಯನ ಉದ್ದೇಶ

೧. ಪುರುಷ ಸಲಿಂಗಕಾಮಿಗಳ ವೈಯಕ್ತಿಕ ಸಂಕ್ಷಿಪ್ತ ವ್ಯಕ್ತಿ ಚಿತ್ರ ತಿಳಿಯಲು:- ಸಂಶೋಧಕರು ಪುರುಷ ಸಲಿಂಗಕಾಮಿಗಳ, ವ್ಯಕ್ತಿ ಮತ್ತು ಅವರ ಕುಟುಂಬ, ಶಿಕ್ಷಣ, ವಾಸಿಸುವ ಪ್ರದೇಶ, ವೈವಾಹಿಕ ಸ್ಥಿತಿ, ಆದಾಯ, ಅವರು ಗುರುತಿಸಿಕೊಳ್ಳುವಿಕೆ,ಅವರ ಜಾತಿ, ಧರ್ಮ, ಉದ್ಯೋಗ, ಭೂಮಿ, ಮನೆ ಸ್ಥಿತಿ, ಆರೋಗ್ಯ, ಉಳಿತಾಯ, ಅವರ ಸಂಗಾತಿ ಈ ವಿಷಯವನ್ನು ಒಳಗೊಂಡ ಪ್ರಶ್ನಾವಳಿ ತಯಾರಿಸಿ ವೈಯಕ್ತಿಕ ಸಂದರ್ಶನಗಳನ್ನು ನಡೆಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

೨. ಪುರುಷ ಸಲಿಂಗಕಾಮಿಗಳ ಸಾಮಾಜಿಕ ಸ್ಥಿತಿಯನ್ನು ಅರ್ಥೈಸಲು: - ಅವರ ಸಾಮಾಜಿಕ ಸಂಬಂಧಗಳು, ವ್ಯಕ್ತಿ ಮತ್ತು ವ್ಯಕ್ತಿ ಹಾಗೂ ವ್ಯಕ್ತಿ ಮತ್ತು ಕುಟುಂಬ, ವ್ಯಕ್ತಿ ಮತ್ತು ಸಮಾಜ, ಸಾಮಾಜಿಕ ನೆಲೆಯಲ್ಲಿನ ಅವರ ಸಂಬಂಧಗಳು, ವ್ಯಕ್ತಿ ಮತ್ತು ಸಂಗಾತಿ, ದೌರ್ಜನ್ಯ, ವ್ಯಕ್ತಿಗತ ಆರೋಗ್ಯ, ಹಾಗೂ ಆರೋಗ್ಯ ಸೇವೆಗಳು ತಿಳಿಯುವುದಕ್ಕಾಗಿ ಸಂಶೋಧಕರು ಈ ಮೇಲಿನ ಉದ್ದೇಶದ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

೩. ಪುರುಷ ಸಲಿಂಗಕಾಮಿಗಳ ಆರ್ಥಿಕ ಸ್ಥಿತಿಯನ್ನು ಅರ್ಥೈಸಲು: - ಕುಟುಂಬದ ಆರ್ಥಿಕ ಹಿನ್ನೆಲೆ, ಉದ್ಯೋಗ ಆದಾಯ, ಉಳಿತಾಯ ಈ ಅಂಶಗಳನ್ನು ಸಂಶೋಧಕರು ಈ ಮೇಲಿನ ಉದ್ದೇಶದ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

೪. ಪುರುಷ ಸಲಿಂಗಕಾಮಿಗಳ ಲೈಂಗಿಕತೆ ಬಗ್ಗೆ ತಿಳಿಯಲು:- ಸಂಶೋಧಕರು ಪುರುಷ ಸಲಿಂಗಕಾಮಿಗಳು ತಾವು ಬಯಸಿದ ಲಿಂಗತ್ವ, ಅವರ ಲೈಂಗಿಕತೆಯ ವಿವಿಧ ಆಯಾಮಗಳು, ಸಂಗಾತಿಯೊಂದಿಗಿನ ಸಂಬಂಧ, ಲೈಂಗಿಕ ಚಟುವಟಿಕೆಗಳಿಗೆ ಬಳಸುವ ಸ್ಥಳಗಳು, ಲೈಂಗಿಕತೆ ಸಂದರ್ಭದಲ್ಲಿ ತೊಂದರೆಗಳು, ಸಂಗಾತಿಗಳೊಡನೆ ಘರ್ಷಣೆ, ಗೂಂಡಾಗಳಿಂದ ಬಲವಂತ, ಲೈಂಗಿಕತೆ ಹಣ ಅಥವಾ ಸಂತೋಷಕ್ಕಾಗಿಯೆ, ಲೈಂಗಿಕ ಸೋಕುಗಳ ಬಗ್ಗೆ ಮಾಹಿತಿ ಹಾಗೂ ಆರೋಗ್ಯ ಸೇವೆಗಳ ಲಭ್ಯತೆ ಇವುಗಳನ್ನು ಈ ಉದ್ದೇಶದ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ.

೫. ಅವರ ಕುಟುಂಬ ಮತ್ತು ಸಮಾಜದಲ್ಲಿ ಅವರ ಪಾತ್ರದ ಬಗ್ಗೆ ಅರ್ಥೈಸಲು: - ಸಮಾಜದ ಮುಖ್ಯವಾಹಿನಿಯಲ್ಲಿ ಅವರ ಕುಟುಂಬದಲ್ಲಿ ಸಂಬಂಧಗಳು, ಅವರ ನೆಲೆ, ಜೀವನ ಕ್ರಮ, ಜೊತೆಗೆ ಸಮಾಜದಲ್ಲಿ ಅವರು ಗುರುತಿಸಿಕೊಳ್ಳುವಿಕೆ, ಅವರ ನಡವಳಿಕೆಗಳು, ಅವರ ಆಚಾರ ವಿಚಾರಗಳಿಗೆ ಸಮಾಜದಲ್ಲಿ ಅವರಿಗೆ ಸಿಗುವ ಮನ್ನಣೆ ಹಾಗೂ ತೊಂದರೆಗಳನ್ನು ಅರ್ಥೈಸಲಾಗುತ್ತದೆ. ಈ ಸಮಸ್ಯೆಗಳಿಂದ ಹೊರ ಬರಲು ಅವರ ಸಂಘಟನೆ ಮೂಲಕ ಸಮಾಜದಲ್ಲಿ ಗುರುತಿಸಿಕೊಳ್ಳುವಿಕೆಗೆ ಪ್ರಶ್ನಗಳ ಬಗ್ಗೆ ಕೂಡ ಅಧ್ಯಯನ ನಡೆಸಲಾಗಿದೆ.

೬. ಪುರುಷ ಸಲಿಂಗಕಾಮಿಗಳ ಹೆಚ್. ಐ. ವಿ. ಮತ್ತು ಅಪಾಯದ ಬಗ್ಗೆ ಇರುವ ಮಾಹಿತಿ ಅರಿಯಲು:-

ಪುರುಷ ಸಲಿಂಗಕಾಮಿಗಳು ಹೆಚ್ಚಾಗಿ ಗುದ ಸಂಭೋಗ ಮಾಡಿಸಿಕೊಳ್ಳುವುದರಿಂದಹೆಚ್ಚಾಗಿ ಹೆಚ್.ಐ. ವಿ. ಸೋಂಕಿಗೆ ತುತ್ತಾಗುವ ಅಪಾಯಕ್ಕೆ ಒಳಗಾಗುತ್ತಾರೆ. ಹೆಚ್.ಐ. ವಿ. ತಡೆಗಟ್ಟುವಿಕೆ ಯೋಜನೆ ಬಗ್ಗೆ ಮಾಹಿತ, ಹೆಚ್. ಐ. ವಿ. ಪರೀಕ್ಷೆ, ನಿರೋಧ್ ಬಳಕೆಯ ಬಗ್ಗೆ ಉತ್ತೇಜನ ತಿಳಿಯಲು, ವೈಯಕ್ತಿಕ ಆರೋಗ್ಯದ ಬಗ್ಗೆ ಅವರಲ್ಲಿ ಕಾಳಜಿ ಮೂಡಿದೆಯೆ, ಸಂಗಾತಿಯ ಒತ್ತಡ

ಆಮೀಷಗಳಿಗೆ ಬಲಿಯಾಗದಂತೆ ಹೆಚ್.ಐ.ವಿ. ಅಪಾಯದಿಂದ ಪಾರಾಗುವ ಬಗ್ಗೆ ಈ ಉದ್ದೇಶದಲ್ಲಿ ಮಾಹಿತಿ ಸಂಗ್ರಹಿಸಲಾಗಿದೆ.

೧.೩೧ ಅಧ್ಯಯನ ವಿಧಾನ

ಯಾದೃಚ್ಛಿಕ ನಮೂನೆಯ ಆಯ್ಕೆಯಲ್ಲಿ ಮೂಲ ಗುಂಪಿನಲ್ಲಿರುವ ಪ್ರತಿ ಬಿಡಿಭಾಗಕ್ಕೂ ನಮೂನೆಯಲ್ಲಿ ಆಯ್ಕೆಯಾಗುವ ಸಾಧ್ಯತೆಯ ಕ್ರಮವನ್ನು ಕೈಗೊಳ್ಳಲಾಗುತ್ತದೆ. ಸಂಶೋಧಕನು '೫೦' ಮಂದಿ ಸಂವಾದಿ (respondants) ಗಳನ್ನು ಸರಳ ಯಾದೃಚ್ಛಿಕ ನಮೂನೆ ವಿಧಾನವನ್ನು ಬಳಸಲಾಗಿಗೆ. ಸರಳ ಯಾದೃಚ್ಛಿಕ ನಮೂನೆ ವಿಧಾನ ಕ್ರಮಗಳನ್ನು ಈ ಉದ್ದೇಶಕ್ಕಾಗಿ ಬಳಕೆಮಾಡಲಾಗಿದೆ. ಸಂಶೋಧಕನು ಇದಕ್ಕಾಗಿ ಪುರುಷ ಸಲಿಂಗಕಾಮಿಗಳನ್ನು ಸಂದರ್ಶಿಲಾಗುತ್ತದೆ.

ಗುಣಮಟ್ಟದ ಸಂಶೋಧನೆಯು ಯಾವ ವಿಧದ ದತ್ತಾಂಶ ಸಂಗ್ರಹಣೆ ವಿಧಾನವನ್ನು ಅನುಸರಿಸಿದೆ ಎಂಬುವುದರ ಮೇಲೆ ಅವಲಂಬಿತವಾಗಿದೆ. ಈ ಅಧ್ಯಯನದಲ್ಲಿ ಸಂಶೋಧಕನು ನೇರ ವೈಯಕ್ತಿಕ ಸಂದರ್ಶನ ವಿಧಾನವನ್ನು ಅಳವಡಿಸಲಾಗಿದ್ದು, ಸಂಶೋಧಕನು ಪ್ರಶ್ನಾವಳಿಯೊಂದನ್ನು ರಚಿಸಿ, ತನ್ನ ಸಂಶೋಧನಾ ಸಂವಾದಿಗಳನ್ನು ನೇರವಾಗಿ ಸಂದರ್ಶಿಸಿ ಅವರ ವೈಯುಕ್ತಿಕ ಸಂಕ್ಷಿಪ್ತ ವ್ಯಕ್ತಿ ಚಿತ್ರ, ಸಾಮಾಜಿಕ ಸ್ಥಿತಿ, ಆರ್ಥಿಕ ಸ್ಥಿತಿ, ಲೈಂಗಿಕತೆ ಹಾಗೂ ಹೆಚ್.ಐ.ವಿ. ಮತ್ತು ಅಪಾಯ ಸಾಧ್ಯತೆ ಬಗ್ಗೆ ಇರುವ ಅವರ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ.

ಸಂದರ್ಶನವನ್ನು ಮಂಗಳೂರು ನಗರದಲ್ಲಿ ಮಾಡಲಾಗುತ್ತದೆ ಅಗತ್ಯವಿರುವ ದತ್ತಾಂಶಗಳನ್ನೂ ಸಂದರ್ಶನ ವಿಧಾನದ ಮೂಲಕ ಕೈಗೊಳ್ಳಲಾಗುತ್ತದೆ ಇದಕ್ಕಾಗಿ ಕೊನೆ ತೆರೆದ ಪ್ರಶ್ನಾವಳಿ ಹಾಗೂ ಕೊನೆ ಮುಚ್ಚಿದ ಪ್ರಶ್ನೆಗಳನ್ನು ಸಂದರ್ಶನ ಪರಿಚೇದ ಮೂಲಕ ಉಪಯೋಗಿಸಲಾಗಿದೆ. ಸಂವಾದಿಯ ಇತರೆ ಅಂಶಗಳನ್ನು ತಿಳಿಯಲು ವೀಕ್ಷಣೆ ವಿಧಾನವನ್ನು ಉಪಯೋಗಿಸಲಾಗುತ್ತದೆ. ಜೊತೆಗೆ ಅನುಷಂಗಿಕ ಅಂಶಗಳನ್ನು ಬಳಸಿಕೊಳ್ಳಲಾಗಿದೆ.

ಸಂಶೋಧನಾ ಸಾಮಾಗ್ರಿಗಳಿಂದ ಕಲೆಹಾಕಿದ, ಸಂಶೋಧನೆಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ಕಲೆ ಹಾಕುವಾಗ ಸಂಶೋಧಕನು ತನ್ನ ಗ್ರಹಿಕೆಯನ್ನೇ ಕೇಂದ್ರವನ್ನಾಗಿಟ್ಟುಕೊಂಡಿರುವುದರಿಂದ ಸಂಖ್ಯಾ ಶಾಸ್ತ್ರ ಪರಿಣಿತಿಯಿಂದ ಈ ಅಂಕಿ ಅಂಶಗಳನ್ನು ವಿಶ್ಲೇಷಿಸಿ ಪರಿಣಾಮಗಳನ್ನು ಕಂಡು ಹಿಡಿಯಲಾಗಿದೆ.

ಸಂಶೋಧನೆಯಲ್ಲಿ ಅಂಕಿ- ಅಂಶಗಳ ವಿಶ್ಲೇಷಣೆಯಿಂದ ಪರಿಣಾಮಗಳನ್ನು ಕಂಡು ಓಡಿದ ನಂತರ, ಪರಿಣಾಮಗಳನ್ನು ಕ್ರಮ ಬದ್ಧವಾಗಿ, ವ್ಯವಸ್ಥಿತವಾಗಿ ಒಂದು ಕೋಷ್ಟಕದ ರೂಪದಲ್ಲಿ ಜೋಡಿಸುವುದು. ಈ ರೀತಿಯಾಗಿ ಪರಿಣಾಮಗಳನ್ನು ಆಧ್ಯತೆಯ ಆಧಾರದ ಅಡಿಪಾಯದ ಮೇಲೆ, ಮೇಲಿನಿಂದ ಕೆಳಗಿನವರೆಗೆ ಕ್ರಮಬದ್ಧವಾಗಿ ನಿಚ್ಚಣಿಕೆಯಂತೆ. ಶ್ರೇಣ್ಯಾತ್ಮಕವಾಗಿ ಜೋಡಿಸಲಾಗಿದೆ.

ಪರಿಣಾಮಗಳನ್ನು ಅರ್ಥೈಸುವಾಗ ಸಂಶೋಧಕನ ಗ್ರಹಿಕೆಗೆ ಅನುಗುಣವಾಗಿದೆಯೇ, ಸಾಮಾನ್ಯ ತತ್ವವನ್ನೂ ನಿರೂಪಿಸಲು ಸಹಕಾರಿಯಾಗಿದೆಯೇ ಎಂಬ ಅಂಶಗಳನ್ನು ಗಮನದಲ್ಲಿರಿಸಿ ಪರಿಣಾಮಗಳನ್ನೂ ಅರ್ಥೈಸಲಾಗಿದೆ.

ಸಂಶೋಧಕನು ತಾನು ಕಂಡುಕೊಂಡ ಪರಿಣಾಮಗಳನ್ನು ಮೌಲ್ಯಮಾಪನ ಮಾಡಿ ಅಂತಿಮ ನಿರ್ಣಯವನ್ನು ಪಡೆಯಬೇಕಾಗಿರುವುದರಿಂದ, ಸಂಶೋಧಕನು ಮತ್ತೊಮ್ಮೆ ಚಿಕ್ಕ ಚಿಕ್ಕ ನಮೂನೆಗಳನ್ನು ಪಡೆದುಕೊಂಡು ಅವುಗಳನ್ನು ಪರೀಕ್ಷೆಗೆ ಗುರಿಪಡಿಸಲಾಗುತ್ತದೆ. ಆಗ ಬಂದ ಪರಿಣಾಮಗಳನ್ನು ಈ ಮೊದಲು ಕಂಡುಕೊಂಡ ಪರಿಣಾಮಗಳೊಂದಿಗೆ ಹೋಲಿಸಿನೋಡಿ ಅವುಗಳನ್ನು ನಿಖರವಾದ ಪರೀಕ್ಷೆಗೆ ಗುರಿಪಡಿಸಿ ನಂತರ ಅಂತಿಮ ನಿರ್ಣಯಕ್ಕೆ ಬರಲಾಗಿದೆ.

೧.೩.೨ ಅಧ್ಯಯನದ ಪ್ರಾಮುಖ್ಯತೆ

ಪ್ರಸ್ತುತ ಈ ಅಧ್ಯಯನವು ಪುರುಷಸಲಿಂಗಕಾಮಿಗಳ ವೈಯಕ್ತಿಕ ಸಂಕ್ಷಿಪ್ತ ವ್ಯಕ್ತಿ ಚಿತ್ರ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ, ಬಗ್ಗೆ ವಿವರಿಸುವುದರಿಂದ, ಸಮಾಜದ ಮುಖ್ಯವಾಹಿನಿಯಲ್ಲಿ 'ಪುರುಷ ಸಲಿಂಗಕಾಮಿಗಳ' ಸಮುದಾಯದ ಇರುವಿಕೆಯನ್ನು ಅವರ ಎದುರಿಸುತ್ತಿರುವ ವೈಕ್ತಿಕ ಬದುಕಿನ ತೊಂದರೆಗಳನ್ನು ಸಮಾಜದ ಮುಂದೆ ತೆರೆದಿಡುತ್ತದೆ.

ಆಧುನಿಕ ನಾಗರಿಕ ಸಮಾಜದ ಬೆಳವಣಿಗೆಯಲ್ಲಿ ಈ ಸಮುದಾಯವನ್ನು ಕಡೆಗಣಿಸುವಂತಿಲ್ಲ. ಅವರ ಸ್ವಂತಿಕೆ, ಅವರ ಸಮಸ್ಯೆಗಳ ನಿವಾರಣೆಗೆ ಕ್ರಮಗಳ ಬಗ್ಗೆ, ಸಮುದಾಯದ ಪ್ರಸ್ತುತ ಬೇಡಿಕೆಗಳ ಬಗ್ಗೆ ಈ ಅಧ್ಯಯನವು ವಿವರಣೆ ನೀಡುವುದರಿಂದ, ಮಂಗಳೂರು ನಗರದಲ್ಲಿನ ಪುರುಷಸಲಿಂಗಕಾಮಿ ಸಮುದಾಯವರಿಗೆ ಸರಕಾರ ಹಾಗೂ ವಿವಿಧ ಸರಕಾರಿ ಇಲಾಖೆಗಳು ಯೋಜನೆ ಸಮುದಾಯವನ್ನು ಸಮಜದ ಮುಖ್ಯವಾಹಿನಿಗೆ ಸೇರಿಸಿಕೊಳ್ಳಲು ಸಹಕಾರಿಯಾಗಬಹುದು. ಮುಂದೆ ಸಮಾಜ

ಕಾರ್ಯಕರ್ತರಿಗೆ ಸರಕಾರೇತರ ಸಂಘ ಸಂಸ್ಥೆಗಳಿಗೆ ಇವರ ಬಗ್ಗೆ ತಿಳಿಯಲು, ಯೋಜನೆಗಳನ್ನು ಹಮ್ಮಿಕೊಳ್ಳಲು ಸಹಾಯವಾಗಬಹುದು.

ಭವಿಷ್ಯದಲ್ಲಿ ಇವರ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆಯುವ ಸಂದರ್ಭದಲ್ಲಿ ಸಂಶೋಧಕರಿಗೆ ಸಹಾಯದ ಜೊತೆಗೆ, ಹೆಚ್.ಐ.ವಿ ನಿಯಂತ್ರಣ ಯೋಜನೆ ಹಮ್ಮಿಕೊಳ್ಳುವಾಗ ಅನುಸರಿಸುವ ಕಾರ್ಯತಂತ್ರಗಳ ಅಭಿವೃದ್ಧಿಗೂ ಅನುಕೂಲವಾಗಬಹುದು.

ಅಧ್ಯಾಯ – ೨

ಮಾಹಿತಿ ವಿಶ್ಲೇಷಣೆ

ವೈಯುಕ್ತಿಕ ಮಾಹಿತಿ

ಈ ಸಂಶೋಧನ ಅಧ್ಯಯನದಲ್ಲಿ ಸಂಶೋಧಕರು ಧರ್ಮ ಹಾಗೂ ಜಾತಿಗೆ ಸಂಬಂಧಿಸಿ ೫೦ ಸಂವಾದಿಗಳನ್ನು ಸಂದರ್ಶಿಸಲಾಗಿ ಇವರಲ್ಲಿ ೩೦ (೬೦%) ಮಂದಿ ಹಿಂದೂಗಳು, ೧೪(೨೮%) ಮಂದಿ ಮುಸ್ಲಿಮರು ಹಾಗೂ ೬ (೧೨%) ಮಂದಿ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರಾಗಿದ್ದಾರೆ.

ಜಾತಿ ಆದಾರದಲ್ಲಿ ನೋಡಿದಾಗ ೩೦ ಮಂದಿ ಹಿಂದೂ ಸಂವಾದಿಗಳಲ್ಲಿ ಕೇವಲ ೦೩(೧೦%) ಮಂದಿ ಮಾತ್ರ ಉನ್ನತ ವರ್ಗಕ್ಕೂ, ೧೬ (೫೩%) ಮಂದಿ ಹಿಂದುಳಿದವರ್ಗಕ್ಕೆ ಸೇರಿದವರಾಗಿದ್ದು. ೪ (೧೪%) ಪರಿಶಿಷ್ಟ ಜಾತಿಗೂ ಹಾಗೂ ೭ (೨೩%) ಸಂವಾದಿಗಳುಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿದ್ದಾರೆ.

ಈ ಸಂಶೋಧನ ಅಧ್ಯಯನದಲ್ಲಿ ಸಂಶೋಧಕರು ಶಿಕ್ಷಣ ಹಾಗೂ ವಯಸ್ಸುಗೆ ಸಂಬಂಧಿಸಿ ೫೦ ಸಂವಾದಿಗಳನ್ನು ಸಂದರ್ಶಿಸಲಾಗಿ ಇವರಲ್ಲಿ ೨ (೪%) ಸಂವಾದಿಗಳು ಅನಕ್ಷರಸ್ಥರಾಗಿದ್ದು, ೧೬(೩೨%) ಸಂವಾದಿಗಳು ಪ್ರಾಥಮಿಕ ಶಿಕ್ಷಣವನ್ನು ಮುಗಿಸಿರುತ್ತಾರೆ, ೨೨ (೪೪%) ಸಂವಾದಿಗಳು ಪ್ರೌಢಶಿಕ್ಷಣವನ್ನು ಮುಗಿಸಿರುತ್ತಾರೆ. ಮತ್ತು ೦೭ (೧೪%) ಸಂವಾದಿಗಳು ಪದವೀಪೂರ್ವಶಿಕ್ಷಣವನ್ನು ಮುಗಿಸಿರುತ್ತಾರೆ. ಹಾಗೂ ೦೩(೦೬%) ಸಂವಾದಿಗಳು ಪದವಿ / ಸ್ನಾತಕೋತ್ತರ ಶಿಕ್ಷಣ ಪಡೆದಿರುತ್ತಾರೆ.

ಸಂಶೋಧಕರು ಈ ಸಂಶೋಧನ ಅಧ್ಯಯನದಲ್ಲಿ ವೈವಾಹಿಕ ಸ್ಥಿತಿ ಹಾಗೂ ಉಧ್ಯೋಗ ಸ್ಥಿತಿ ಯನ್ನು ಅರಿಯಲು ೫೦ ಸಂವಾದಿಗಳನ್ನುಸಂದರ್ಶಿಸಲಾಗಿ ಇವರಲ್ಲಿ ೩೦(೬೦%) ಸಂವಾದಿಗಳು ಅವಿವಾಹಿತಗಿದ್ದು, ೧೭ (೩೪%) ಸಂವಾದಿಗಳು ವಿವಾಹಿತರಾಗಿದ್ದಾರೆ. ೦೨(೦೪%) ಸಂವಾದಿಗಳು ವಿಚ್ಛೇದಿತರು ಹಾಗೂ ೦೧ (೦೨%) ಸಂವಾದಿಯು ತನ್ನ ಹೆಂಡತಿಯಿಂದ ದೂರವಾಗಿರುತ್ತಾರೆ.

ಉಧ್ಯೋಗ ಸ್ಥಿತಿ ಯನ್ನು ಪರಿಗಣಿಸಿದಾಗ ೫೦ ಸಂವಾದಿಗಳಲ್ಲಿ ೦೬ (೧೨%) ಸಂವಾದಿಗಳು ನಿರುದ್ಯೊಗಸ್ಥರಾಗಿದ್ದು, ೦೮ (೧೬%) ಸಂವಾದಿಗಳು ಪೂರ್ಣಾವಧಿಉದ್ಯೊಗಸ್ಥರಾಗಿರುತ್ತಾರೆ. ಮತ್ತು ೩೨ (೬೨%) ಸಂವಾದಿಗಳು ಭಾಗಶ: ಉದ್ಯೊಗಸ್ಥದಲ್ಲಿದ್ದು, ಹಾಗೂ ೦೪(೦೮%) ಸಂವಾದಿಗಳು ವಿದ್ಯಾರ್ಥಿಗಳಾಗಿರುತ್ತಾರೆ.

೨.೧ ಧರ್ಮ ಹಾಗೂ ಜಾತಿ

ಧರ್ಮ ಮತ್ತು ಜಾತಿ ವ್ಯವಸ್ಥೆಯ ಪರಸ್ಪರ ಪೂರಕ ಸಂಬಂಧವನ್ನು ಸಮಾಜದಲ್ಲಿ ಕಾಣಬಹುದು. ಜಾತಿ ವ್ಯವಸ್ಥೆಯು ವಿವಿಧ ಜಾತಿಗಳ ನಡುವಿನ ಸಾಮಾಜಿಕ, ಆರ್ಥಿಕ ಭಿನ್ನತೆಗೆ ಕಾರಣವಾಗಿದೆ ಎನ್ನಬಹುದು. ಅದೇ ರೀತಿ ಪುರುಷ ಸಲಿಂಗಕಾಮಿ ಸಮುದಾಯದಲ್ಲೂ ಇದರ ಇರುವಿಕೆನ್ನು ಕಾಣಬಹುದು.

ಕೋಷ್ಟಕ ೨.೧ ಧರ್ಮ ಹಾಗೂ ಜಾತಿ

ಧರ್ಮ	ಜಾತಿ										
	ಉನ್ನತ		ಹಿಂದುಳಿದ ವರ್ಗ		ಪರಿಶಿಷ್ಟ ಜಾತಿ		ಪರಿಶಿಷ್ಟ ವರ್ಗ		ಅಲ್ಪಸಂಖ್ಯಾತರು		ಒಟ್ಟು
	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ
ಹಿಂದೂ	೦೩	೧೦	೧೬	೫೩	೦೪	೧೪	೦೭	೨೩	೦	೦	೩೦
ಮುಸ್ಲಿಂ	೦	೦	೦	೦	೦	೦	೦	೦	೧೪	೧೦೦	೧೪
ಕ್ರಿಶ್ಚಿಯನ್	೦	೦	೦	೦	೦	೦	೦	೦	೦೬	೧೦೦	೦೬
ಒಟ್ಟು	೦೩	೦೬	೧೬	೩೨	೦೪	೦೮	೦೭	೧೪	೨೦	೪೦	೫೦

ಈ ಮೇಲಿನ ಕೋಷ್ಟಕದಲ್ಲಿ ಪುರುಷ ಸಲಿಂಗಕಾಮಿಗಳ ಧರ್ಮ ಹಾಗೂ ಅವರ ಜಾತಿಯನ್ನು ತುಲನೆ ಮಾಡಿದಾದ ಒಂದೂಗಳ ಸಂಖ್ಯೆ ೫೦ರಲ್ಲಿ ೩೦ ಇರುವುದು ಕಂಡುಬರುತ್ತದೆ. ೩೦ ಮಂದಿ ಸಂವಾದಿಗಳಲ್ಲಿ ೧೬ (೫೩%) ಮಂದಿ ಹಿಂದುಳಿದವರ್ಗಕ್ಕೆ ಸೇರಿದವರಾಗಿದ್ದು. ಕೇವಲ ೦೩ (೧೦%) ಮಂದಿ ಮಾತ್ರ ಉನ್ನತ ವರ್ಗದವರಾಗಿರುತ್ತಾರೆ. ಅಂದರೆ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದ ಜನರೇ ಇರುವುದರಿಂದ ಜಾತಿ ಸ್ತರದ ಪ್ರಭಾವವನ್ನು ಇಲ್ಲಿ ಗಮನಿಸಬಹುದಾಗಿದೆ. ಆದರೆ ಕೇವಲ ೦೩ (೧೦%) ಮಂದಿಮಾತ್ರ ಉನ್ನತ ವರ್ಗದವರೆಂದು ಒಪ್ಪಿಕೊಂಡವರು ಇರುವುದನ್ನು ನೋಡಿದಾಗ, ಉನ್ನತ ಜಾತಿ ವ್ಯವಸ್ಥೆಯ ಆರ್ಥಿಕ ಹಾಗೂ ಸಾಮಾಜಿಕ ಅಂಶಗಳು ತಾವು ಈ ಸಮುದಾಯಕ್ಕೆ ಸೇರಿದವರೆಂದು ಒಪ್ಪಿಕೊಳ್ಳುವಲ್ಲಿ ಅಡಚಣೆಯಾಗಿರಬಹುದೆಂದು ತಿಳಿದು ಕೊಳ್ಳಬಹುದು. ಧಾರ್ಮಿಕವಾಗಿ ಅಲ್ಪಸಂಖ್ಯಾತರಾಗಿರುವ ಮುಸ್ಲಿಂಮರು ೧೪ ಮಂದಿ ಹಾಗೂ ಕೇವಲ ೦೬ ಮಂದಿ ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದವರಾಗಿರುವುದು ಗಮನಿಸ ಬಹುದಾಗಿದೆ. ಬಹುಸಂಖ್ಯಾತರಾದ ಆ ಹಿಂದೂಗಳಲ್ಲಿ ಜಾಸ್ತಿ ಪುರುಷ ಸಲಿಂಗಕಾಮಿ ಸಮುದಾಯದವರನ್ನು ಕಾಣಬಹುದು, ಆ ನಂತರ ಮುಸ್ಲಿಂ, ತದನಂತರ ಕ್ರಿಶ್ಚಿಯನ್ ಇಲ್ಲಿ ನಾವು ಗಮನಿಸಬಹುದಾದ ಅಂಶವೇನೆಂದರೆ ಸಮಾಜದಲ್ಲಿನ ಬಹುಸಂಖ್ಯಾತ ಹಾಗೂ ಅಲ್ಪಸಂಖ್ಯಾತರ ಜನಸಂಖ್ಯೆ ವ್ಯತ್ಯಾಸ ಪ್ರಭಾವವನ್ನು ಇಲ್ಲಿ ಕಾಣಬಹುದು.

೨.೨ ಶಿಕ್ಷಣ ಹಾಗೂ ವಯಸ್ಸು

ಶೈಕ್ಷಣಿಕವಾಗಿ ಮುಂದುವರಿದ ಜಿಲ್ಲೆಯಾದ ದಕ್ಷಿಣ ಕನ್ನಡವು, ಶೈಕ್ಷಣಿಕ ಬೆಳವಣಿಗೆಯ ಗತಿ ತೀವ್ರವಾಗಿ ಏರುತ್ತಿವೆ ಎನ್ನಬಹುದು. ಯುವ ಪೀಳಿಗೆಯು ಹೆಚ್ಚು ಶೈಕ್ಷಣಿಕ ಅವಕಾಶವನ್ನು ಪಡೆದುಕೊಂಡಿದೆ ಎನ್ನಬಹುದು.

ಕೋಷ್ಟಕ ೨.೨ ಶಿಕ್ಷಣ ಹಾಗೂ ವಯಸ್ಸು

ವಯಸ್ಸು	ಶಿಕ್ಷಣ										
	ಅನಕ್ಷರಸ್ಥ		ಪ್ರಾಥಮಿಕ		ಪ್ರೌಢ		ಪದವೀಪೂರ್ವ		ಪದವಿ / ಸ್ನಾತಕೋತ್ತರ		ಒಟ್ಟು
	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ
೧೮-೨೫	೦	೦	೦೫	೨೭	೦೬	೩೩	೦೫	೨೭	೦೨	೧೩	೧೮
೨೬-೩೩	೦	೦	೦೭	೩೦	೧೩	೫೭	೦೨	೦೯	೦೧	೦೪	೨೩
೩೪-೪೧	೦	೦	೦೪	೫೭	೩	೪೨	೦	೦	೦	೦	೦೭
೪೨-೪೮	೦೨	೧೦೦	೦	೦	೦	೦	೦	೦	೦	೦	೦೨
ಒಟ್ಟು	೦೨	೦೪	೧೬	೩೨	೨೨	೪೪	೦೭	೧೪	೦೩	೦೬	೫೦

ಈ ಮೇಲಿನ ಕೋಷ್ಟಕವು ಪುರುಷ ಸಲಿಂಗಕಾಮಿಗಳು ಅವರ ಶಿಕ್ಷಣ ಮಟ್ಟ ಮತ್ತು ಅವರ ವಯಸ್ಸಿನ ಸಂಬಂಧವನ್ನು ಸಮೀಕರಿಸಲಾಗಿದೆ. ಇಲ್ಲಿ ಒಟ್ಟು ೫೦ ಸಂವಾದಿಗಳಲ್ಲಿ ಹೆಚ್ಚು ಅಂದರೆ ೨೩ ಸಂವಾದಿಗಳು ೨೬ ರಿಂದ ೩೩ ವರ್ಷ ವಯಸ್ಸಿನವರಾಗಿರುತ್ತಾರೆ. ಇವರಲ್ಲಿ ೧೩ (೫೭%) ಸಂವಾದಿಗಳು ಪ್ರೌಢ ಶಿಕ್ಷಣವನ್ನು ಪ್ರೂರೈಸಿರುತ್ತಾರೆ. ೦೭ (೩೦%) ಸಂವಾದಿಗಳು ಪ್ರಾಥಮಿಕ ಶಿಕ್ಷಣವನ್ನು ಕೇವಲ ೦೧ (೪%) ಒಬ್ಬರು ಪದವಿ/ಸ್ನಾತಕೋತರ ವಿಧ್ಯಾಭ್ಯಾಸ ಪಡೆದಿರುತ್ತಾರೆ. ಅತಿ ಕಡಿಮೆ ಅಂದರೆ ೦೨ ಸಂವಾದಿಗಳು ಮಾತ್ರ ಅನಕ್ಷರಸ್ಥರಾಗಿದ್ದಾರೆ ಇವರು ೪೨-೪೮ ವರ್ಷ ವಯಸ್ಸಿನವರಾಗಿರುತ್ತಾರೆ. ೨೨ (೪೪%) ಸಂವಾದಿಗಳು ಪ್ರೌಢ ಶಿಕ್ಷಣವನ್ನು ಪಡೆದಿದ್ದರೆ. ಆ ನಂತರ ೧೬ (೩೨) ಸಂವಾದಿಗಳು ಪ್ರಾಥಮಿಕ ವಿದ್ಯಾಭ್ಯಾಸ ಪೂರೈಸಿರುತ್ತಾರೆ. ಹೆಚ್ಚು ವಯಸ್ಸಿನವರು ಕಡಿಮೆ ಶಿಕ್ಷಣವನ್ನು ಪಡೆದಿರುವುದನ್ನು ಇಲ್ಲಿ ನಾವು ಕಾಣಬಹುದು. ಏಕೆಂದರೆ ಆ ಕಾಲದಲ್ಲಿ ಶೈಕ್ಷಣಿಕ ಸೌಲಭ್ಯಗಳ ಲಭ್ಯತೆ ಇವತ್ತಿಗಿಂದ ಕಡಿಮೆ ಇತ್ತು ಎನ್ನುವುದನ್ನು ಗಮನಿಸಬಹುದು

೨.೩ ವೈವಾಹಿಕ ಸ್ಥಿತಿ ಹಾಗೂ ಉದ್ಯೋಗ ಸ್ಥಿತಿ

ವೈವಾಹಿಕ ಸ್ಥಿತಿ ಮತ್ತು ಉದ್ಯೋಗ ಸ್ಥಿತಿಗಳ ನಡುವೆ ಪರಸ್ಪರ ಸಂಬಂಧವಿದೆ ಎನ್ನಬಹುದು. ವೈವಾಹಿಕ ಜೀವನವು ವ್ಯಕ್ತಿಯ ಎರಡನೆಯ ಹಂತದ ಬದುಕಾಗಿರುವುದರಿಂದ ಇದು ಪ್ರಮುಖ ಜೀವನ ಮಟ್ಟವು ಹೌದು. ವೈವಾಹಿಕ ಜೀವನವು ಆರ್ಥಿಕವಾಗಿ ಸ್ವಲ್ಪ ಹೆಚ್ಚು ಹೊರೆಯಾಗಿರುವುದರಿಂದ ದುಡಿಮೆ ಹಾಗೂ ಗಳಿಕೆಗೆ ಹೆಚ್ಚು ಒತ್ತು ನೀಡಬೇಕಾಗಿರುತ್ತದೆ. ಪುರುಷ ಸಲಿಂಗಕಾಮಿಗಳ ವೈವಾಹಿಕ ಸ್ಥಿತಿ ಹಾಗೂ ಉಧ್ಯೋಗ ಸ್ಥಿತಿಯನ್ನು ಹೋಲಿಕೆ ಮಾಡಲಾಗಿದೆ.

ಕೋಷ್ಟಕ ೨.೩ ವೈವಾಹಿಕ ಸ್ಥಿತಿ ಹಾಗೂ ಉದ್ಯೋಗ ಸ್ಥಿತಿ

ಉದ್ಯೋಗ ಸ್ಥಿತಿ	ವೈವಾಹಿಕ ಸ್ಥಿತಿ								
	ಅವಿವಾಹಿತ		ವಿವಾಹಿತ		ವಿಚ್ಛೇದಿತ		ದೂರವಾಗು		ಒಟ್ಟು
	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ
ನಿರುದ್ಯೋಗಸ್ಥ	೦೬	೧೨	೦	೦	೦	೦	೦	೦	೦೬
ಪೂರ್ಣಾವಧಿಉದ್ಯೋಗಸ್ಥ	೦೧	೧೨	೬	೭೬	೦೧	೧೨	೦	೦	೦೮
ಭಾಗಶ:, ಉದ್ಯೋಗಸ್ಥ	೧೯	೫೯	೧೧	೩೫	೦೧	೦೩	೦೧	೦೩	೩೨
ವಿದ್ಯಾರ್ಥಿ	೦೪	೦೨	೦	೦	೦	೦	೦	೦	೦೪
ಒಟ್ಟು	೩೦	೬೦	೧೭	೩೪	೦೨	೦೪	೦೧	೦೨	೫೦

ಈ ಮೇಲಿನ ಕೋಷ್ಟದಲ್ಲಿ ಒಟ್ಟು ೫೦ ಸಂವಾದಿಗಳಲ್ಲಿ ೩೨ ಸಂವಾದಿಗಳು ಭಾಗಶಃ ಉಧ್ಯೋಗಸ್ಥರಾಗಿರುತ್ತಾರೆ. ಇವರಲ್ಲಿ ೧೯ (೫೯%) ಮಂದಿ ಅವಿವಾಹಿತರಾಗಿರುತ್ತಾರೆ, ಕೇವಲ ೧೧ (೩೫%) ಮಂದಿ ವಿವಾಹಿತರಾಗಿದ್ದು. ತಲಾ ಒಬ್ಬೊಬ್ಬರು ವಿಚ್ಛೇದಿತ ಹಾಗೂ ತನ್ನ ಹೆಂಡತಿಯಿಂದ ದೂರವಾದವರು ಇರುತ್ತಾರೆ. ಕಡಿಮೆ ಅಂದರೆ ೦೬ ಮಂದಿ ನಿರುಧ್ಯೋಗಸ್ಥರಾಗಿದ್ದಾರೆ. ಇವರಲ್ಲಿ ೦೬ (೧೨%) ಮಂದಿ ಅವಿವಾಹಿತರಾಗಿದ್ದಾರೆ. ೩೦ (೬೦%) ಸಂವಾದಿಗಳು ಅವಿವಾಹಿತರಾಗಿಯೂ ಕೇವಲ ೧೭ (೩೪%) ಸಂವಾದಿಯ ವಿವಾಹಿತರಾಗಿರುತ್ತಾರೆ.

ಪುರುಷ ಸಲಿಂಗಕಾಮಿಗಳು ಹೆಚ್ಚು ವಿವಾಹಕ್ಕೆ ಇಷ್ಟಪಡದಿರುವುದು ಹಾಗೂ ತಮ್ಮ ಸಹವರ್ತಿಗಳೊಂದಿಗೆ ಹೆಚ್ಚು ಸಮಯ ಕಳೆಯುವುದರಿಂದ, ಕೆಲಸದ ಸ್ಥಳಗಳಲ್ಲಿ ಅಪಮಾನ, ಬಾಲತ್ಕಾರ, ಅಪಹಾಸ್ಯಕ್ಕೆ ಇಡಾಗುವ ಸಂಭವದಿಂದ ಉಧ್ಯೋಗದ ವಿಷಯದಲ್ಲಿ ಹೆಚ್ಚು ಆಸಕ್ತಿ ಹೊಂದಿದವರಾಗಿರುವುದಿಲ್ಲ.

೨.೪ ಕುಟುಂಬದಲ್ಲಿರುವ ಸದಸ್ಯರು ಹಾಗೂ ಕೌಟುಂಬಿಕ ಘರ್ಷಣೆ

ಕೌಟುಂಬಿಕ ವಾತಾವರಣವು ವ್ಯಕ್ತಿಯ ವ್ಯಕ್ತಿತ್ವ ಹಾಗೂ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುವುದನ್ನು ನಾವು ಕಾಣಬಹುದು. ಹೆಚ್ಚಿನ ಕೌಟುಂಬಿಕ ಘರ್ಷಣೆ ವ್ಯಕ್ತಿಯ ಮನೋಭಾವದ ಮೇಲೆ ವ್ಯತಿರಿಕ್ತ ಪ್ರಭಾವವನ್ನು ಕಾಣಬಹುದು.

ಕೋಷ್ಟಕ ೨.೪ ಕುಟುಂಬದಲ್ಲಿರುವ ಸದಸ್ಯರು ಹಾಗೂ ಕೌಟುಂಬಿಕ ಘರ್ಷಣೆ

ಕೌಟುಂಬಿಕ ಘರ್ಷಣೆ	ಕುಟುಂಬದಲ್ಲಿರುವ ಸದಸ್ಯರು								
	೧ರಿಂದ೨		೩ರಿಂದ ೪		೫ರಿಂದ೬		೭ರಿಂದ೮		ಒಟ್ಟು
	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ
ಹೆಚ್ಚು	೦	೦	೦೫	೫೫	೦೩	೩೪	೦೧	೧೧	೦೯
ಸಾಧಾರಣ	೦	೦	೧೮	೬೫	೦೬	೨೧	೦೪	೧೪	೨೮
ಕಡಿಮೆ	೦೨	೦೪	೦೪	೦೮	೦೭	೧೪	೦	೦	೧೩
ಒಟ್ಟು	೦೨	೦೪	೨೭	೫೪	೧೬	೩೨	೦೫	೧೦	೫೦

ಈ ಮೇಲಿನ ಕೋಷ್ಟಕವು ಕುಟುಂಬದ ಒಟ್ಟು ಸದಸ್ಯರು ಹಾಗೂ ಕೌಟುಂಬಿಕ ಘರ್ಷಣೆಯ ಸಂಬಂಧವನ್ನು ವಿವರಿಸಲಾಗಿದೆ. ೫೦ ಸಂವಾದಿಗಳಲ್ಲಿ ೨೮ ಸಂವಾದಿಗಳು ತಮ್ಮ ಕುಟುಂಬದಲ್ಲಿ ಕೌಟುಂಬಿಕ ಜಗಳಗಳು ಸಾಧಾರಣವಾಗಿ ಕಂಡುಬರುತ್ತದೆ ಎಂದು ಒಪ್ಪಿಕೊಂಡಿದ್ದಾರೆ. ಇವರಲ್ಲಿ ೦೫ (೫೫%) ಮಂದಿಯ ಕುಟುಂಬವು ೩ ರಿಂದ ೪ ಸದಸ್ಯರು ತಮ್ಮ ಕುಟುಂಬದಲ್ಲಿ ಇದ್ದಾರೆ. ೩ (೩೪%) ಮಂದಿಯ ಕುಟುಂಬವು ೫ ರಿಂದ ೬ ಸದಸ್ಯರು ಹೊಂದಿದ್ದ ಕೇವಲ ೧ (೧೧%) ಒಬ್ಬರ ಕುಟುಂಬವು ೭ ರಿಂದ ೮ಮಂದಿ ಇರುತ್ತಾರೆ. ಕೇವಲ ೯ ಮಂದಿ ಸಂವಾದಿಗಳು ತಮ್ಮ ಕುಟುಂಬದಲ್ಲಿ ಹೆಚ್ಚು ಕೌಟುಂಬಿಕ ಘರ್ಷಣೆ ಇದೆ ಎಂದು ಒಪ್ಪಿಕೊಂಡಿದ್ದಾರೆ ಇವರಲ್ಲಿ ೦೫ (೫೫%) ಮಂದಿಯ ಕುಟುಂಬದಲ್ಲಿ ೩ ರಿಂದ ೦೪ ಮಂದಿ ಹಾಗೂ ೦೩ (೩೪%) ಮಂದಿ ಕುಟುಂಬದಲ್ಲಿ ೦೫ ರಿಂದ ೦೬ ಸದಸ್ಯರಿದ್ದು ಕೇವಲ ೦೧ (೧೧%) ಮನೆಯಲ್ಲಿ ಹೆಚ್ಚು ಕೌಟುಂಬಿಕ ಘರ್ಷಣೆ ಇದ್ದು ಇವರ ಮನೆಗಳಲ್ಲಿ ೭ ರಿಂದ ೦೮ ಸದಸ್ಯರಿರುತ್ತಾರೆ. ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿ ಕೇಂದ್ರಿಕೃತ ಕುಟುಂಬಗಳು ಜಾಸ್ತಿಯಾಗಿದ್ದು, ಕುಟುಂಬದ ಸದಸ್ಯರ ಸಂಖ್ಯೆಯ ಕಡಿಯಾಗುತ್ತಾ ಬಂದಿದೆ. ಎನ್ನಬಹುದು.

೨.೫ ಬಾಲ್ಯದಲ್ಲಿ ನೆರೆಹೊರೆಯವರೊಂದಿಗೆ ಹೆಚ್ಚಿನ ಒಡನಾಟ ಹಾಗೂ ಶಾಲೆಯ ವಿಧ

ಬಾಲ್ಯವು ವ್ಯಕ್ತಿಯ ವ್ಯಕ್ತಿತ್ವ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎನ್ನಬಹುದು. ಸಾಮಾಜಿಕರಣ ಪ್ರಕ್ರಿಯೆಯಲ್ಲಿ ಬಾಲ್ಯವು ಪ್ರಮುಖ ಘಟ್ಟ, ಮನೆ, ನೆರೆಮನೆ, ನೆರೆಹೊರೆ, ಶಾಲೆ, ಸಮಾಜವು ವ್ಯಕ್ತಿತ್ವದ ಮೇಲೆ ತನ್ನ ಪ್ರಭಾವವನ್ನು ಬೀರಿದೆ. ಪುರುಷ ಸಲಿಂಗಕಾಮಿ ಸಮುದಾಯದವರು ತಮ್ಮ ಬಾಲ್ಯದಲ್ಲಿ ತಮ್ಮ ಒಡನಾಟ ಹಾಗೂ ಕಲಿತ ಶಾಲೆಯ ವಿಧವು ಮನೋಭಾವದ ಮೇಲೆ ಬೀರಿರುವ ಪರಿಣಾಮವನ್ನು ಅರ್ಥೈಸಬಹುದು.

ಕೋಷ್ಟಕ ೨.೫ ಬಾಲ್ಯದಲ್ಲಿ ನೆರೆಹೊರೆಯವರೊಂದಿಗೆ ಹೆಚ್ಚಿನ ಒಡನಾಟ ಹಾಗೂ ಶಾಲೆಯ ವಿಧ

ಬಾಲ್ಯದಲ್ಲಿ ನೆರೆಹೊರೆಯವರೊಂದಿಗೆ ಹೆಚ್ಚಿನ ಒಡನಾಟ	ಶಾಲೆಯ ವಿಧ				
	ಸಂಯುಕ್ತ		ಗಂಡುಮಕ್ಕಳ		ಒಟ್ಟು
	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ
ಹುಡುಗರು	೨೨	೭೬	೦೭	೨೪	೨೯
ಹುಡುಗಿಯರು	೧೬	೭೬	೦೫	೨೪	೨೧
ಒಟ್ಟು	೩೮	೭೬	೧೨	೨೪	೫೦

ಈ ಮೇಲಿನ ಕೋಷ್ಟಕವು ಬಾಲ್ಯದಲ್ಲಿ ನೆರೆಹೊರೆಯವರೊಂದಿಗೆ ಹೆಚ್ಚಿನ ಒಡನಾಟ ಹಾಗೂ ಅವರು ಕಲಿತ ಶಾಲೆಯ ನಡುವೆ ಸಂಬಂಧ ಕಲ್ಪಿಸಲಾಗಿದೆ. ೫೦ ಮಂದಿ ಸಂವಾದಿಗಳಲ್ಲಿ ೨೯ ಮಂದಿಗೆ ಹುಡುಗರೊಂದಿಗೆ ಹೆಚ್ಚಿನ ಒಡನಾಟ ಹೊಂದಿದ್ದರು. ಅವರಲ್ಲಿ ೨೨ (೭೬%) ಸಂವಾದಿಗಳು ಸಂಯುಕ್ತ ಶಾಲೆಯಲ್ಲಿ ಕಲಿತಿರುತ್ತಾರೆ, ೦೭ (೨೪%) ಸಂವಾದಿಗಳಿಗೆ ಹುಡುಗಿಯರೊಂದಿಗೆ ಹೆಚ್ಚಿನ ಬಾಲ್ಯದಲ್ಲಿ ಒಡನಾಟ ಇರುವುದು ಕಂಡುಬಂದಿದ್ದು ಇವರಲ್ಲಿ ೧೬ (೭೬%) ಸಂವಾದಿಗಳು ಸಂಯುಕ್ತ ಶಾಲೆಯಲ್ಲಿ ತಮ್ಮ ವಿದ್ಯಾಬ್ಯಾಸ ಕೈಗೊಂಡಿದ್ದರು. ೦೫ (೨೪%) ಸಂವಾದಿಗಳು ಗಂಡುಮಕ್ಕಳ ಶಾಲೆಯಲ್ಲಿ ಕಲಿತ್ತಿದ್ದರೂ ಹೆಣ್ಣು ಮಕ್ಕಳೊಂದಿಗೆ ಬಾ಼ಲ್ಯದಲ್ಲಿ ಹೆಚ್ಚಿನ ಒಡನಾಟ ಕಂಡುಬಂದಿದೆ. ಹೆಣ್ಣು ಮಕ್ಕಳೊಂದಿಗೆ ಬಾಲ್ಯದಲ್ಲಿ ಹೆಚ್ಚಿನ ಒಡನಾಟವು ಸಂವಾದಿಗಳಲ್ಲಿ ಹೆಣ್ಣಿನ ಮನೋಭಾವ ಬೆಳವಣಿಗೆ ಹೊಂದಲು ಪ್ರಭಾವ ಬೀರಿದೆ ಎಂದು ತೀರ್ಮಾನಿಸಬಹುದು

೨.೬ ಉಡುಗೆ ತೊಡುಗೆ ವಿಚಾರದಲ್ಲಿ ಆಸಕ್ತಿ ಹಾಗೂ ಹಾವಭಾವ ವ್ಯಕ್ತಪಡುವಲ್ಲಿ ಆಸಕ್ತಿ

ಪುರುಷ ಸಲಿಂಗಕಾಮಿಗಳಲ್ಲಿ ಹೆಚ್ಚಾಗಿ ಹೆಣ್ಣಿನ ಮನೋಭಾವ ಪ್ರಭಾವ ಇರುವುದರಿಂದ ಹಾವಭಾವ ಹಾಗೂ ಉಡುಗೆ ವಿಚಾರಲ್ಲಿ ಪರಸ್ಪರ ಸಂಬಂಧ ಇರುತ್ತದೆ ಎಂಬುದನ್ನು ಪರಿಗಣಿಸಬಹುದು.

ಕೋಷ್ಟಕ ೨.೬ ಉಡುಗೆ ತೊಡುಗೆ ವಿಚಾರದಲ್ಲಿ ಆಸಕ್ತಿ ಹಾಗೂ ಹಾವಭಾವ ವ್ಯಕ್ತಪಡುವಲ್ಲಿ ಆಸಕ್ತಿ

ಹಾವಭಾವ ವ್ಯಕ್ತಪಡಿಸುವಲ್ಲಿ ಆಸಕ್ತಿ	ಉಡುಗೆ ತೊಡುಗೆ ವಿಚಾರದಲ್ಲಿ ಆಸಕ್ತಿ						
	ಹೆಣ್ಣಿನ		ಗಂಡಿನ		ಎರಡೂ		ಒಟ್ಟು
	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ
ಗಂಡಿನ	೦೧	೦೬	೧೫	೭೮	೦೨	೧೬	೧೮
ಹೆಣ್ಣಿನ	೧೯	೯೦	೦	೦	೦೨	೧೦	೨೧
ಸಂದರ್ಭಕನುಸಾರ	೦೫	೪೫	೦೪	೨೨	೦೨	೦೫	೧೧
ಒಟ್ಟು	೨೫	೫೦	೧೯	೩೮	೦೬	೧೨	೫೦

ಈ ಮೇಲಿನ ಕೋಷ್ಟಕವು ಉಡುಗೆ ತೊಡುಗೆ ವಿಚಾರದಲ್ಲಿ ಆಸಕ್ತಿ ಹಾಗೂ ಹಾವಭಾವ ವ್ಯಕ್ತಪಡಿಸುವಲ್ಲಿ ಆಸಕ್ತಿ ನಡುವಣ ಸಂಬಂಧವನ್ನು ವಿವರಿಸಲಾಗುತ್ತದೆ. ೨೧ ಸಂವಾದಿಗಳು ಹೆಣ್ಣಿನ ಹಾವಭಾವ ವ್ಯಕ್ತ ಪಡಿಸುವಲ್ಲಿ ಹೆಚ್ಚು ಆಸಕ್ತಿ ಎಂದಿದ್ದಾರೆ. ಇವರಲ್ಲಿ ೧೯ (೯೦%) ಮಂದಿಗೆ ಹೆಣ್ಣಿನ ಉಡುಗೆ ತೊಡುವ ವಿಚಾರದಲ್ಲಿ ಹೆಚ್ಚು ಆಸಕ್ತಿ ಹಾಗೂ ೦೨ (೧೦%) ಮಂದಿಗೆ ಗಂಡು ಮತ್ತು ಹೆಣ್ಣಿನ ಉಡುಗೆ ತೊಡುವಲ್ಲಿ ಸಮಾನ ಆಸಕ್ತಿಯನ್ನು ಹೊಂದಿರುತ್ತಾರೆ.

ಆದರೆ ಕೇವಲ ೧೧ ಸಂವಾದಿಗಳು ಸಂದರ್ಭಕನುಸಾರವಾಗಿ ಹಾವಭಾವ ವ್ಯಕ್ತಪಡಿಸುವ ಆಸಕ್ತಿಯನ್ನು ಹೊಂದಿರುತ್ತಾರೆ ಇವರಲ್ಲಿ ೦೫ (೪೫%) ಮಂದಿಗೆ ಹೆಣ್ಣಿನ ಉಡುಗೆಯಲ್ಲಿಯೂ ೦೪ (೩೬%) ಮಂದಿಗೆ ಗಂಡಿನ ವಿಚಾರದಲ್ಲಿ ಸಮಾನ ಆಸಕ್ತಿ ಹೊಂದಿರುತ್ತಾರೆ. ತಮ್ಮ ಮನಸ್ಸಿನ ಮನೋಭಾವವು ಉಡುಗೆ ತೊಡುವ ವಿಚಾರದಲ್ಲಿ ಆಸಕ್ತಿ ಮಾಡಿಸುವ ಪ್ರಭಾವವನ್ನು ಕಂಡುಕೊಳ್ಳಬಹುದು.

೨.೭ ಕುಟುಂಬದ ಸದಸ್ಯರೊಂದಿಗೆ ಹೆಚ್ಚು ಒಡನಾಟ ಹಾಗೂ ಮನೆಕೆಲಸದಲ್ಲಿ ಹೆಚ್ಚು ಆಸಕ್ತಿ.

ಸಾಮಾಜಿಕರಣ ಪ್ರಕ್ರಿಯೆಯಲ್ಲಿ ಕುಟುಂಬದ ಪಾತ್ರ ಬಹಳ ಪ್ರಮುಖವಾಗಿದೆ ಎನ್ನಬಹುದು. ಒಬ್ಬ ವ್ಯಕ್ತಿಯ ಬೆಳವಣಿಗೆಗೆ ಇದು ಅವಶ್ಯಕವೂ ಹೌದು ಆದರೆ ಯಾವ ಅಂಶವು ಹೆಚ್ಚು ಪ್ರಭಾವ ಬೀರಿದೆ ಎನ್ನುವುದು ಅವಲಂಬಿತ.

ಕೋಷ್ಟಕ ೨.೭ ಕುಟುಂಬದ ಸದಸ್ಯರೊಂದಿಗೆ ಹೆಚ್ಚು ಒಡನಾಟ ಹಾಗೂ ಮನೆಕೆಲಸದಲ್ಲಿ ಹೆಚ್ಚು ಆಸಕ್ತಿ.

ಮನೆಕೆಲಸದಲ್ಲಿ ಹೆಚ್ಚು ಆಸಕ್ತಿ.	ಕುಟುಂಬದ ಸದಸ್ಯರೊಂದಿಗೆ ಹೆಚ್ಚು ಒಡನಾಟ								
	ತಂದೆ		ತಾಯಿ		ಸಹೋದರ		ಸಹೋದರಿ		ಒಟ್ಟು
	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ
ಹೆಚ್ಚು	೦	೦	೨೧	೭೮	೦	೦	೦೬	೨೨	೨೭
ಸಾಧಾರಣ	೦೨	೧೩	೦೮	೫೦	೦೧	೦೬	೦೫	೩೧	೧೬
ಕಡಿಮೆ	೦೧	೧೪	೦೧	೧೪	೦೪	೫೮	೦೧	೧೪	೦೭
ಒಟ್ಟು	೦೩	೦೬	೩೦	೬೦	೦೫	೧೦	೧೨	೨೪	೫೦

ಪುರುಷ ಸಲಿಂಗಕಾಮಿ ಸಮುದಾಯದವರಲ್ಲಿ ಹೆಣ್ಣಿನ ಮನೋಭಾವದ ಅಂಶಗಳು ಪ್ರಭಾವ ಬೀರಿರುವುದನ್ನು ಗಮನಿಸಬಹುದು ಆ ಕಾರಣಕ್ಕೆ ಹೆಚ್ಚು ಆಸಕ್ತಿ ಹೊಂದಿದವರು ೫೦ ಸಂವಾದಿಗಳಲ್ಲಿ ೨೭ ಮಂದಿ ಇರುತ್ತಾರೆ. ಇವರಲ್ಲಿ ೨೧ (೭೮%) ಸಂವಾದಿಗಳಿಗೆ ಬಾಲ್ಯದಲ್ಲಿ ತಾಯಿಯೊಂದಿಗೆ ಹೆಚ್ಚು ಒಡನಾಟ ಇರುವವರಾಗಿದ್ದು, ೦೬ (೨೨%) ಮಂದಿಗೆ ಸಹೋದರಿಯೊಂದಿಗೆ ಹೆಚ್ಚಿನ ಒಡನಾಟ ಇರುವುದು ಕಂಡುಬಂದಿದೆ. ಇನ್ನು ಈ ಕೋಷ್ಟಕದಲ್ಲಿ ಮನೆಕೆಲಸಗಳಲ್ಲಿ ಕಡಿಮೆ ಆಸಕ್ತಿ ಇರುವ ಸಂವಾದಿಗಳು ಕೇವಲ ೦೭ ಮಂದಿ ಹಾಗೂ ಇವರಲ್ಲಿ ೦೪ (೫೮%) ಮಂದಿಗೆ ಸಹೋದರನೊಂದಿಗೆ ಹೆಚ್ಚು ಒಡನಾಟ ಇರುವುದು ಕಂಡುಬಂದಿದೆ. ತಾಯಿ ಹಾಗೂ ಸಹೋದರಿಯೊಂದಿಗೆ ಬಾಲ್ಯದಲ್ಲಿ ಜಾಸ್ತಿ ಒಡನಾಟವಿದ್ದ ಸಂವಾದಿಗಳಿಗೆ ಮನೆಕೆಲಸಗಳಲ್ಲೂ ಹೆಚ್ಚು ಆಸಕ್ತಿ ಕಂಡುಬಂದಿದ್ದು. ಅವರಲ್ಲಿ ಹೆಚ್ಚಿನ ಭಾವನೆಯ ಅಂಶಗಳು ಪ್ರಭಾವ ಬೀರಿರುವುದನ್ನು ಗಮನಿಸಬಹುದಾಗಿದೆ.

೨.೮ ಕೌಟುಂಬಿಕ ಹಿನ್ನಲೆ ಹಾಗೂ ಕೌಟುಂಬಿಕ ಸಂಬಂಧ

ಕೌಟುಂಬಿಕ ಹಿನ್ನಲೆ ಹಾಗೂ ಕೌಟುಂಬಿಕ ಸಂಬಂಧಗಳು ವ್ಯಕ್ತಿಯ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತದೆ ಎನ್ನಬಹುದಾಗಿದೆ. ಕೌಟುಂಬಿಕ ಸಂಬಂಧ ಉತ್ತಮವಾಗಿದ್ದರೆ ಉತ್ತಮ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

ಕೋಷ್ಟಕ೨.೮ ಕೌಟುಂಬಿಕ ಹಿನ್ನಲೆ ಹಾಗೂ ಕೌಟುಂಬಿಕ ಸಂಬಂಧ

ಕೌಟುಂಬಿಕ ಸಂಬಂಧ	ಕೌಟುಂಬಿಕ ಹಿನ್ನಲೆ				
	ಕೇಂದ್ರಿಕೃತ		ವಿಸ್ತ್ರತ		ಒಟ್ಟು
	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ
ಅತ್ಯುತ್ತಮ	೦೪	೬೬	೦೨	೩೪	೦೬
ಉತ್ತಮ	೨೫	೮೯	೦೩	೧೧	೨೮
ಸಾಧಾರಣ	೧೦	೮೩	೦೨	೧೭	೧೨
ನಿಕೃಷ್ಟ	೦೩	೭೫	೦೧	೨೫	೦೪
ಒಟ್ಟು	೪೨	೮೪	೦೮	೧೬	೫೦

ಈ ಮೇಲಿನ ಕೋಷ್ಟಕವು ಪುರುಷ ಸಲಿಂಗಕಾಮಿಗಳ ಕೌಟುಂಬಿಕ ಹಿನ್ನಲೆ ಹಾಗೂ ಕೌಟುಂಬಿಕ ಸಂಬಂಧದ ಬಗ್ಗೆ ಸಂಬಂಧವನ್ನು ಇಲ್ಲಿ ಕಾಣಬಹುದು. ೫೦ ಸಂವಾದಿಗಳಲ್ಲಿ, ೨೮ ಸಂವಾದಿಗಳು ತಮ್ಮ ಕುಟುಂಬದವರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದಾರೆ. ಇವರಲ್ಲಿ ೨೫ (೮೯%) ಮಂದಿ ಕೇಂದ್ರಿಕೃತ ಕುಟುಂಬವನ್ನು ಹೊಂದಿದವರಾಗಿದ್ದು ಕೇವಲ ೦೩ (೧೧%) ಮಂದಿ ವಿಸ್ತ್ರತ ಕುಟುಂಬದ ಸದಸ್ಯರಾಗಿರುತ್ತಾರೆ. ಕೇವಲ ೦೪ ಮಂದಿಯ ಸಂಬಂಧವು ತಮ್ಮ ಕುಟುಂಬದವರೊಂದಿಗೆ ನಿಕೃಷ್ಟವಾಗಿದೆ. ಇವರಲ್ಲಿ ೦೩ (೭೫%) ಮಂದಿ ಕೇಂದ್ರೀಕೃತ ಕುಟುಂಬಕ್ಕೂ ೦೧ (೨೫%) ಒಬ್ಬರು ವಿಸ್ತ್ರತ ಕುಟುಂಬದ ಸದಸ್ಯರಾಗಿರುತ್ತಾರೆ.

೨.೯ ಕುಟುಂಬದಲ್ಲಿ ದುಡಿಯುವವರ ಸಂಖ್ಯೆ ಹಾಗೂ ಕುಟುಂಬದ ಮಾಸಿಕ ಆದಾಯ

ಕುಟುಂಬದಲ್ಲಿ ದುಡಿಯುವವರ ಸಂಖ್ಯೆಯು ಅವರ ಕುಟುಂಬದ ಆರ್ಥಿಕತೆ ಮೇಲೆ ಪ್ರಭಾವ ಬೀರಿದೆ ಎನ್ನಬಹುದು ಕುಟುಂಬದಲ್ಲಿ ದುಡಿಯುವವರ ಸಂಖ್ಯೆ ಹೆಚ್ಚು ಇದ್ದಾಗ ಕುಟುಂಬದ ಆದಾಯವು ಉತ್ತಮವಾಗಿರುತ್ತದೆ. ಸದಸ್ಯರ ಸಂಖ್ಯೆ ಜಾಸ್ತಿ ಇದ್ದು ದುಡಿಯುವವರ ಸಂಖ್ಯೆ ಕಡಿಮೆ ಇದ್ದ ಪಕ್ಷದಲ್ಲಿ ಕುಟುಂಬ ಆರ್ಥಿಕವಾಗಿ ಬೆಳವನಿಗೆ ಗೊಳ್ಳುವುದಿಲ್ಲ ಎನ್ನಬಹುದು.

ಕೋಷ್ಟಕ ೨.೯ ಕುಟುಂಬದಲ್ಲಿ ದುಡಿಯುವವರ ಸಂಖ್ಯೆ ಹಾಗೂ ಕುಟುಂಬದ ಮಾಸಿಕ ಆದಾಯ

ಕುಟುಂಬದ ಒಟ್ಟು ಮಾಸಿಕ ಆದಾಯದ	ಕುಟುಂಬದಲ್ಲಿ ದುಡಿಯುವವರ ಸಂಖ್ಯೆ				
	೧ರಿಂದ೨		೩ರಿಂದ೪		ಒಟ್ಟು
	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ
೨೦೦೦–೪೦೦೦	೦೬	೧೦೦	೦	೦	೦೬
೫೦೦೦–೭೦೦೦	೨೩	೭೪	೦೮	೨೬	೩೧
೮೦೦೦–೧೦೦೦೦	೦೪	೫೦	೦೪	೫೦	೦೮
೧೧೦೦೦–೧೩೦೦೦	೦೧	೩೩	೦೨	೬೭	೦೩
೧೪೦೦೦– ಮೇಲ್ಪಟ್ಟು	೦೦	೦	೦೨	೧೦೦	೦೨
ಒಟ್ಟು	೩೪	೬೮	೧೬	೩೨	೦

ಈ ಮೇಲಿನ ಕೋಷ್ಟಕವು ಕುಟುಂಬದಲ್ಲಿ ಒಟ್ಟು ದುಡಿಯುವವರ ಸಂಖ್ಯೆ ಹಾಗೂ ಆ ಕುಟುಂಬದ ಒಟ್ಟು ಮಾಸಿಕ ಆದಾಯದ ನಡುವಿನ ಸಂಬಂಧವನ್ನು ತಿಳಿಯಪಡಿಸುತ್ತದೆ. ಇಲ್ಲಿ ನಾವು ಏನನ್ನೂ ಕಾಣಬಹುದೆಂದರೆ ೫೦ ಮಂದಿ ಸಂವಾದಿಗಳಲ್ಲಿ ೩೧ ಮಂದಿಯು ಕುಟುಂಬದ ಆದಾಯವು (೫,೦೦೦–೭,೦೦೦) ಆಗಿರುತ್ತದೆ. ಆದರೆ ಕೇವಲ ಎರಡು ಕುಟುಂಬಗಳ ತಿಂಗಳ ಆದಾಯ (೧೪,೦೦೦–ಮೇಲ್ಪಟ್ಟ) ಆಗಿರುವುದರಿಂದ ಕುಟುಂಬದ ಆರ್ಥಿಕ ಸ್ಥಿತಿಯು ಉತ್ತಮವಾಗಿಲ್ಲ.

ಈ ಕೋಷ್ಟಕದ ಸಹಾಯದ ಕುಟುಂಬದಲ್ಲಿ ದುಡಿಯುವವರ ಸಂಖ್ಯೆಯನ್ನು ಗಮನಿಸಿದಾಗ ಸಂವಾದಿಯಲ್ಲಿ ೩೪ ಮಂದಿಯ ಕುಟುಂಬದಲ್ಲಿ ೧ ರಿಂದ ೨ ದುಡಿಯುವವರಿದ್ದು ಹಾಗೂ ಕೇವಲ ೧೬ ಮಂದಿಯ ಕುಟುಂಬದಲ್ಲಿ ೩ ರಿಂದ ೪ ಮಂದಿ ದುಡಿಯುವವರಿದ್ದಾರೆ. ಕುಟುಂಬದಲ್ಲಿ ಒಟ್ಟು ದುಡಿಯುವವರ ಸಂಖ್ಯೆ ಹಾಗೂ ಕುಟುಂಬದ ಒಟ್ಟು ಮಾಸಿಕ ಆದಾಯದ ನಡುವೆ ಸಂಬಂದವನ್ನು ಗಮನಿಸಿದಾಗ ಆರ್ಥಿಕವಾಗಿ ಕುಟುಂಬವು ಉತ್ತಮವಾಗಿಲ್ಲ ಎಂದು ತೀರ್ಮಾನಿಸಬಹುದು.

೨.೧೦ ಸಲಿಂಗಕಾಮಿಯ ಭಾವನೆ ಪ್ರಾರಂಭವಾದ ವರ್ಷ ಹಾಗೂ ಪ್ರಥಮವಾಗಿ ಸಲಿಂಗ ಲೈಂಗಿಕ ಸಂಪರ್ಕ ಇಟ್ಟುಕೊಂಡ ವರ್ಷ

ಸಮಾಜ ಒಬ್ಬ ವ್ಯಕ್ತಿಗೆ ತನ್ನ ಭಾವನೆ ವ್ಯಕ್ತ ಪಡಿಸುವಿಕೆ ಹಾಗೂ ಅದಕ್ಕೆ ಸ್ಪಂದನೆ ಭಾವನೆಯ ಬೆಳವಣೆಗೆಗೆ ಕಾರಣವಾಗಬಹುದು ಎನ್ನಬಹುದು. ಬಾಲ್ಯಾವಸ್ಥೆಯಿಂದ ಹದಿಹರೆಯಕ್ಕೆ ಕಾಲಿಡುವ ಸಂದರ್ಭದಲ್ಲಿ ವ್ಯಕ್ತಿಯ ಮನದಾಳದ ಭಾವನೆ ಚಿಗುರೊಡೆದ ಸಂದರ್ಭದಲ್ಲಿ ಅದಕ್ಕೆ ಪೂರಕವಾದ ವಾತಾವರಣದಿಂದ ಅದರ ಬೆಳವಣೆಗೆಯ ಗತಿ ಅವಲಂಬಿಸಿದೆ ಎನ್ನಬಹುದು.

ಕೋಷ್ಟಕ೨.೧೦ ಸಲಿಂಗಕಾಮಿಯ ಭಾವನೆ ಪ್ರಾರಂಭವಾದ ವರ್ಷ ಹಾಗೂ ಪ್ರಥಮವಾಗಿ ಸಲಿಂಗ ಲೈಂಗಿಕ ಸಂಪರ್ಕ ಇಟ್ಟುಕೊಂಡ ವರ್ಷ

ಪ್ರಥಮತಃ ಸಲಿಂಗ ಲೈಂಗಿಕ ಸಂಪರ್ಕಕ್ಕೊಳಗಾದ ವಯಸ್ಸು	ಸಲಿಂಗಕಾಮ ಭಾವನೆ ಆರಂಭವಾದ ವಯಸ್ಸು								
	೭ ರಿಂದ ೯		೧೦ ರಿಂದ ೧೨		೧೩ ರಿಂದ ೧೫		೧೬ರಿಂದ ಮೇಲ್ಪಟ್ಟು		ಒಟ್ಟು
	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ
೧೨ ರಿಂದ ೧೪	೦೧	೧೨	೦೩	೩೮	೦೪	೫೦	೦	೦	೦೮
೧೫ ರಿಂದ ೧೭	೦೨	೧೧	೦೩	೧೬	೦೧	೭	೧೨	೬೬	೧೮
೧೮ ರಿಂದ ೨೦	೦೧	೭	೦೩	೨೧	೦೨	೧೪	೦೮	೫೮	೧೪
೨೧ರಿಂದ ಮೇಲ್ಪಟ್ಟು	೦	೦	೦೧	೧೦	೦೧	೧೦	೦೮	೮೦	೧೦
ಒಟ್ಟು	೦೪	೦೮	೧೦	೨೦	೦೮	೧೬	೨೮	೫೬	೫೦

ಈ ಮೇಲಿನ ಕೋಷ್ಟಕವು ಪುರುಷ ಸಲಿಂಗಕಾಮಿ ಸಮುದಾಯದವರಲ್ಲಿ ಸಲಿಂಗಕಾಮ ಭಾವನೆ ಆರಂಭವಾದ ವಯಸ್ಸು ಹಾಗೂ ಅವರ ಪ್ರಥಮತಃ ಸಲಿಂಗ ಲೈಂಗಿಕ ಸಂಪರ್ಕಕ್ಕೊಳಗಾದ ವಯಸ್ಸಿನ ನಡುವೆ ಸಂಬಂಧವನ್ನು ಸಮೀಕರಿಸಲಾಗಿದೆ.

ಒಟ್ಟು ೫೦ ಸಂವಾದಿಗಳಲ್ಲಿ ಹೆಚ್ಚು ಅಂದರೆ ೧೮ ಮಂದಿ ಸಂವಾದಿಗಳು ೧೫ ರಿಂದ ೧೭ ವಯಸ್ಸಿನ ನಡುವೆ ಪ್ರಥಮ ಬಾರಿಸಲಿಂಗ ಲೈಂಗಿಕ ಸಂಪರ್ಕಕ್ಕೆ ಒಳಗಾದರು. ಇವರಲ್ಲಿ ೧೨(೬೬%) ಸಂವಾದಿಗಳು ಸಲಿಂಗ ಕಾಮಿ ಭಾವನೆಯು ೧೬ ವರ್ಷದಿಂದ ಮೇಲ್ಪಟ್ಟವಯಸ್ಸಿನಲ್ಲಿ ಉಂಟಾಯಿತು. ೦೨ (೧೧%) ಸಂವಾದಿಗಳಿಗೆ ೭ ರಿಂದ ೯ನೇ ವಯಸ್ಸಿನಲ್ಲಿ ಈ ಭಾವನೆ ಪ್ರಥಮತಃ ಬೆಳವಣಿಗೆಯಾಯಿತು ಎಂದು ಹೇಳಿದ್ದಾರೆ.

೨.೧೧ ಲೈಂಗಿಕವಾಗಿ ತಮ್ಮನ್ನು ಗುರುತಿಸಿಕೊಳ್ಳುವಿಕೆ ಹಾಗೂ ಲೈಂಗಿಕ ಸಂಪರ್ಕದ ಉದ್ದೇಶ

ಪುರುಷ ಸಲಿಂಗಕಾಮಿ ಸಮುದಾಯವು ತಮ್ಮನ್ನು ತಾವು ನಿರ್ದಿಷ್ಟವಾಗಿ ಗುರುತಿಸಿಕೊಳ್ಳುವಿಕೆ ಪ್ರಮುಖವಾಗಿದೆ. ಈ ಗುರುತಿಸಿಕೊಳ್ಳುವಿಕೆಯು ಹೆಣ್ಣಿನ ಭಾವನೆ ತಮ್ಮ ಮನಸ್ಸಿನಲ್ಲಿ ಎಷ್ಟು ಪ್ರಮಾಣದಲ್ಲಿ ಅವಲಂಬಿತವಾಗಿದೆ, ವ್ಯಕ್ತಿಯ ಆಸಕ್ತಿ, ಅಭಿರುಚಿ, ಆಯ್ಕೆ ಅನುಗುಣವಾಗಿ ಲೈಂಗಿಕ ಸಂಪರ್ಕ ಮಾಡುವ ಉದ್ದೇಶವು ಬದಲಾವಣೆಯಾಗುತ್ತದೆ ಎನ್ನಬಹುದು.

ಕೋಷ್ಟಕ ೨.೧೧ ಲೈಂಗಿಕವಾಗಿ ತಮ್ಮನ್ನು ಗುರುತಿಸಿಕೊಳ್ಳುವಿಕೆ ಹಾಗೂ ಲೈಂಗಿಕ ಸಂಪರ್ಕದ ಉದ್ದೇಶ.

ಲೈಂಗಿಕ ಸಂಪರ್ಕದ ಉದ್ದೇಶ	ಲೈಂಗಿಕವಾಗಿ ತಮ್ಮನ್ನು ಗುರುತಿಸಿಕೊಳ್ಳುವಿಕೆ						
	ಕೋಥಿ		ಡಿ.ಡಿ		ದ್ವಿಲಿಂಗಕಾಮಿ		ಒಟ್ಟು
	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ
ತೃಪ್ತಿಗಾಗಿ	೧೭	೫೨	೧೩	೩೯	೦೩	೯	೩೩
ಹಣಕ್ಕಾಗಿ	೧೦	೭೭	೦೨	೧೫	೦೧	೮	೧೩
ಚಟಕ್ಕಾಗಿ	೦೧	೨೫	೦೧	೨೫	೦೨	೫೦	೦೪
ಒಟ್ಟು	೨೮	೫೬	೧೬	೩೨	೦೬	೧೨	೫೦

ಈ ಮೇಲಿನ ಕೋಷ್ಟಕವು ಪುರುಷ ಸಲಿಂಗಕಾಮಿ ಸಮುದಾಯವು ತಮ್ಮನ್ನು ತಾವು ಗುರುತಿಸಿಕೊಳ್ಳುವಿಕೆ ಮತ್ತು ಲೈಂಗಿಕ ಸಂಪರ್ಕದ ಉದ್ದೇಶ ನಡುವೆ ಸಂಬಂಧ ಕಲ್ಪಿಸಲಾಗಿದೆ.

ಒಟ್ಟು ೫೦ ಸಂವಾದಿಗಳಲ್ಲಿ ೩೩ ಸಂವಾದಿಗಳು ಲೈಂಗಿಕ ತೃಪ್ತಿಗಾಗಿ ಸಲಿಂಗ ಲೈಂಗಿಕ ಸಂಪರ್ಕವನ್ನು ಇಟ್ಟುಕೊಂಡಿದ್ದಾರೆ ಇವರಲ್ಲಿ ೧೭ (೫೨%) ತಮ್ಮನ್ನು ತಾವು 'ಕೋಥಿ' ಉಪವಿಭಾಗಕ್ಕೆ ಸೇರಿದವರೆಂದು. ೧೩ (೩೯%) ಮಂದಿ ಡಿ.ಡಿ. ಉಪವಿಭಾಗಕ್ಕೆ ಸೇರಿದವರೆಂದು, ಆದರೆ ಕೇವಲ ೦೩ (೦೯%) ಸಂವಾದಿಗಳು ದ್ವಿಲಿಂಗಕಾಮಿ ಉಪವಿಭಾಗಕ್ಕೆ ಸೇರಿದವರೆಂದು ತಮ್ಮ ತಾವು ಗುರುತಿಸಿಕೊಂಡಿದ್ದಾರೆ. ೦೪ ಮಂದಿ ಸಂವಾದಿಗಳು ಮಾತ್ರ ಚಟಕ್ಕಾಗಿ ಸಲಿಂಗ ಲೈಂಗಿಕ ಸಂಪರ್ಕ ಇಟ್ಟುಕೊಂಡಿದ್ದಾರೆ ಎಂದು ಹೇಳಿದ್ದಾರೆ. ಇವರಲ್ಲಿ ೦೧ (೨೫%) ಒಬ್ಬರು ಕೋಥಿ ಹಾಗೂ ೦೧ ಇನ್ನೊಬ್ಬರು ಡಿ.ಡಿ ಹಾಗೂ ೦೨ (೫೦%) ಮಾತ್ರ ದ್ವಿಲಿಂಗ ಕಾಮಿ ವರ್ಗಕ್ಕೆ ಸೇರಿದವರೆಂದು ಒಪ್ಪಿಕೊಂಡಿದ್ದಾರೆ.

ಈ ಕೋಷ್ಟಕವು ೫೦ ಮಂದಿ ಸಂವಾದಿಗಳಲ್ಲಿ ಹೆಚ್ಚಿನವರು ಅಂದರೆ ೨೮ ಸಂವಾದಿಗಳು ಕೋಥಿ ಉಪವರ್ಗಕ್ಕೆ ಸೇರಿದವರೆಂದು, ೧೬ ಮಂದಿ ಡಿ.ಡಿ ಉಪವರ್ಗಕ್ಕೂ, ಆದರೆ ಕೇವಲ ೦೬ ಮಂದಿ ದ್ವಿಲಿಂಗಕಾಮಿ ಉಪವರ್ಗಕ್ಕೆ ಸೇರಿದವರೆಂದು ಒಪ್ಪಿಕೊಂಡಿರುವುದನ್ನು ಕಾಣಬಹುದು.

ಪುರುಷ ಸಲಿಂಗಕಾಮಿ ಸಮುದಾಯದವರು ತಮ್ಮನ್ನು ತಾವು ಕೋಥಿ ಉಪ ವಿಭಾಗದವರೆಂದು ಹೆಚ್ಚಾಗಿ ಗುರುತಿಸಿಕೊಳ್ಳುವವರಾಗಿದ್ದು ಹಾಗೂ ಸಲಿಂಗ ಲೈಂಗಿಕ ಸಂಪರ್ಕದ ಉದ್ದೇಶ ತೃಪ್ತಿಗಾಗಿ ಎಂದು ಹೆಚ್ಚಿನವರು ಒಪ್ಪಿಕೊಂಡಿದ್ದಾರೆ.

೨.೧೨ ಲೈಂಗಿಕ ಆಯಾಮ ಹಾಗೂ ಸಂಗಾತಿಯ ಆಯ್ಕೆ

ಪುರುಷ ಸಲಿಂಗಕಾಮಿ ಸಮುದಾಯದಲ್ಲಿ ಲೈಂಗಿಕ ಆಯಾಮ ಹಾಗು ಅದರ ಸಂಗಾತಿಯ ಆಯ್ಕೆ ನಡುವೆ ಪರಸ್ಪರ ಸಂಭಂದವಿದೆ. ಇಲ್ಲಿ ಆ ವ್ಯಕ್ತಿಯ ಆಸಕ್ತಿ, ಉದ್ದೇಶ, ಬಯಕೆ, ತೃಪ್ತಿ, ಸಮಯ, ವ್ಯಕ್ತಿ ಮುಂತಾದ ಅಂಶಗಳು ಪ್ರಭಾವ ಬೀರುತ್ತದೆ ಎನ್ನಬಹುದು. ಲೈಂಗಿಕ ಸಂಪರ್ಕ ವಿವಿಧ ಆಯಾಮಗಳಿಗೆ ಅನುಗುಣವಾಗಿ ಸಂಗಾತಿಯ ಆಯ್ಕೆ ನಡೆಯುವ ಸಾಧ್ಯತೆ ಹೆಚ್ಚಿದೆ ಎನ್ನಬಹುದು.

ಕೋಷ್ಟಕ ೨.೧೨ ಲೈಂಗಿಕ ಆಯಾಮ ಹಾಗೂ ಸಂಗಾತಿಯ ಆಯ್ಕೆ

ಸಂಗಾತಿಯ ಆಯ್ಕೆ	ಲೈಂಗಿಕ ಆಯಾಮ						
	ಗುದ ಸಂಭೋಗ		ಬಾಯಿ ಸಂಭೋಗ		ತೊಡೆ ಸಂಭೋಗ		ಒಟ್ಟು
	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ
ಹುಡುಗ	೦೬	೬೬	೦೨	೨೨	೦೧	೧೧	೯
ಯುವಕರು	೧೮	೬೬	೦೬	೨೨	೦೩	೧೨	೨೭
ಮಧ್ಯವಯಸ್ಸಿನವರು	೦೨	೧೫	೦೫	೩೮	೦೬	೪೭	೧೩
ಮುದುಕರು	೦	೦	೦೧	೧೦೦	೦	೦	೧
ಒಟ್ಟು	೨೬	೫೨	೧೪	೨೮	೧೦	೨೦	೫೦

ಈ ಮೇಲಿನ ಕೋಷ್ಟಕವು ಒಟ್ಟು ೫೦ ಸಂವಾದಿಗಳಲ್ಲಿ ಹೆಚ್ಚಿನವರು ೨೭ ಮಂದಿ ತಮ್ಮ ಆಯ್ಕೆ ಯುವಕರು ಎಂದಿದ್ದಾರೆ. ಇವರಲ್ಲಿ ೧೮ (೬೬%) ಸಂವಾದಿಗಳು ಗುಧಸಂಭೋಗವನ್ನು ಇಷ್ಟಪಡುತ್ತಾರೆ. ಕೇವಲ ೦೯ ಸಂವಾದಿಗಳ ಸಂಗಾತಿಯ ಆಯ್ಕೆ ಹುಡುಗರಾಗಿರುತ್ತಾರೆ. ಇವರಲ್ಲಿ ೦೬ (೬೬%) ಗುಧಸಂಭೋಗವನ್ನು, ೦೨ (೨೨%) ಮಂದಿ ಬಾಯಿ ಸಂಭೋಗವನ್ನು ಉಳಿದ ೦೧ (೧೧%) ಮಾತ್ರ

ತೊಡೆಸಂಭೋಗವನ್ನು ಇಷ್ಟಪಡುತ್ತಾರೆ. ಈ ಕೋಷ್ಟಕದಿಂದ ಕಂಡುಕೊಂಡಂತೆ ೨೬ (೫೨%) ಸಂವಾದಿಗಳು ಗುದಸಂಭೋಗವನ್ನು ಇಷ್ಟಪಡುತ್ತಾರೆ. ೧೪ (೨೮%) ಬಾಯಿ ಸಂಭೋಗವನ್ನು, ಕೇವಲ ೧೦ (೨೦%) ಮಂದಿ ಸಂವಾದಿಗಳು ತೊಡೆಸಂಭೋಗವನ್ನು ಇಷ್ಟಪಡುತ್ತಾರೆ.

ಲೈಂಗಿಕ ಆಯಾಮದಲ್ಲಿ ಹೆಚ್ಚಿನವರು ಗುದಸಂಭೋಗವನ್ನು ಇಷ್ಟಪಡುತ್ತಾರೆ, ಹಾಗೂ ತಮ್ಮ ಸಂಗಾತಿ ಆಯ್ಕೆಯಲ್ಲೂ ಯುವಕರಿಗೆ ಪ್ರಾದಾನ್ಯತೆ ನೀಡಿರುವುದನ್ನು ಕಾಣಬಹುದು.

೨.೧೩ ಸಂಗಾತಿಗಳೊಡನೆ ಅಪಮಾನ, ಘರ್ಷಣೆ ಹಾಗೂ ಲೈಂಗಿಕ ಸಂಪರ್ಕದ ಸಮಯದಲ್ಲಿ ಉಂಟಗುವ ತೊಂದರೆ.

ಲೈಂಗಿಕ ಸಂಗಾತಿಗಳೊಡನೆ ಅಪಮಾನ, ಘರ್ಷಣೆ ಹಾಗೂ ಲೈಂಗಿಕ ಸಂಪರ್ಕದ ಸಮಯದಲ್ಲಿ ಉಂಟಾಗುವ ತೊಂದರೆ ಒಂದಕ್ಕೊಂದು ಪೂರಕವಾಗಿದ್ದು, ಸಂಗಾತಿಗಳೊಡನೆ ಅಪಮಾನ, ಘರ್ಷಣೆಯು ಅವರ ವ್ಯಕ್ತಿಗತ ವಿಚಾರ, ಮಾನಸಿಕ ಆರೋಗ್ಯ, ಹೆಚ್.ಐ.ವಿ., ಲೈಂಗಿಕ ಸೋಂಕುಗಳ ಹರಡುವಿಕೆಯ ಅಪಾಯದ ಮೇಲೆ ಪ್ರಭಾವ ಬೀರುತ್ತದೆ.

ಕೋಷ್ಟಕ ೨.೧೩ ಸಂಗಾತಿಗಳೊಡನೆ ಅಪಮಾನ, ಘರ್ಷಣೆ ಹಾಗೂ ಲೈಂಗಿಕ ಸಂಪರ್ಕದ ಸಮಯದಲ್ಲಿ ಉಂಟಗುವ ತೊಂದರೆ.

ಲೈಂಗಿಕಸಂಪರ್ಕದ ಸಮಯದಲ್ಲಿ ಉಂಟಾಗುವ ತೊಂದರೆ	ಲೈಂಗಿಕ ಸಂಗಾತಿಗಳೊಡನೆ ಘರ್ಷಣೆ				
	ಹೌದು		ಇಲ್ಲ		ಒಟ್ಟು
	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ
ಪೋಲಿಸರಿಂದ	೨೧	೮೧	೦೫	೧೯	೨೬
ಗೂಂಡಗಳಿಂದ	೦೭	೬೩	೦೪	೩೭	೧೧
ಸಾರ್ವಜನಿಕರಿಂದ	೦೫	೭೧	೦೨	೨೯	೦೭
ಇತರರು	೦೩	೫೦	೦೩	೫೦	೦೬
ಒಟ್ಟು	೩೬	೭೨	೧೪	೨೮	೫೦

ಈ ಮೇಲಿನ ಕೋಷ್ಟಕವು ಲೈಂಗಿಕ ಸಂಗಾತಿಗಳೊಡನೆ ಘರ್ಷಣೆ ಹಾಗೂ ಉಂಟಾಗುವ ತೊಂದರೆಯುನ್ನು ವಿವರಿಸುತ್ತದೆ. ೩೦ ಮಂದಿ ಸಂವಾದಿಗಳಲ್ಲಿ ೨೬ ಮಂದಿ ಸಂವಾದಿಗಳಿಗೆ ಪೋಲಿಸರಿಂದ ತೊಂದರೆಗಳು ಎದುರಾಗುತ್ತದೆ. ಇವರಲ್ಲಿ ೨೧ (೮೧%) ಮಂದಿಗಳು ತಮಗೆ ತಮ್ಮ ಲೈಂಗಿಕ ಸಂಗಾತಿಯೊಂದಿಗೆ ಅಪಮಾನ ಘರ್ಷಣೆಗಳು ನಡೆಯುತ್ತದೆ ಎಂದು ಒಪ್ಪಿಕೊಂಡಿದ್ದಾರೆ. ಕೇವಲ ೫

(೧೯%) ಸಂವಾದಿಗಳಿಗೆ ತಮ್ಮ ಲೈಂಗಿಕ ಸಂಗಾತಿಗಳೊಡನೆ ಅಪಮಾನ ಘರ್ಷಣೆ ಇರುವುದಿಲ್ಲ ಆದರೆ ಪೋಲಿಸರಿಂದ ತೊಂದರೆಯನ್ನು ಅನುಭವಿಸಿದ್ದಾರೆ.

ಆದರೆ ಕೇವಲ ೦೬ ಮಂದಿ ಸಂವಾದಿಗಳಿಗೆ ಇತರರಿಂದ ತೊಂದರೆಗಳು ನಡೆಯುತ್ತವೆ. ಅವರಲ್ಲಿ ೦೩ (೫೦%) ಮಂದಿಗೆ ತಮ್ಮ ಲೈಂಗಿಕ ಸಂಗಾತಿಗಳೊಡನೆ ಘರ್ಷಣೆ ನಡೆಯುತ್ತದೆ ಹಾಗೂ ಉಳಿದ ೦೩ (೫೦%) ಮಂದಿಗೆ ತಮ್ಮ ಲೈಂಗಿಕ ಸಂಗಾತಿಗಳೊಡನೆ ಘರ್ಷಣೆ ಇಲ್ಲ ಎಂದು ತಿಳಿಸಿದ್ದಾರೆ. ತೊಂದರೆ ಹಾಗೂ ಘರ್ಷಣೆಯಿಂದ ಲೈಂಗಿಕ ಚಟುವಟಿಕೆಯ ಸಂದರ್ಭದಲಿ ಕಾಂಡೋಮ್‌ನ ಬಳಕೆ ಸರಿಯಾಗಿ ಬಳಕೆ ಆಗದಿರುವುದರಿಂದ ಹೆಚ್.ಐ. ವಿ ಹಾಗೂ ಲೈಂಗಿಕ ಸೋಂಕುಗಳಿಗೆ ತುತ್ತಾಗುತ್ತಾರೆ.

೨.೧೪ ಪ್ರತಿ ದಿನಕ್ಕೆ ನಡೆಸುವ ಲೈಂಗಿಕ ಸಂಪರ್ಕ ಹಾಗೂ ಲೈಂಗಿಕ ಸಂದರ್ಭಗಳಲ್ಲಿ ತಪ್ಪದೆ ಕಾಂಡೋಮ್ ಬಳಕೆ

ತಪ್ಪದೆ ಕಾಂಡೋಮ್ ಬಳಕೆಯ ಮನೋಭಾವವು ಹೆಚ್.ಐ.ವಿ. ಹಾಗೂ ಲೈಂಗಿಕ ಸೋಂಕುಗಳ ಹರಡುವಿಕೆ ಅಪಾಯವನ್ನು ತಡೆಯಬಹುದು. ತನ್ನ ಆರೋಗ್ಯದ ರಕ್ಷಣೆ ತಾನೇ ಜವಾಬ್ದಾರಿ ಎಂಬ ಭಾವನೆಯು ಕಾಂಡೋಮ್ ಬಳಕೆಯ ಮಹತ್ವವನ್ನು ಹೆಚ್ಚಿಸುತ್ತದೆ. ಕೇವಲ ಒಂದು ಬಾರಿಯ ಲೈಂಗಿಕ ಸಂಪರ್ಕದಲ್ಲಿಯೂ ಕಾಂಡೋಮ್ ಬಳಕೆಯ ನಿರ್ಲಕ್ಷವು ಅಪಾಯಕ್ಕೆ ಕಾರಣವಾಗಬಹುದು.

ಕೋಷ್ಟಕ ೨.೧೪ ಪ್ರತಿ ದಿನಕ್ಕೆ ನಡೆಸುವ ಲೈಂಗಿಕ ಸಂಪರ್ಕ ಹಾಗೂ ಲೈಂಗಿಕ ಸಂದರ್ಭಗಳಲ್ಲಿ ತಪ್ಪದೆ ಕಾಂಡೋಮ್ ಬಳಕೆ

ಪ್ರತಿ ದಿನಕ್ಕೆ ನಡೆಸುವ ಲೈಂಗಿಕ ಸಂಪರ್ಕ	ಲೈಂಗಿಕ ಸಂದರ್ಭಗಳಲ್ಲಿ ತಪ್ಪದೆ ಕಾಂಡೋಮ್ ಬಳಕೆ				
	ಹೌದು		ಇಲ್ಲ		ಒಟ್ಟು
	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ
ಒಂದು ಬಾರಿ	೩೨	೯೧	೦೩	೦೯	೩೫
ಎರಡು ಬಾರಿ	೦೮	೮೮	೦೧	೧೨	೦೯
ಮೂರು ಬಾರಿ	೦೩	೭೫	೦೧	೨೫	೦೪
ನಾಲ್ಕಕಿಂತ ಹೆಚ್ಚು	೦೨	೧೦೦	೦	೦	೦೨
ಒಟ್ಟು	೪೫	೯೦	೦೫	೧೦	೫೦

ಈ ಮೇಲಿನ ಕೋಷ್ಟಕವು ಲೈಂಗಿಕ ಸಂದರ್ಭಗಳಲ್ಲಿ ತಪ್ಪದೆ ಕಾಂಡೋಮ್ ಬಳಕೆ ಹಾಗೂ ಪ್ರತಿ ದಿನ ನಡೆಸುವ ಲೈಂಗಿಕ ನಡೆಸುವ ಲೈಂಗಿಕ ಸಂಪರ್ಕದ ಸಂಬಂಧವನ್ನು ಗಮನಿಸಿದಾಗ ೫೦ ಮಂದಿ ಸಂವಾದಿಗಳಲ್ಲಿ ೩೫ ಮಂದಿ ಒಂದು ದಿನಕ್ಕೆ ಒಂದೇ ಬಾರಿ ಲೈಂಗಿಕ ಸಂಪರ್ಕವನ್ನು ಇಟ್ಟುಕೊಳ್ಳುತ್ತಾರೆ ಇವರಲ್ಲಿ ೩೨ (೯೧%) ಮಂದಿ ತಪ್ಪದೆ ಕಾಂಡೋಮ್ ಬಳಕೆ ಮಾಡುತ್ತಾರೆ. ೦೩ (೯%) ಮಂದಿ ಪ್ರತಿ ಬಾರಿ ಕಾಂಡೋಮ್ ಬಳಕೆ ಮಾಡುವುದಿಲ್ಲ.

ಕಾಂಡೋಮ್ ಬಳಕೆಯ ೪೫ (೯೦%) ಸಂವಾದಿಗಳಲ್ಲಿ ಕಂಡು ಬಂದಿರುವುದರಿಂದ ಹಾಗೂ ಕೇವಲ ೦೫ (೧೦%) ಮಂದಿಯು ಕಾಂಡೋಮ್ ಬಳಕೆ ಪ್ರತಿ ಲೈಂಗಿಕ ಸಂಪರ್ಕದಲ್ಲಿಯೂ ಮಾಡುವುದಿಲ್ಲ. ಇವರಲ್ಲಿ ತಮ್ಮ ಐಕ್ಯಕ ನಂಬಿಗಸ್ಥ ಸಂಗಾತಿಯೊಂದಿಗೆ ಕಾಂಡೋಮ್ ಬಳಕೆ ಮಾಡದಿರುವ ಸಂದರ್ಭಗಳೂ ಇವೆ. ಆದರೆ ಲೈಂಗಿಕ ಸೋಂಕು ಹಾಗೂ ಹೆಚ್.ಐ.ವಿ. ಸೋಂಕು ಹರಡುವ ಅಪಾಯವು ಜಾಸ್ತಿ ಇದೆ ಎನ್ನಬಹುದು.

೨.೧೫ ಸಂಗಾತಿಯ ಆಯ್ಕೆ ಸ್ಥಳ ಹಾಗೂ ಲೈಂಗಿಕ ಚಟುವಟಿಕೆಗಳ ಸ್ಥಳ

ಲೈಂಗಿಕ ಚಟುವಟಿಕೆಗಳಲ್ಲಿ ಸಂಗಾತಿಯ ಆಯ್ಕೆ ಸಂಗಾತಿಯ ಆಸಕ್ತಿ, ಅಭಿರುಚಿಗನುಗುಣವಾಗಿ, ವಿವಿಧ ಲೈಂಗಿಕ ಆಯಾಮಗಳಲ್ಲಿ ಲೈಂಗಿಕ ಸಂಪರ್ಕ ಏರ್ಪಾಡುತ್ತದೆ, ಅಂದರೆ, ಗುಧ ಸಂಭೋಗ, ಬಾಯಿ ಸಂಭೋಗ, ತೊಡೆ ಸಂಭೋಗ, ಅಪ್ಪಿಕೊಳ್ಳುವಿಕೆ, ಮುಂತಾದ ಪ್ರಕಾರಗಳ ಮೂಲಕ ಆಯ್ಕೆಯ ಸ್ಥಳವು, ಸಂಗಾತಿಯ ಸಮಯ ಅಭಿರುಚಿ, ಹಣ, ಆಸಕ್ತಿ, ಹೊರಗಿನ ವಾತಾವರಣ ಮುಂತಾದ ಅಂಶಗಳು ಪ್ರಭಾವ ಬೀರುತ್ತವೆ. ಈ ಪ್ರಭಾವಗಳು ಅಸುರಕ್ಷಿತ ಲೈಂಗಿಕ ಸಂಪರ್ಕಕ್ಕೂ ಕಾರಣವಾಗಬಹುದು.

ಕೋಷ್ಟಕ ೨.೧೫ ಸಂಖ್ಯೆ ಸಂಗಾತಿಯ ಆಯ್ಕೆ ಸ್ಥಳ ಹಾಗೂ ಲೈಂಗಿಕ ಚಟುವಟಿಕೆಗಳ ಸ್ಥಳ

ಲೈಂಗಿಕ ಚಟುವಟಿಕೆಗಾಗಿ ಬಳಸ್ಪಡುವ ಸ್ಥಳ	ತಮ್ಮ ಸಂಗಾತಿಯನ್ನು ಆಯ್ಕೆಮಾಡುವ ಸ್ಥಳ												
	ಉದ್ಯಾನ		ಶೌಚಾಲಯ		ಬಸ್ಸು ನಿಲ್ದಾಣ		ಸಿನೇಮಾ ಮಂದಿರ		ಮೈದಾನ		ವಾಣಿಜ್ಯ ವ್ಯಾಪಾರಿ ಮಳಿಗೆ		ಒಟ್ಟು
	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ
ಉದ್ಯಾನ	೦೨	೬೭	೦೧	೩೩	೦	೦	೦	೦	೦	೦	೦	೦	೦೩
ಶೌಚಾಲಯ	೦೧	೦೯	೦೬	೫೫	೦೨	೧೮	೦೧	೦೯	೦೧	೦೯	೦	೦	೧೧
ಪೊದೆ	೦೧	೧೬	೦೧	೧೬	೦	೦	೦	೦	೦೪	೬೮	೦	೦	೦೬
ವಸತಿ ಗ್ರಹ	೧೦	೩೩	೦೧	೦೩	೦೬	೨೦	೦೪	೧೪	೦೬	೨೦	೦೩	೧೦	೩೦
ಒಟ್ಟು	೧೪	೨೮	೦೯	೧೮	೦೮	೧೬	೦೫	೧೦	೧೧	೨೨	೦೩	೦೬	೫೦

ಈ ಮೇಲಿನ ಕೋಷ್ಟಕವು ಪುರುಷ ಸಲಿಂಗಕಾಮಿಗಳಿ ತಮ್ಮ ಸಂಗಾತಿಯನ್ನು ಆಯ್ಕೆಮಾಡುವ ಸ್ಥಳ ಹಾಗೂ ತಮ್ಮ ಲೈಂಗಿಕ ಚಟುವಟಿಕೆಗಾಗಿ ಬಳಸ್ಪಡುವ ಜಾಗದ ನಡುವೆ ಸಂಬಂಧವನ್ನು ವಿವರಿಸಲಾಗಿದೆ. ಒಟ್ಟು ೫೦ ಮಂದಿ ಸಂವಾದಿಗಳಲ್ಲಿ ೩೦ ಮಂದಿಗಳು ತಮ್ಮ ಲೈಂಗಿಕ ಚಟುವಟಿಕೆಗಳನ್ನು ವಸತಿ ಗೃಹಗಳಲ್ಲಿ ನಡೆಸುತ್ತಾರೆ. ಇವರಲ್ಲಿ ೧೦ (೩೩%) ಸಂವಾದಿಗಳು ತಮ್ಮ ಸಂಗಾತಿಗಳನ್ನು ಉದ್ಯಾನದಿಂದ ಆಯ್ಕೆಮಾಡುತ್ತಾರೆ. ೬ (೨೦%) ಸಂವಾದಿಗಳು ಬಸ್ಸು ನಿಲ್ದಾಣ, ೦೧(೩%) ಮಂದಿ ಶೌಚಾಲಯದಿಂದ, ೬ (೨೦%) ಮಂದಿ ಮೈದಾನದಿಂದ ತಮ್ಮ ಸಂಗಾತಿಗಳನ್ನು ಆಯ್ಕೆಮಾಡುತ್ತಾರೆ. ಕೇವಲ ೦೩ ಸಂವಾದಿಗಳು ಲೈಂಗಿಕ ಚಟುವಟಿಕೆಗೆ ಉಧ್ಯಾನವನ್ನು ಬಳಸಿಕೊಳ್ಳುತ್ತಾರೆ. ಅವರಲ್ಲಿ ೦೨ (೬೭%) ಜನ ಉಧ್ಯಾನ ಸಂಗಾತಿಯ ಆಯ್ಕೆಮಾಡುತ್ತಾರೆ. ೦೧ (೩೩%) ಒಬ್ಬರು ಶೌಚಾಲಯದಿಂದ ತಮ್ಮ ಸಂಗಾತಿಯ ಆಯ್ಕೆ ನಡೆಸುತ್ತಾರೆ.

೨.೧೬ ಲೈಂಗಿಕ ಸೋಂಕುಗಳ ಬಗ್ಗೆ ಮಾಹಿತಿ ಹಾಗೂ ಲೈಂಗಿಕ ಸಂಪರ್ಕದಲ್ಲಿ ಬಳಸಲ್ಪಡುವ ಕಾಂಡೋಮ್ ವಿಧ.

ಪುರುಷ ಸಲಿಂಗಕಾಮಿ ಸಮುದಾಯದವರಲ್ಲಿ, ಲೈಂಗಿಕ ಸೋಂಕುಗಳ ಬಗ್ಗೆ ಮಾಹಿತಿ ಹಾಗೂ ವಿವಿಧ ಕಾಂಡೋಮ್‌ಗಳ ಮಾಹಿತಿ ನಡುವೆ ಒಂದಕ್ಕೊಂದು ಸಂಬಂಧವಿದೆ. ತನ್ನ ಆಯ್ಕೆ, ಆಸಕ್ತಿ, ಅಭಿರುಚಿಗೆ ಅನುಗುಣವಾಗಿ ವಿವಿಧ ಕಾಂಡೋಮ್‌ಗಳ ಬಳಕೆ ನಡೆಯುತ್ತದೆ. ಆದರೆ ಕಾಂಡೋಮ್ ಬಳಕೆ ಲೈಂಗಿಕ ಸೋಂಕುಗಳ ತಡೆಗಾಗಿರುತ್ತದೆ. ಪುರುಷ ಸಲಿಂಗಕಾಮದಲ್ಲಿ ಗರ್ಭಧಾರಣೆಯ ವಿಷಯವು ಪ್ರಸ್ತುತವಾಗಿಲ್ಲವ ಕಾರಣ ಕಾಂಡೋಮ್ ಬಳಕೆಯ ಉದ್ದೇಶ ಸ್ಪಷ್ಟವಾಗಿರಬೇಕಾಗುತ್ತದೆ.

ಕೋಷ್ಟಕ ೨.೧೬ ಲೈಂಗಿಕ ಸೋಂಕುಗಳ ಬಗ್ಗೆ ಮಾಹಿತಿ ಹಾಗೂ ಲೈಂಗಿಕ ಸಂಪರ್ಕದಲ್ಲಿ ಬಳಸಲ್ಪಡುವ ಕಾಂಡೋಮ್ ವಿಧ.

ಲೈಂಗಿಕ ಸಂಪರ್ಕದಲ್ಲಿ ಬಳಸಲ್ಪಡುವ ಕಾಂಡೋಮ್	ಲೈಂಗಿಕ ಸೋಂಕುಗಳ ಬಗ್ಗೆ ಮಾಹಿತಿ				
	ಹೌದು		ಇಲ್ಲ		ಒಟ್ಟು
	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ
ಉಚಿತ ವಿತರಣೆ ಕಾಂಡೋಮ್	೨೭	೯೦	೦೩	೧೦	೩೦
ಸಾಮಾಜಿಕ ಮಾರುಕಟ್ಟೆ ಕಾಂಡೋಮ್	೧೧	೮೫	೦೨	೧೫	೧೩
ವಾಣಿಜ್ಜಿಕ ವಿತರಣೆ ಕಾಂಡೋಮ್	೦೬	೮೬	೦೧	೧೪	೦೭
ಒಟ್ಟು	೪೪	೮೮	೦೬	೧೨	೫೦

ಈ ಮೇಲಿನ ಕೋಷ್ಟಕವು ಲೈಂಗಿಕ ಸೋಂಕುಗಳ ಮಾಹಿತಿ ಹಾಗೂ ಕಾಂಡೋಮ್ ಬಳಕೆಯ ವಿಧದ ನಡುವೆ ಸಂಬಂಧ ಕಲ್ಪಿಸಲಾಗಿದೆ. ೫೦ ಸಂವಾದಿಗಳಲ್ಲಿ ೩೦ ಮಂದಿ ಉಚಿತ ವಿತರಣೆಯ ಕಾಂಡೋಮ್‌ಗಳನ್ನು ಬಳಕೆ ಮಾಡುತ್ತಾರೆ. ಇವರಲ್ಲಿ ೨೭ (೯೦%) ಮಂದಿಗೆ ಲೈಂಗಿಕ ಸೋಂಕುಗಳ ಮಾಹಿತಿ ಇರುತ್ತದೆ. ಆದರೆ ಕೇವಲ ೦೩ (೧೦%) ಮಂದಿಗೆ ಸರಿಯಾದ ಮಾಹಿತಿಯು ತಿಳಿದಿರುವುದಿಲ್ಲ.

ವಾಣಿಜ್ಜಿಕ ವಿತರಣೆ ಕಾಂಡೋಮ್ ಬಳಕೆ ವಿತರಣೆ ಕಾಂಡೋಮ್‌ನ್ನು ೦೭ ಮಂದಿ ಬಳಸುತ್ತಾರೆ. ಇವರಲ್ಲಿ ೦೬ (೮೬%) ಸಂವಾದಿಗಳಿಗೆ ಲೈಂಗಿಕ ಸೋಂಕುಗಳ ಬಗ್ಗೆ ಮಾಹಿತಿ ಇದೆ. ಆದರೆ ೦೧(೧೪%)ರಿಗೆ ಈ ಸೋಂಕುಗಳ ಬಗ್ಗೆ ಮಾಹಿತಿ ಇರುವುದಿಲ್ಲ. ಅಂದರೆ ೪೪ ಮಂದಿ ಸಂವಾದಿಗಳಿಗೆ ಲೈಂಗಿಕ ಸೋಂಕುಗಳ ಬಗ್ಗೆ ಮಾಹಿತಿ ಇದೆ ಉಳಿದ ೦೬ ಮಂದಿಗೆ ಈ ಮಾಹಿತಿಯು ತಿಳಿದಿರುವುದಿಲ್ಲ. ಸಾಮಾಜಿಕ ಮಾರುಕಟ್ಟೆ ಹಾಗೂ ವಾಣಿಜ್ಯಕ ವಿತರಣೆಯ ಕಾಂಡೋಮ್‌ಗಳನ್ನು ಬಾಯಿ ಸಂಭೋಗದಲ್ಲಿ ಹೆಚ್ಚಾಗಿ ಬಳಸುತ್ತಾರೆ ಎಂದು ಗಮನಿಸಬೇಕಾಗಿದೆ.

೨.೧೭ ಕುಟುಂಬದಲ್ಲಿ ತಮ್ಮ ಲಿಂಗತ್ವದ ಬಗ್ಗೆ ಹೇಳಿಕೊಂಡಿರುವಿಕೆ ಹಾಗೂ ಲಿಂಗತ್ವ ಮನೋಭಾವನೆಯನ್ನು ವ್ಯಕ್ತಪಡಿಸುವ ಸಂದರ್ಭ

ಪ್ರತಿಯೊಬ್ಬ ವ್ಯಕ್ತಿ ತನ್ನ ಕುಟುಂಬವು ನೆಮ್ಮದಿಯಿಂದ ಇರಲು ಬಯಸುತ್ತಾನೆ. ವ್ಯಕ್ತಿ ತನ್ನ ಆಶೋತ್ತರ, ಆಸಕ್ತಿಗಳನ್ನು ವ್ಯಕ್ತಪಡಿಸದೆ ಕುಟುಂಬದ ಸದಸ್ಯರಿಗಾಗಿ ತನ್ನೊಳಗೆ ಅದುಮಿ ಇಡುತ್ತಾನೆ. ಸಮಾಜದ ನೈತಿಕ ನಿಯಮ ಕಟ್ಟುಪಾಡುಗಳಿಗೆ ಬದ್ಧನಾಗಿ ತನ್ನ ಸಹವರ್ತಿಗಳೊಂದಿಗೆ ಇದ್ದಾಗ ವ್ಯಕ್ತಪಡಿಸುವ ಮನೋಭಾವವು, ತನ್ನ ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಲು ಮುಜುಗರ, ಹೆದರಿಕೆ, ಸೂಚಿಕೆ, ಅಂಜಿಕೆಗಳು ಎದುರಾಗುತ್ತದೆ ಎನ್ನಬಹುದು.

ಕೋಷ್ಟಕ ೨.೧೭ ಕುಟುಂಬದಲ್ಲಿ ತಮ್ಮ ಲಿಂಗತ್ವದ ಬಗ್ಗೆ ಹೇಳಿಕೊಂಡಿರುವಿಕೆ ಹಾಗೂ ಲಿಂಗತ್ವ ಮನೋಭಾವನೆಯನ್ನು ವ್ಯಕ್ತಪಡಿಸುವ ಸಂದರ್ಭ

ಲಿಂಗತ್ವ ಮನೋಭಾವನೆಗಳನ್ನು ವ್ಯಕ್ತ ಪಡಿಸುವ ಸಂದರ್ಭ	ಕುಟುಂಬದವರಲ್ಲಿ ತಮ್ಮ ಲಿಂಗತ್ವದ ಬಗ್ಗೆ ಹೇಳಿಕೊಂಡಿರುವಿಕೆ				
	ಹೌದು		ಇಲ್ಲ		ಒಟ್ಟು
	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ
ಸಹವರ್ತಿ ಗಳೊಂದಿಗೆ ಗುಂಪಿನಲ್ಲಿ ಇದ್ದಾಗ	೦೧	೦೪	೨೭	೯೬	೨೮
ಸಾಮಾಜಿಕ ಮನೋರಂಜನಾ ಕಾರ್ಯಕ್ರಮಗಳಲ್ಲಿ	೦೨	೧೫	೧೧	೮೫	೧೩
ಪ್ರಮುಖ ಸಾಮಾಜಿಕ ಸಮಾರಂಭಗಳಲ್ಲಿ	೦	೦	೦೯	೧೦೦	೦೯
ಒಟ್ಟು	೦೩	೦೬	೪೭	೯೪	೫೦

ಈ ಮೇಲಿನ ಕೋಷ್ಟಕವು ಸಲಿಂಗಕಾಮಿ ಸಮುದಾಯದವರು ತಮ್ಮ ಲಿಂಗತ್ವವನ್ನು ಕುಟುಂಬದ ಸದಸ್ಯರಲ್ಲಿ ಹಂಚಿಕೊಂಡಿರುವಿಕೆ ಹಾಗೂ ಅವರ ಲಿಂಗತ್ವ ಮನೋಭಾವನೆಗಳನ್ನು ವ್ಯಕ್ತಪಡಿಸುವ ಸಂದರ್ಭ ಸಂದರ್ಭವನ್ನು ಸಮೀಕರಿಸಲಾಗಿದೆ.

೫೦ ಮಂದಿ ಸಂವಾದಿಗಳಲ್ಲಿ ೨೮ ಮಂದಿ ತಮ್ಮ ಲಿಂಗತ್ವ ಮನೋಭಾವನೆಗಳನ್ನು ತಮ್ಮ ಸಹವರ್ತಿಗಳ ಗುಂಪಿನಲ್ಲಿ ವ್ಯಕ್ತಪಡಿಸುತ್ತಾರೆ. ಇವರಲ್ಲಿ ೨೭ (೯೬%) ಸಂವಾದಿಗಳು ತಮ್ಮ ಲಿಂಗತ್ವದ ಬಗ್ಗೆ ತಮ್ಮ ಕುಟುಂಬದಲ್ಲಿ ಹೇಳಿಕೋಡಿರುವುದಿಲ್ಲ. ಕೇವಲ ಒಬ್ಬರು (೦೪%) ಮಾತ್ರ ತಮ್ಮ ಲಿಂಗತ್ವದ ಬಗ್ಗೆ ತಮ್ಮ ಕುಟುಂಬದವರಲ್ಲಿ ಹೇಳಿಕೊಂಡಿದ್ದಾರೆ. ೪೯ (೯೪%) ಸಂವಾದಿಗಳು ತಮ್ಮ ಲಿಂಗತ್ವದ ಬಗ್ಗೆ ತಮ್ಮ ಕುಟುಂಬದ ಸದಸ್ಯರಲ್ಲಿ ಹೇಳಿಕೊಂಡಿಲ್ಲ. ಆದರೆ ಕೇವಲ ೩ (೦೬%) ಜನ ಮಾತ್ರ ತಮ್ಮ ಕುಟುಂಬದವರಲ್ಲಿ ಹೇಳಿಕೊಂಡಿರುತ್ತಾರೆ.

ಪುರುಷ ಸಲಿಂಗಕಾಮಿ ಸಮುದಾಯದ ಸದಸ್ಯರಿಗೆ, ತಮ್ಮ ಲಿಂಗತ್ವದ ಬಗ್ಗೆ ಹೇಳಿಕೊಂಡರೆ ತಮ್ಮ ಕುಟುಂಬದ ಸದಸ್ಯರು ತಮ್ಮನ್ನು ಮನೆಯಿಂದ ದೂರತಳ್ಳಬಹುದು, ಅಪಮಾನ, ನಾಚಿಕೆ, ನಿಂದನೆಗೆ ಗುರಿಯಾಗುವ ಅಪಾಯವನ್ನು ಅರಿತು ತಮ್ಮ ಮನೋಭಾವನೆಗಳನ್ನು ಮುಚ್ಚಿಟ್ಟಿರುತ್ತಾರೆ ಎಂದಿದ್ದಾರೆ.

೨.೧೮ ಗುದ ಸಂಭೋಗದಲ್ಲಿ ಬಳಸಲ್ಪಡುವ ನುಣುಪುಕಾರಕ ಹಾಗೂ ಪುರುಷ ಸಲಿಂಗಕಾಮದಿಂದ ಹೆಚ್.ಐ. ವಿ. ಸೋಂಕು ಹರಡುವಿಕೆ ಅಪಾಯ

ಪುರುಷ ಸಲಿಂಗಕಾಮಿ ಸಮುದಾಯದವರಲ್ಲಿ, ಗುದಸಂಭೋಗಗಳು ಹೆಚ್ಚಾಗಿದ್ದು, ಗುದಸಂಭೋಗದಲ್ಲಿ ಕಾಂಡೋಮ್ ಜೊತೆಗೆ ನುಣುಪುಕಾರಕದ ಅವಶ್ಯಕತೆ ಇರುವುದರಿಂದ ವಿವಿಧ ನುಣುಪ್ರಕಾರಕದ ಬಳಕೆಯ ಅಪಾಯದ ಪ್ರವೇಶ ತಗ್ಗಿಸುವಲ್ಲಿ ಪಾತ್ರ ವಹಿಸುತ್ತದೆ.

ಕೋಷ್ಟಕ ೨.೧೮ ಗುದ ಸಂಭೋಗದಲ್ಲಿ ಬಳಸಲ್ಪಡುವ ನುಣುಪುಕಾರಕ ಹಾಗೂ ಪುರುಷ ಸಲಿಂಗಕಾಮದಿಂದ ಹೆಚ್.ಐ. ವಿ. ಸೋಂಕು ಹರಡುವಿಕೆ ಅಪಾಯ

ಗುದ ಸಂಭೋಗದಲ್ಲಿ ಯಾವ ನುಣಿಪುಕಾರಕ	ಪುರುಷ ಕಾಮದಿಂದ ಹೆಚ್.ಐ. ವಿ. ಸೋಂಕು ಹರಡುವಿಕೆ				
	ಹೌದು		ಇಲ್ಲ		ಒಟ್ಟು
	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	
ಲೂಬ್ ಜೆಲ್	೩೦	೯೪	೦೨	೦೬	೩೨
ತೆಂಗಿನ ಎಣ್ಣೆ	೦೧	೨೫	೦೩	೭೫	೦೪
ಉಗುಳು	೦೩	೨೧	೧೧	೭೯	೧೪
ಒಟ್ಟು	೩೪	೬೮	೧೬	೩೨	೫೦

ಈ ಮೇಲಿನ ಕೋಷ್ಟಕವು ಗುದ ಸಂಭೋಗದಲ್ಲಿ ಬಳಸಲ್ಪಡುವ ನುಣುಪುಕಾರ ನಡುವಿನ ಸಂಬಂಧವನ್ನು ವಿವರಿಸುತ್ತದೆ. ೫೦ ಮಂದಿ ಸಂವಾದಿಗಳಲ್ಲಿ ೩೨ ಮಂದಿ ಲೂಬ್ ಜೆಲ್‌ನ್ನು ಗುದಸಂಭೋಗದಲ್ಲಿ ಬಳಸುತ್ತಾರೆ. ಈ ೩೨ ಮಂದಿಯಲ್ಲಿ ೩೦ (೯೪%) ಸಂವಾದಿಗಳು ಹೆಚ್.ಐವಿ ಸೋಂಕು ಹರಡುವ ಅಪಾಯ ಪುರುಷಸಲಿಂಗಕಾಮಿಗಳಲ್ಲಿ ಜಾಸ್ತಿ ಎಂದು ಒಪ್ಪುತ್ತಾರೆ. ಆದರೆ ೦೨ (೬%) ಸಂವಾದಿಗಳು ಈ ವಾದವನ್ನು ಒಪ್ಪುವುದಿಲ್ಲ. ೩೪ ಸಂವಾದಿಗಳಲ್ಲಿ ಪುರುಷ ಸಲಿಂಗಕಾಮದಿಂದ ಹೆಚ್.ಐ.ವಿ. ಹರಡುವ ಅಪಾಯ ಜಾಸ್ತಿ ಎಂದು ಒಪ್ಪಿಕೊಂಡರೆ ೧೬ ಸಂವಾದಿಗಳು ಇದನ್ನು ಒಪ್ಪುವುದಿಲ್ಲ. ಲೂಬ್ ಜೆಲ್ ಬಳಕೆಯ ಹೆಚ್.ಐ.ವಿ ಅಪಾಯ ತಡೆಯುವಲ್ಲಿ ಸಹಾಯ ಮಾಡುತ್ತದೆ ಎಂಬುದನ್ನು ಹೆಚ್ಚಿನವರು ಮಾನಗಂಡು ಬಳಸುತ್ತಾ

ಅಧ್ಯಾಯ ೩

ಪ್ರಮುಖ ಸಂಶೋಧನಾ ಫಲಿತಗಳು

ವ್ಯೆಯಕ್ತಿಕ ಚಿತ್ರಣದ ಮೇಲೆ ಪ್ರಮುಖ ಫಲಿತಗಳು

ಸಂಶೋಧನ ಅಧ್ಯಯನವು ತಿಳಿಯಪಡಿಸುದೇನೆಂದರೆ ೨೩ (೪೬%) ಸಂವಾದಿಗಳು ೨೬ ರಿಂದ ೩೩ ವಯಸ್ಸಿನ ಗುಂಪಿಗೆ ಸೇರಿದವರಾಗಿದ್ದಾರೆ. ೩೦ (೬೦%) ಸಂವಾದಿಗಳು ಹಿಂದೂ ಧರ್ಮದವರಾಗಿದ್ದಾರೆ. ಜಾತಿ ವ್ಯವಸ್ಥೆಗೆ ಸಂಬಂಧಿಸಿದಂತೆ ೧೬ (೩೨%) ಸಂವಾದಿಗಳು ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದಾರೆ. ೨೨ (೪೪%) ಸಂವಾದಿಗಳು ಶೈಕ್ಷಣಿಕವಾಗಿ ಪ್ರೌಢ ವಿದ್ಯಾಭ್ಯಾಸವನ್ನು ಕಲಿತಿರುತ್ತಾರೆ. ವೈವಾಹಿಕ ಸ್ಥಿತಿಯನ್ನು ನೋಡಿದಾಗ ಸಂವಾದಿಗಳು ೩೩ (೬೬%) ಅವಿವಾಹಿತರಾಗಿದ್ದಾರೆ. ಔದ್ಯೋಗಿಕ ಸ್ಥಿತಿಯನ್ನು ತಿಳಿಯಪಡಿಸುವುದೇನೆಂದರೆ ೩೨(೬೪%) ಸಂವಾದಿಗಳು ಭಾಗಶಃ ಉದ್ಯೋಗಸ್ಥರಾಗಿರುವುದು ಕಂಡು ಬಂದಿಂದ್ದು ಇವರು, ಕೇಟರಿಂಗ್, ರೈಲು ಟಿಕೆಟ್ ಕಾದಿರಿಸುವಿಕೆ, ನಾಟಕ, ಯಕ್ಷಗಾನ, ಅಲಂಕಾರ, ಮುಂತಾದ ಕಸುಬುಗಳಲ್ಲಿ ತೊಡಗಿರುತ್ತಾರೆ.

ಸಾಮಾಜಿಕ ಸ್ಥಿತಿಗೆ ಸಂಬಂದಿಸಿದ ಪ್ರಮುಖ ಫಲಿತಗಳು

ಸಂಶೋಧನ ಅಧ್ಯಯನವು ತಿಳಿಯಪಡಿಸುವುದೇನೆಂದರೆ ೪೨ (೮೪%) ಸಂವಾದಿಗಳು ಕೌಟುಂಬಿಕವಾಗಿ ಕೇಂದ್ರಿಕೃತ ಕುಟುಂಬ ಪದ್ಧತಿಗೆ ಒಳಗಾಗಿರುತ್ತಾರೆ. ಇವರ ಕೌಟುಂಬಿಕ ಸಂಬಂಧಗಳಿಗೆ ಸಂಬಂಧಿಸಿದಂತೆ ೨೮ (೫೬%) ಸಂವಾದಿಗಳು ಉತ್ತಮವಾಗಿದೆ ಎಂದು ಕಂಡು ಬಂದಿದೆ.ಸಂಶೋಧನಾ ಅಧ್ಯಯನವು ಗುರುತಿಸಿದಂತೆ ೩೦ (೬೦%) ಸಂವಾದಿಗಳು ತಾಯಿಯೊಂದಿಗೆ ಒಡನಾಟವನ್ನು ಹೊಂದಿದ್ದರು. ಜೊತೆಗೆ ಇವರ ಕೌಟುಂಬಿಕ ಘರ್ಷಣೆಗೆ ಸಂಬಂಧಿಸಿದಂತೆ ನೋಡಿದಾಗ ೨೮ (೫೬%) ಸಂವಾದಿಗಳ ಮನೆಗಳಲ್ಲಿ ಸಾಧಾರಣವಾಗಿ ಕಂಡುಬರುತ್ತದೆ ಎಂದು ಒಪ್ಪಿಕೊಂಡಿದ್ದಾರೆ. ೩೩ (೬೬%) ಸಂವಾದಿಗಳು ಬಾಲ್ಯದಲ್ಲಿ ತಮ್ಮ ನೆರೆಹೊರೆಯ ಹುಡುಗರೊಂದಿಗೆ ಒಡನಾಟವನ್ನು ಹೊಂದಿದ್ದರು.

ಸಂಶೋಧಕರು ಗಮನಿಸಿದಂತೆ ೩೮ (೭೬%) ಸಂವಾದಿಗಳು ಸಂಯುಕ್ತ ಶಾಲೆ ಯಲ್ಲಿ ಶಿಕ್ಷಣ ಪಡೆದಿರುತ್ತಾರೆ. ಉಡುಗೆ ತೊಡುಗೆ ವಿಚಾರದಲ್ಲಿ ೨೫ (೫೦%) ಸಂವಾದಿಗಳಿಗೆ ತಮಗೆ ಹೆಣ್ಣಿನ ಉಡುಗೆ ತೊಡುವ ಆಸಕ್ತಿಯನ್ನು ಹೊಂದಿದ್ದಾರೆ.ಹಾವಭಾವ ವ್ಯಕ್ತಪಡಿಸುವಲ್ಲಿ ಆಸಕ್ತಿಗೆ ಸಂಬಂಧಿಸಿದಂತೆ ಸಂಶೋಧನ ಅಧ್ಯಯನವು, ಹೆಚ್ಚಿನ ಸಂವಾದಿಗಳು ೨೧ (೪೨%) ಹೆಣ್ಣಿನ ಹಾವಭಾವ

ವ್ಯಕ್ತಪಡಿಸುವಿಕೆಯಲ್ಲಿ ಆಸಕ್ತಿ ಹೊಂದಿದ್ದಾರೆ ಎಂದು ತಿಳಿಯಪಡಿಸುತ್ತಾರೆ. ೨೫ (೫೦%) ಸಂವಾದಿಗಳು ಸಾಮಾಜಿಕ ಸಮಾರಂಭಗಳಲ್ಲಿ ಪುರುಷರಂತೆ ಗುರುತಿಸಿಕೊಳ್ಳಲು ಇಷ್ಟಪಡುತ್ತಾರೆ.

ಕುಟುಂಬದ ಪ್ರಮುಖ ಸಾಮಾಜಿಕ ಸಮಾರಂಭಗಳಲ್ಲಿ ೩೪ (೬೮%) ಸಂವಾದಿಗಳು ಭಾಗವಹಿಸುವುದು ತಮ್ಮ ಇಷ್ಟ ಎಂದು ಒಪ್ಪಿಕೊಂಡಿದ್ದಾರೆ. ಸಂಶೋಧಕರು ಕಂಡುಕೊಂಡಂತೆ ೨೫ (೫೦%) ಸಂವಾದಿಗಳು ಹೆಚ್ಚು ಇಷ್ಟಪಡುವ ವೇಷ ಸ್ತ್ರಿ ಆಗಿರುತ್ತದೆ. ಸ್ತ್ರೀ ವೇಷ ಧರಿಸಲು ಕಾರಣ ತಮ್ಮ ಮಸ್ಸಿನ ಸ್ತ್ರೀ ಭಾವನೆಯನ್ನು ವ್ಯಕ್ತಪಡಿಸಲು ಸೂಕ್ತ ವೇದಿಕೆಯಾಗಿದೆ ಎಂದು ಜೊತೆಗೆ ೩೩ (೬೬%) ಸಂವಾದಿಗಳು ತಮಗೆ ನೃತ್ಯವು ಮನೋರಂಜನಾ ಕಾರ್ಯಕ್ರಮಗಳಲ್ಲಿ ಅತ್ಯಂತ ಇಷ್ಟ ಎಂದು ತಿಳಿದ್ದಾರೆ. ೩೪ (೬೮%) ಸಂವಾದಿಗಲ್ಲಿ ತಮ್ಮ ಜೀವನ ಸಂಗಾತಿಯ ಆಯ್ಕೆಯಲ್ಲಿ ಮಹಿಳೆಗೆ ಪ್ರಾದನ್ಯತೆ ನೀಡಿದ್ದಾರೆ. ಸಂಶೋಧನಾ ಆದ್ಯಯನವು ತಿಳಿಸಿದಂತೆ ೧೬ (೩೨%) ಸಂವಾದಿಗಳು ತಮ್ಮ ಜೀವನ ಸಂಗಾತಿಯ ಆಯ್ಕೆ 'ಪುರುಷ' ಆಗಿದ್ದು ಪುರುಷನ ಮೇಲಿನ ಆಸಕ್ತಿಯ ಜೊತೆಗೆ ತಮ್ಮ ಹೆಣ್ಣಿನ ಮನೋಭಾವಕ್ಕೆ ಅನುಗುಣವಾಗಿ ಇರುವುದಾಗಿ ಒಪ್ಪಿಕೊಂಡಿರುತ್ತಾರೆ.

೩೮ (೭೬%) ಸಂವಾದಿಗಳು ತಮಗೆ ಒಬ್ಬಳು ಮಹಿಳೆಯನ್ನು ಸಂಗಾತಿಯಾಗಿ ಪಡೆದರೆ ಅವಳನ್ನು ತೃಪ್ತಿಪಡಿಸಲು ಸಾಧ್ಯ ಎಂದು ಒಪ್ಪಿಕೊಂಡಿದ್ದಾರೆ. ಸಂಶೋಧಕರು ಕಂಡುಕೊಂಡಾಂತೆ ಕೇವಲ ೧೨ (೨೪%) ಮಂದಿ ಸಂವಾದಿಗಳು ತಮಗೆ ಮಹಿಳೆಯನ್ನು ಜೀವನ ಸಂಗಾತಿಯಾಗಿ ತೃಪ್ತಿ ಪಡಿಸಲು ಸಾಧ್ಯವಿಲ್ಲ ಏಕೆಂದರೆ ತಮ್ಮೊಳಗೆ ಸ್ತ್ರೀ ಮನೋಭಾವ ತುಂಬಿರುವಾಗ ಆಕರ್ಷಣೆ ಬರಲು ಸಾಧ್ಯವಿಲ್ಲ ಎಂದು ಹೇಳಿಕೊಂಡಿದ್ದಾರೆ. ಮಂಗಳೂರಿನ ಪ್ರಮುಖ ಹಿಂದೂ ಹಾಗು ಮುಸ್ಲಿಂ ಧಾರ್ಮಿಕ ಸಂಘಟನೆಗಳಿಂದ, ಜೊತೆಗೆ ಈ ಸಂಘಟನೆಗಳ ಹೆಸರು ಹೇಳಿಕೊಂಡು ತೊಂದರೆ ಅಲ್ಲದೆ ಪೋಲೀಸರಿಂದಲೂ ದೌಜನ್ಯಗಳು ನಡೆಯುತ್ತಿದೆ ಎಂದು ಹೇಳಿದ್ದಾರೆ. ಸಾಮಾಜಿಕವಾಗಿ ಇವರು ಹಿಂದ್ ಕುಷ್ಠ ನಿವಾರಣ ಸಂಸ್ಥೆಯ ಸಹಾಯದಿಂದ ಸಹಜ ಸಮುದಾಯ ಸಂಘವನ್ನು ರಚಿಸಿ ನೋಂದಾಹಿಸಿಕೊಂಡಿದ್ದಾರೆ.ಜೊತೆಗೆ ಸಹಜ ಸಹಾಯ ವಾಣಿಯ ಮೂಲಕ ಸಮುದಾಯದ ವಿಪತ್ತುಗಳಿಗೆ ಸ್ಪಂದಿಸುತ್ತಿದ್ದಾರೆ.

ಆರ್ಥಿಕ ಸ್ಥಿತಿಗೆಯ ಪ್ರಮುಖ ಫಲಿತಗಳು

ಸಂಶೋಧನ ಅಧ್ಯಯನ ತಿಳಿಸಿದಂತೆ ೩೬ (೭೨%) ಸಂವಾದಿಗಳು ತಮಗೆ ಸ್ವಂತ ಭೂಮಿ ಇರುವ ಬಗ್ಗೆ ಖಚಿತ ಪಡಿಸಿಕೊಂಡಿದ್ದಾರೆ. ೧೩(೨೬%) ಸಂವಾದಿಗಳು ತಮಗೆ ವಾಣಿಜ್ಯ ಬೆಳೆಗಳು ಬೆಳೆಯಲು ಯೋಗ್ಯ ಭೂಮಿ ಇದೆ ಎಂದು ಒಪ್ಪಿಕೊಂಡಿದ್ದಾರೆ.ಸಂವಾದಿಗಳು ಮನೆ ಪರಿಸ್ಥಿತಿಯನ್ನು ಗಮನಿಸಿದಾಗ ೨೭ (೫೪%) ಸಂವಾದಿಗಳು ಪಕ್ಕಾಮನೆಯನ್ನು ಹೊಂದಿರುತ್ತಾರೆ. ೩೪ (೬೮%) ಸಂವಾದಿಗಳು ಸ್ವಂತ ಮನೆಯನ್ನು ಹೊಂದಿರುತ್ತಾರೆ. ಕುಟುಂಬದ ಮಾಸಿಕ ಆದಾಯವನ್ನು ಅವಲೋಕಿಸಿದಾಗ ೩೧ (೬೨%) ಸಂವಾದಿಗಳು ೫೦೦೦ ದಿಂದ ೭೦೦೦ ದ ವರೆಗೆ ಆದಾಯ ಇರುವವರಾಗಿದ್ದು ಅವರ ಕುಟುಂಬದ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲ ಎಂಬುದನ್ನು ತಿಳಿಸುತ್ತದೆ.

ಸಂಶೋಧಕರು ಗಮನಿಸಿದಂತೆ ೩೦ (೬೦%) ಸಂವಾದಿಗಳಲ್ಲಿ ದುಡಿಯುವವರ ಸಂಖ್ಯೆ ಕುಟುಂಬದಲ್ಲಿ ೧ ರಿಂದ ೨ ಮಂದಿ ಇರುತ್ತಾರೆ. ಉಳಿತಾಯ ವಿಷಯಕ್ಕೆ ಸಂಬಂಧಿಸಿದಂತೆ ಸಂಶೋಧನಾ ಅಧ್ಯಯನವು ತಿಳಿಸಿದಂತೆ ೨೭ (೫೪%) ಸಂವಾದಿಗಳು ಉಳಿತಾಯ ಮಾಡುವವರಾಗಿರುತ್ತಾರೆ. ೨೭ (೫೪) ಸಂವಾದಿಗಳು ಸಾಲದಲ್ಲಿ ಇರುತ್ತಾರೆ. ಇವರಲ್ಲಿ ೧೬ (೩೨%) ಮಂದಿ ಸಂವಾದಿಗಳು ಬ್ಯಾಂಕ್‌ನಿಂದ ಸಾಲ ಪಡೆದಿರುತ್ತಾರೆ ಎಂದು ಒಪ್ಪಿಕೊಂಡಿದ್ದಾರೆ.

ಆರ್ಥಿಕ ಸಂಪಾದನೆ ಉದ್ದೇಶದಿಂದ ಇತರೆ ಜಿಲ್ಲೆಗಳಿಗೆ ಅಂದರೆ ಮಂಡ್ಯದಲ್ಲಿ ವಲಸೆ ಹೋಗಿ ಹಿಜಿರಾ ಗಳಂತೆ ವೇಷ ಧರಿಸಿ ಬಸ್ತಿಮೂಲಕ ಹಣ ಸಂಗ್ರಹಿಸುವವರು ಕೂಡ ಇದ್ದಾರೆ. ಮಂಗಳೂರು ನಗರದಲ್ಲಿ ಇವರು ಸಹಜ ನವೋದಯ ಸ್ವಸಹಾಯ ಸಂಘವನ್ನು ರಚಿಸಿಕೊಂಡು ಉಲಿತಾಯ ಮಡುವ ೧೪ ಮಂದಿಯ ಗುಂಪು ಕೂಡ ಇದೆ.

ಪುರುಷ ಸಲಿಂಗ ಕಾಮಿಗಳ ಲೈಂಗಿಕತೆ ಬಗ್ಗೆ ಫಲಿತಗಳು

ಸಂಶೋಧನ ಅಧ್ಯಯನವು ತಿಳಿಸಿದಂತೆ ೨೭ (೫೪%) ಸಂವಾದಿಗಳು ೧೬ ವರ್ಷಕ್ಕಿಂತ ಮೋಲ್ಪಟ್ಟ ವಯಸ್ಸಿನ ಸಂದರ್ಭದಲ್ಲಿ ತಮ್ಮ ಮನಸ್ಸಿನಲ್ಲಿ ಸಲಿಂಗಕಾಮದ ಭಾವನೆ ಬೆಳೆಯಿತು ಎಂದು ಒಪ್ಪಿಕೊಂಡ್ಡಿದ್ದಾರೆ. ೧೫ (೩೦%) ಸಂವಾದಿಗಳು ತಮ್ಮ ೧೨ ತಿಂದ ೧೪ ವಯಸ್ಸಿನಲ್ಲಿ ಸಂದರ್ಭದಲ್ಲಿ ಪ್ರಥಮವಾಗಿ ಸಲಿಂಗ ಲೈಂಗಿಕ ಸಂಪರ್ಕಕ್ಕೆ ಒಳಗಾಗಿದ್ದಾರೆ. ಸಂಶೋಧಕರು ಗಮನಿಸಿದಂತೆ ೩೩ (೬೬%) ಸಂವಾದಿಗಳು ತಮ್ಮ ಗಳೆಯ ಜೊತೆ ಸಲಿಂಗ ಲೈಂಗಿಕ ಸಂಪರ್ಕಕ್ಕೆ ಒಳಗಾಗಿದ್ದಾರೆ. ಸಲಿಂಗ ಲೈಂಗಿಕ

ಸಂಪರ್ಕಕ್ಕೆ ಒಳಗಾದ ಸಂದರ್ಭಕ್ಕೆ ಸಂಬಂಧಿಸಿದಂತೆ ೩೬(೭೨%) ಸಂವಾದಿಗಳು ತಮಗೆ ಇಷ್ಟ ಪಟ್ಟು ಲೈಂಗಿಕ ಸಂಪರ್ಕಕ್ಕೆ ಒಳಗಾಗಿದ್ದಾರೆ. ಸಂಶೋಧಕನು ಕಂಡುಕೊಂಡಂತೆ ೮(೧೬%) ಸಂವಾದಿಗಳು ತನ್ನ ಸಂಬಂಧಿಕರಿಂದ ಬಲವಂತದ ಸಲಿಂಗ ಲೈಂಗಿಕ ಸಂಪರ್ಕಕ್ಕೆ ಒಳಗಾಗಿದ್ದಾರೆ. ಪುರುಷ ಸಲಿಂಗಕಾಮಿಗಳು ತಮ್ಮನ್ನು ತಾವು ಗುರುತಿಸಿಕೊಳ್ಳುವಿಕೆಗೆ ಸಂಬಂಧಿಸಿದಂತೆ೨೮ (೫೬%) ಸಂವಾದಿಗಳು ಕೋಥಿ ಉಪ ವಿಭಾಗಕ್ಕೆ ಸೇರಿದವರೆಂದು ಒಪ್ಪಿಕೊಂಡಿರುತ್ತಾರೆ.

೨೬(೫೨%) ಸಂವಾದಿಗಳು ಗುದಸಂಭೋಗ ಲೈಂಗಿಕ ಆಯಾಮವನ್ನು ಇಷ್ಟಪಡುತ್ತಾರೆ. ತಮ್ಮ ಸಂಗಾತಿಗಳ ಆಯ್ಕೆಬಳಸುವ ಸ್ಥಳಗಳ ಬಗ್ಗೆ ಸಂಬಂಧಿಸಿದಂತೆ ೧೭(೩೪%) ಸಂವಾದಿಗಳು ಶೌಚಾಲಯದಿಂದ ಆಯ್ಕೆ ಮಾಡುತ್ತಾರೆ. ಸಂಶೋಧನಾ ಅಧ್ಯಯನವು ತಿಳಿಯಪಡಿಸಿದಂತೆ ೨೭ (೫೪%) ಸಂವಾದಿಗಳು ಯುವಕರನ್ನು ಸಂಗಾತಿಯಾಗಿ ಪಡೆಯಲು ಇಚ್ಛಿಸುತ್ತಾರೆ. ಸಂಶೋಧಕನು ಕಂಡುಕೊಂಡಂತೆ ೩೬(೭೨%) ಸಂವಾದಿಗಳಲ್ಲಿ ತಮ್ಮ ಲೈಂಗಿಕ ಚಟುವಟಿಕೆಯನ್ನು ವಸತಿಗೃಹಗಳಲ್ಲಿ ನಡೆಸುತ್ತಾರೆ. ಸಂಶೋಧಕರು ಕಂಡುಕೊಂಡಂತೆ ೪೭(೯೪%) ಸಂವಾದಿಗಳು ಪ್ರತಿ ಲೈಂಗಿಕ ಸಂದರ್ಭದಲ್ಲಿ ಕಾಂಡೋಮ್ ಬಳಕೆ ಬಗ್ಗೆ ತಿಳಿದಿರುತ್ತಾರೆ. ೪೬ (೯೨%) ಸಂವಾದಿಗಳು ಲೈಂಗಿಕ ಸಂಪರ್ಕದಲ್ಲಿ ಕಾಂಡೋಮ್ ಬಳಕೆಯಿಂದ, ಲೈಂಗಿಕ ಸೋಂಕು ಹಾಗೂ ಎಚ್.ಐ.ವಿ ಸೋಂಕನ್ನು ತಡೆಯಬಹುದು ಎಂದು ಒಪ್ಪಿಕೊಂಡಿದ್ದಾರೆ. ಅಧ್ಯಯನವು ಗುರುತಿಸಿದಂತೆ ಬಹುಪಾಲು ಸಂವಾದಿಗಳು ತಮ್ಮ ಲಿಂಗತ್ವದ ಬಗ್ಗೆ ಸಂಶಯ ಭಾರದಂತೆ ಪಾರಾಗುವ ಕೌಶಲ್ಯ ಹೊಂದಿದ್ದಾರೆ, ಅಂದರೆ ಇವರು, ತಾವು ನಾಟ್ಯ ತರಗತಿಗಳಿಗೆ ಕಲಿಯುವವರು, ಯಕ್ಷಗಾನ ನಾಟಕದಲ್ಲಿ ಸ್ತ್ರಿ ಪಾತ್ರಧಾರಿಗಳೆಂದು ಧಾರ್ಮಿಕ ಸಮಾರಂಭಗಳಲ್ಲಿ ಸ್ತ್ರೀ ವೇಷ ಮಾಡುವ ಕಲಾವಿದರೆಂದು ಮನೆಯವರಿಗೆ ಮನವರಿಕೆ ಮಾಡಿರುತ್ತಾರೆ.

ಸಂಶೋಧಕರು ಗಮನಿಸಿದಂತೆ ಮಂಗಳೂರಿನ ಪ್ರಮುಖ ಧಾರ್ಮಿಕ ಸಾಮಾಜಿಕ ಆಚರಣೆಗಳು ಪುರುಷ ಸಲಿಂಗಕಾಮಿ ಸಮುದಾಯದವರಿಗೆ ತಮ್ಮ ಮನಸ್ಸಿನ ಭಾವನೆ, ಹೆಣ್ಣುಡುಗೆ ಧರಿಸುವ ಆಸಕ್ತಿಗೆ ಅವಕಾಶ ನೀಡಿದೆ, ಗಣೆಶೋತ್ಸವ, ಟ್ಯಾಬ್ಲೋಗಳಲ್ಲಿ ಸ್ತ್ರೀ ವೇಷ ನರ್ತಕಿಯರಾಗಿ ಹೆಚ್ಚಿನವರು ಭಾಗವಹಿಸುತ್ತಾರೆ. ಮದುವೆ ವಿಚಾರಕ್ಕೆ ಸಂಬಂಧಿಸಿದಂತೆ, ಮದುವೆಯಾದ ಸಂವಾದಿಗಳು ತಮ್ಮ ಸಂಗಾತಿಗೆ ತಮ್ಮ ಲಿಂಗತ್ವದ ಬಗ್ಗೆ ತಿಳಿಯ ಪಡಿಸಿರುವುದಿಲ್ಲ. ಜೊತೆಗೆ ೬ (೧೨%) ಸಂವಾದಿಗಳು ಸ್ತ್ರೀ ಸಂಗಾತಿಯೊಂದಿಗೆ ಭಾಳ್ವೆ ನಡೆಸಲು ಇಚ್ಛಿಸುವುದಿಲ್ಲ ಎಂದು ಹೇಳಿದ್ದಾರೆ ಕಾರಣ ಅವರಲ್ಲಿ ಸ್ತ್ರೀ ಮನೋಭಾವವಿದ್ದು ಸ್ತ್ರೀ ಆಕರ್ಷಣೆ ಕಳೆದುಕೊಂಡಿದ್ದಾರೆ. ಸಂಶೋಧನಾ ಅಧ್ಯಯನವು ಕಂಡುಕೊಂಡಂತೆ

೨೭ (೫೪%) ಸಂವಾದಿಗಳು ತಮಗೆ ಸಮಾಜದಿಂದ ತೊಂದರೆಯಾಗುತ್ತಿರುವುದಾಗಿ ಹೇಳಿಕೊಂಡಿದ್ದಾರೆ. ತಮ್ಮನ್ನು ಅಗೌರವ ಕೀಳಾಗಿಕಾಣುತ್ತಾರೆ. ಸಮಾಜ ಬಂದ ಭಾಗವೆಂದು ಪರಿಗಣಿಸುವುದಿಲ್ಲ ಎಂಬ ಕೊರಗು ಈ ಸಮುದಾಯದವರಲ್ಲಿ ಎದ್ದು ಕಾಣುತ್ತದೆ.

ಸಂಶೋಧಕರು ಗಮನಿಸಿದಂತೆ ಹಣಕ್ಕಾಗಿ ಕೂಡಾ ಲೈಂಗಿಕ ಸಂಪರ್ಕವಿಟ್ಟುಕೊಳ್ಳುವವರು ಕೂಡ ಇರುತ್ತಾರೆ ಎಂದು ೨೮(೫೬%) ಸಂವಾದಿಗಳು ಒಪ್ಪಿಕೊಂಡಿದ್ದಾರೆ ಇವರಲ್ಲಿ ೧೮(೩೬%) ಸಂವಾದಿಗಳು ಪ್ರತಿ ಸಂಪರ್ಕಕ್ಕೆ ರೂ ೧೦೦ ಪಡೆದು ಕೇಳುತ್ತಿದ್ದಾರೆ. ಸಂಶೋಧನಾ ಅಧ್ಯಯನ ಕಂಡುಕೊಂಡಂತೆ ಸಂವಾದಿಗಳು ತಮ್ಮ ಲೈಂಗಿಕ ಸಂಪರ್ಕದ ಸಂದರ್ಭ ಅನೇಕ ಒತ್ತಡಗಳಿಂದ ದೂರನಗಲು ಅಮಲು ಪದಾರ್ಥ ಸೇವನೆಗೂ ಒಳಗಾಗುತ್ತಾರೆ ೨೩ (೪೬%) ಸಂವಾದಿಗಳು ಈ ಮಾತನ್ನು ಒಪ್ಪಿಕೊಂಡಿರುತ್ತಾರೆ. ಸಂಶೋಧಕರು ಕಂಡುಕೊಂಡಂತೆ ಕಾಂಡೋಮ್ ಬಳಸುವುದಕ್ಕಿಂದ, ಅದರ ಸರಿಯಾದ ಬಳಕೆ ವಿಧಾನದ ಮೂಲಕ ಬಳಸಿಕೊಂಡಂರೆ ಮಾತ್ರ ಬಳಕೆಯ ಹಿಂದಿನ ಉದ್ದೇಶ ಸಾಕಾರವಾಗಬಹುದು. ೪೫ (೯೦%) ಸಂವಾದಿಗಳಿಗೆ ಕಾಂಡೋಮ್ ಬಳಕೆ ವಿಧಾನ ಸರಿಯಾಗಿ ತಿಳಿದಿದೆ.

ಲೈಂಗಿಕ ದುರ್ಬಲಕೆಗೆ ಸಂಬಂದಿಸಿದಂತೆ ನೋಡಿದಾಗ ೧೯ (೩೮%) ಸಂವಾದಿಗಳು ಗೂಂಡಾಗಳಿಂದ, ಅನ್ಯಪುರುಷರಿಂದ ಬಲವಂತವು ಅವರನ್ನು ಹಲವು ಅಪಾಯಗಳಿಗೆ ಒಡ್ಡಿರುವುದಲ್ಲದೆ, ಸಲಿಂಗ ಲೈಂಗಿಕರೆಗೆ ಅವರು ಒಳಗಾಗಲೂ ಕಾರಣವಾಗಿದೆ ಎಂದು ತೀರ್ಮಾನಿಸಬಹುದು.

ಸಂಶೋಧಾನಾ ಅಧ್ಯಯನವು ಕಂಡುಕೊಂಡಂತೆ ೪೮ (೯೬%) ಸಂವಾದಿಗಳು ತಮ್ಮ ಲಿಂಗತ್ವದ ಬಗ್ಗೆ ಕುಟುಂಬದವರಲ್ಲಿ ಹೇಳಿಕೊಂಡಿರುವುದಿಲ್ಲ ಕಾರಣ ಪ್ರಮುಖವಾಗಿ ತಮ್ಮ ಜೀವನ, ಸಾಮಾಜಿಕ ಬದುಕಿನ ಭದ್ರತೆ ದೃಷ್ಟಿಯಿಂದ. ಸಂವಾದಿಗಳಲ್ಲಿ ೩೬ (೭೨%) ಮಂದಿಗೆ ಹೆಚ್.ಐ.ವಿ. ಹರಡಲು ಇರುವ ಪ್ರಮುಖ ನಾಲ್ಕು ಕಾರಣಗಳ ಅರಿವು ಇದೆ. ಜೊತೆಗೆ ಗುದ ಸಂಭೋಗವು ಹೆಚ್ಚು ಅಪಾಯವೆಂದು ಇವರು ನಂಬಿರುತ್ತಾರೆ. ಸಂಶೋಧನಾ ಅಧ್ಯಯನವು ಕಂಡುಕೊಂಡಂತೆ, ಗುದ ಸಂಭೋಗ ಬಹು ಸಂಗಾತಿಗಳಿಂದಾಗಿ ಬಹುಪಾಲು ಸಂವಾದಿಗಳು ಹೆಚ್.ಐ.ವಿ ಸೋಂಕಿಗೆ ತುತ್ತಾಗುವ ಅಪಾಯವು ಜಾಸ್ತಿ ಇರುವುದಾಗಿಯೂ ಒಪ್ಪಿಕೊಂಡಿರುವುದರ ಜೊತೆಗೆ, ಸರಕಾರಿ ಆಸ್ಪತ್ರೆಯ ಐ.ಸಿ.ಟಿ.ಸಿ ಕೇಂದ್ರಗಳಲ್ಲೇ ಎಚ್.ಐ.ವಿ ಪರೀಕ್ಷೆಮಾಡಿಸಬೇಕು ಜೊತೆಗೆ ಪರಿಕ್ಷಾಪೂರ್ವ ಮತ್ತು ಪರಿಕ್ಷಾನಂತರದ ಆಪ್ತಸಮಲೋಚನೆಯು ಅಗತ್ಯವೆಂಬುದನ್ನು ಮನಗಂಡಿದ್ದಾರೆ.

ಕೊನೆಯ ಮಾತು

ರುಸೋರವರ 'ಸಾಮಾಜಿಕ ಒಪ್ಪಂದ'ದ ಸಂಕ್ಷೇಪೋಕ್ತಿಯಂತೆ "ಮಾನವ ಹುಟ್ಟುವಾಗ ಸ್ವತಂತ್ರನಾಗಿದ್ದು ಬೆಳೆಯುತ್ತ ಸಾಮಾಜಿಕ ಸಂಬಂಧಗಳ ಸಂಕೋಲೆಗಳಿಂದ ಬಂದಿಸಲ್ಪಡುತ್ತಾನೆ" ಎನ್ನುವ ಮಾತು ಅಕ್ಷರಸಃ ಪುರುಷ ಸಲಿಂಗಕಾಮಿಗಳಿಗೆ ಅನ್ವಯವಾಗುತ್ತದೆ. ನಮ್ಮ ಸಮಾಜದಲ್ಲಿ ಗಂಡು-ಹೆಣ್ಣಿನ ನಡುವಿರುವ ಲೈಂಗಿಕ ಸಂಬಂಧವೇ ಸಹಜವಾದ ಹಾಗೂ ನೈಸರ್ಗಿಕವಾದ ಸಂಬಂಧವೆಂಬುದು ಬಹು ಸಂಖ್ಯಾತರಲ್ಲಿರುವ ನಂಬಿಕೆಯಾಗಿದೆ. ಈ ಸಹಜವಾದ ಸಂಬಂಧ, ವಿವಾಹ, ಕುಟುಂಬದ ಸುತ್ತ ಹಲವಾರು ಸಾಂಸ್ಕೃತಿಕ, ಸಾಮಾಜಿಕ ಹಾಗೂ ಧಾರ್ಮಿಕ ಮೌಲ್ಯಗಳು, ಕಲ್ಪನೆಗಳು ಸನಾತನ ಕಾಲದಿಂದಲೂ ಪ್ರಚಲಿತದಲ್ಲಿವೆ. ಈ ನಂಬಿಕೆಯನ್ನು ಪುನರ್‌ಪರಿಶೀಲಿಸುವ, ಪುನರ್ ವ್ಯಾಖ್ಯಾನಿಸುವ ಜರೂರನ್ನು ಲೈಂಗಿಕ ಅಲ್ಪಸಂಖ್ಯಾತರು ನಮ್ಮ ಮುಂದೆ ಇಟ್ಟಿದ್ದಾರೆ.

ಲೈಂಗಿಕತೆಗೆ ಸಂಬಂಧ ಪಟ್ಟಂತೆ ಪುರುಷ ಸಲಿಂಗಕಾಮಿಗಳು ಎತ್ತುತ್ತಿರುವ ಪ್ರಶ್ನೆಗಳು ಸಾಂಪ್ರದಾಯಿಕ ಲೈಂಗಿಕ ಅಭಿವ್ಯಕ್ತಿಯ ಹಿಂದಿರುವ ಸನಾತನ ಧೋರಣೆಗಳನ್ನು, ಮೌಲ್ಯಗಳನ್ನು ಪ್ರಶ್ನಿಸುತ್ತವೆ. ಸಹಜವಾದ ನೈಸರ್ಗಿಕ ಸಂಬಂಧವೆಂದರೇನು? ಹಿಜಡಾಗಳು, ದ್ವಿಲಿಂಗಿಗಳು, ಪುರುಷ-ಪುರುಷರ ನಡುವಿನ, ಮಹಿಳೆ-ಮಹಿಳೆಯರ ನಡುವಿನ ಲೈಂಗಿಕ ಸಂಬಂಧಗಳು ನಮ್ಮ ಸಂಸ್ಕೃತಿಕ ಮೌಲ್ಯಗಳ ನೈತಿಕರೆಯ ಹಿನ್ನೆಲೆಯಲ್ಲಿ ಮರೆ ಮಾಚುವುದೇಕೆ? ಎಂಬುದು ಇವರ ಸವಾಲು.

ಪುರುಷ ಸಲಿಂಗಕಾಮಿಗಳು, ಹೀಯಾಳಿಕೆಗೆ, ಅವಮಾನಕೋ, ಅಪಹಾಸ್ಯಕ್ಕೊಳಗಾಗುವ ಗುಂಪುಗಳಾಗಿ ಪರಿಗಣಿಸಲ್ಪಟ್ಟಿದ್ದಾರೆ. ಅವರ ದೈಹಿಕ ವ್ಯತ್ಯಾಸಗಳನ್ನು, ಲೈಂಗಿಕ ಅಭಿವ್ಯಕ್ತಿಯನ್ನು ವಿಕೃತ ನಡುವಳಿಕೆಯೆಂದು, ರೋಗಗ್ರಸ್ತವೆಂದು, 'ವಿಕಲಾಂಗತೆ' ಎಂದು ಕರೆಯಲಾಗುತ್ತದೆ. ಸಮಾಜದ ಸ್ವಾಸ್ಥ್ಯವನ್ನು ಕಾಪಾಡಬೇಕೆಂದರೆ ಈ ರೋಗಕ್ಕೆ ಚಿಕಿತ್ಸೆ ನೀಡ ಬೇಕೆಂಬುದು ಸಂಪ್ರದಾಯಸ್ಥ ಬಹು ಸಂಖ್ಯಾತರು ನಿಲುವು.

ಆಧುನಿಕ ಕಾಲಕ್ಕೆ ತಕ್ಕಂತೆ ಜೀವನ ಶೈಲಿ ಬದಲಾದಂತೆ 'ಲೀವ್ ಇನ್ ಟುಗೆದರ್' (ಮದುವೆಯಾಗದೆಯೇ ಗಂಡು ಹೆಣ್ಣು ಒಟ್ಟಾಗಿ ಬಾಳುವುದು) ನಂತಹ ಪದ್ಧತಿಗಳು ನಮ್ಮಲ್ಲಿ ಸಾಮಾನ್ಯ ಎಂಬತಾಗುತ್ತಿರುವ ಜೊತೆ ಜೊತೆಗೆ ಸಲಿಂಗಕಾಮ ಕೂಡಾ ಇಂದು ಗುಟ್ಟಾಗಿ ಉಳಿದಿಲ್ಲ. ಹಿಂದೊಂದು

ಕಾಲದಲ್ಲಿ ಸಮಾಜದ ಅವಕೃಪೆಗೆ ಒಳಗಾಗಿದ್ದ ಸಲಿಂಗಕಾಮಿಗಳು ಇದೀಗ ರಾಜಾರೋಷವಾಗಿ ಸಮಾಜದ ಎದುರು ತಮ್ಮ ಸಂಬಂಧದ ಕುರಿತು ಒಪ್ಪಿಕೊಳ್ಳುತ್ತಿದ್ದಾರೆ.ಕೆಲವರು ಒಟ್ಟಾಗಿ ಜೀವಿಸಲು ಕೂಡ ಮುಂದೆ ಬರುತ್ತಿದ್ದಾರೆ. ಇದೇ ಸಂದರ್ಭದಲ್ಲಿ ನಮ್ಮಲ್ಲಿನ ಸಮಾಜ ಇದಕ್ಕೆ ಒಪ್ಪಿಗೆಕೊಡುವುದಿಲ್ಲ ಎಂಬ ವಾದವನ್ನು ಮುಂದಿಟ್ಟುಕೊಂಡಿದೆ.

ಈ ಸಮುದಾಯವನ್ನು ಅವರ ಜಾಗದಲ್ಲಿ ನಿಂತು ನಾವು ಅರ್ಥೈಸಿದಾರ ಮಾತ್ರ ಇವರ ವರ್ತನೆ ಕಾರಣಗಳು, ಇವರ ಸಮಸ್ಯೆ ಸವಾಲುಗಳನ್ನು ಸರಿಯಾಗಿ ಮನದಟ್ಟುಮಾಡಿ ಕೊಳ್ಳಬಹುದಾಗಿದೆ. ಲೈಂಗಿಕ ಆಸಕ್ತಿಯ ಮತ್ತೊಂದು ರೂಪದಲ್ಲಿ ಪ್ರಕಟಿಸಲ್ಪಟ್ಟ ಸ್ವಾಭಾವಿಕ ಪ್ರಕಟಣೆ ಎಂದು ನಾವು ಒಪ್ಪಿಕೊಳ್ಳಬೇಕು. ಬದಲಾಗಿ ಇದೊಂದು ಅಸ್ವಾಭಾವಿಕ ಅಥವಾ ಮನೋವ್ಯಾಧಿಯನ್ನು ಪರಿಗಣಿಸುವುದು ಶುದ್ಧ ತಪ್ಪಾಗಿದೆ.

ಈ ಅಂಶಗಳನ್ನು ನಾವು ಗಮನಿಸಿದಾಗ ಪುರುಷ ಸಲಿಂಗಕಾಮಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಉತ್ತಮ ಪಡಿಸಿ ಅವರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ನಮ್ಮಂತೆ ಅವರು ಮಾನವರೇ ಎಂದು ನಾವು ಅರ್ಥೈಸಿದಾಗ ಮಾತ್ರ ಪುರುಷ ಸಲಿಂಗಕಾಮ ಸ್ವಾಭಾವಿಕ ಎನ್ನುವುದನ್ನು ಸಮಾಜ ಒಪ್ಪಿಕೊಳ್ಳುತ್ತದೆ.

ಗ್ರಂಥ ಸೂಚಿ

೧. ಪುಸ್ತಕಗಳು ಸೂಚಿ

ಉಷಾ ಮತ್ತು ಇತರರು. ೨೦೦೫. *ಅಂತರ-ಲಿಂಗೀಯ ಸಮುದಾಯದವರ ಮಾನವ ಹಕ್ಕುಗಳ ಉಲ್ಲಂಘನೆ.* ಬೆಂಗಳೂರು: ಕ್ರಿಯಾ ಪ್ರಕಾಶನ ಪ್ರೈ. ಲಿ.

ಶಂಕರ್, ಮಾಯಾ. ೨೦೦೫. *ಎ ಗೈಡ್ ಟು ಯುವರ್ ರೈಟ್ಸ್.* ಬೆಂಗಳೂರು: ಸಂಗಿನಿ ಟ್ರಸ್ಟ್.

ಪದ್ಮಿನಿ, ಪ್ರಸಾದ್.೨೦೦೮. *ಲೈಂಗಿಕ ವೈವಿಧ್ಯ.* ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್.

ವಿನೋದ, ಛೆಬ್ಬಿ.೨೦೦೮. *ಲೈಂಗಿಕತೆ: ವಿವಿಧ ಆಯಾಮಗಳು* ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್.

ಚಂದ್ರಶೇಖರ್, ಸಿ.ಆರ್.೨೦೦೮. *ಲೈಂಗಿಕ ಅರಿವು.*ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್.

ತಮಿಳ್, ಸೆಲ್ವಿ. ೨೦೦೮. *ನಾನು ಅವನಲ್ಲ................ ಅವಳು...................!* .ಬೆಂಗಳೂರು: ಪ್ರಗತಿ ಗ್ರಾಫಿಕ್ಸ್.

ಕೃಷ್ಣಮೂರ್ತಿ, ಸಿ.ಎಮ್. ೨೦೦೮. *ವಾತ್ಸಾಯನ ಕಾಮಸೂತ್ರ.* ಬೆಂಗಳೂರು: ಭಾಗ್ಯಲಕ್ಷ್ಮಿ ಪ್ರಕಾಶನ.

ನಾರಾಯಣಸ್ವಾಮಿ, ಕೆ. ೨೦೦೯. *ಸೆಕ್ಸ್ವರ್ಕರ್ ಒಬ್ಬಳ ಆತ್ಮಕಥನ.* ಬೆಂಗಳೂರು: ತೃಪ್ತಿ ಪಬ್ಲಿಕೇಷನ್ಸ್.

ಪದ್ಮಿನಿ, ಪ್ರಸಾದ್.೨೦೦೯. *ಲೈಂಗಿಕ ಆರೋಗ್ಯ.* ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್.

ಹಿಪ್ನೋ, ಕಮಲಾಕರ.೨೦೦೯. *ಆರೋಗ್ಯಕರ ಲೈಂಗಿಕತೆ.* ಬೆಂಗಳೂರು: ನವಭಾರತ ಪಬ್ಲಿಕೇಶನ್.

ಸರಸ್ವತಿ, ದು. ೨೦೦೯. *ನೈತಿಕತೆಯ ಹೊಸ ಭಾಷ್ಯ,* ಬೆಂಗಳೂರು: ಆಲ್ಟರ್‌ನೇಟಿವ್ ಲಾ ಫೋರಂ.

ಇಸ್ಮಾಈಲ್, ನಈಮಿ ಮಂಗಳ ಪೇಟೆ. ೨೦೦೯. ಮಂಗಳೂರು: *ಸಲಿಂಗರತಿ ಇಸ್ಲಾಮೀ ದೃಷ್ಟಿಕೋನ.* ಮರ್ಸಿನ್ ಪಬ್ಲಿಕೇಶನ್ಸ್.

ಸೋಮೇಶ್ವರ, ನಾ. ೨೦೧೦. *ನೆಮ್ಮದಿಯ ಬದುಕಿಗೆ ಲೈಂಗಿಕ ಸ್ವಚ್ಛತೆ.* ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್.

ಹಿಪ್ನೋ, ಕಮಲಾಕರ.೨೦೧೦. *ಕಾಮಸೂತ್ರ.* ಬೆಂಗಳೂರು: ಸಾಧನ ಪ್ರಕಾಶನ.

೨. ನಿಯತಕಾಲಿಕಗಳ ಸೂಚಿ

ಪುರುಷ ಸಲಿಂಗಕಾಮ; ಇದರಲ್ಲಿ ನಮ್ಮ ತಪ್ಪೇನಿದೆ?. ಕ್ರೈಂ ನ್ಯೂಸ್. ಸೆಪ್ಟೆಂಬರ್ ೨೦೦೯

ಸಲಿಂಗಕಾಮವನ್ನು ಕಾನೂನುಬದ್ಧಗೊಳಿಸುವ ಪ್ರಸ್ತಾವನೆಗೆ ಮಾನವಹಕ್ಕು ಆಯೋಗ ಬೆಂಬಲ. ವಿಜಯ ಕರ್ನಾಟಕ. ೧೮ .೦೭. ೨೦೦೯

ಸ್ವೀಕಾರಾರ್ಹವಾಗುತ್ತಿರುವ ಸಲಿಂಗ ಕಾಮ. ಕ್ರೈಂ ನ್ಯೂಸ್. ನವಂಬರ ೨೦೦೯

ಮಂಗಳ ಮುಖಿಯರಿಗೆ ಒಂದಿನದ ತಾಳಿ ಭಾಗ್ಯ!. ವಿಜಯ ಕರ್ನಾಟಕ. ೧೬.೦೨.೨೦೧೦

ಲೈಂಗಿಕ ಅಲ್ಪಸಂಖ್ಯಾತರು ೨ಎ ಪ್ರವರ್ಗಕ್ಕೆ: ಸರಕಾರ ಚಿಂತನೆ. ವಿಜಯ ಕರ್ನಾಟಕ. ೧೮.೧೧.೨೦೧೦

ಶಿಲಾಯುಗದಲ್ಲೂ ಸಲಿಂಗಕಾಮಿ ಇದ್ದ.... ವಿಜಯ ಕರ್ನಾಟಕ. ೧೮.೦೪.೨೦೧೧

ಸುಮನಾ, ಲಕ್ಷ್ಮೀಶ. *ಹಿಜಡಾ ದುನಿಯಾ ದಡಗಳ ನಡುವೆ....* ವಿಜಯ ಕರ್ನಾಟಕ. ೦೫.೦೫.೨೦೧೧

ಶುಭಾ, ವಿಕಾಸ್. *ಬದುಕು ಬದಲು.* ವಿಜಯ ಕರ್ನಾಟಕ. ೨೬.೦೫. ೨೦೧೧.

೩. ಇತರ ಆಕರಗಳಸೂಚಿ

ಅಂಡರ್‌ಸ್ಟಾಡಿಂಗ್ ಸೆಕ್ಸುವಲ್ ಮೈನಾರಿಟೀಸ್. ತರಬೇತಿ ಸಾಮಾಗ್ರಿ ೨೦೦೮.

ರಾಜ್ಯ ತರಭೇತಿ ಮತ್ತು ಸಂಪನ್ಮೂಲ ಕೇಂದ್ರ ಕರ್ನಾಟಕ – ಬರ್ಡ್ಸ್. ತರಬೇತಿ ಸಾಮಾಗ್ರಿ ೨೦೧೦.

೨೦೦೫. *ಎ ಕನ್‌ವರ್‌ಶನ್ ಆನ್ ಸೆಕ್ಸುವಲ್ ರೈಟ್ಸ್ ಇನ್ ಇಂಡಿಯಾ.* ಬೆಂಗಳೂರು: ಕ್ರಿಯಾ ಸಂಗಮ ಮತ್ತು ತಾರ್ಸಿ.

೨೦೦೫. *ರೈಟ್ಸ್ ಫಾರ್ ಆಲ್: ಎಂಡಿಂಗ್, ಡಿಸ್‌ಕ್ರಿಮಿನೇಶನ್ ಎಗೈಂಸ್ಟ್ ಕ್ವೀರ್ ಡಿಸೈರ್ ಅಂಡರ್ ಸೆಕ್ಷನ್ಸ್ ೩೭೭.* ದಿಲ್ಲಿ: ದೃಷ್ಟಿ ವಿಶನ್.

೪. ಅಂತರ್‌ಜಾಲಗಳ ಸೂಚಿ

ಡಬ್ಲ್ಯುಡಬ್ಲ್ಯುಡಬ್ಲ್ಯು.ನ್ಯಾಕೋಆನ್‌ಲೈನ್.ಒಆರ್‌ಜಿ

ಡಬ್ಲ್ಯುಡಬ್ಲ್ಯುಡಬ್ಲ್ಯು.ವಿಕಿಪೀಡಿಯ.ಕಾಮ್

ಅನುಬಂಧ ೧

ಪುರುಷ ಸಲಿಂಗ ಕಾಮಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಮಂಗಳೂರು ನಗರದ ಒಂದು ಅಧ್ಯಯನ

ಪ್ರಶ್ನಾವಳಿ

I. ವೈಯಕ್ತಿಕ ಚಿತ್ರಣ

೧.೧ ಹೆಸರು:

೧.೨ ವಿಳಾಸ:

೧.೩ ಪ್ರಾಯ:

ಅ) ೧೮–೨೫, ಆ) ೨೬–೩೩, ಇ) ೩೪–೪೧, ಈ) ೪೧–೪೮

೧.೪ ಧರ್ಮ: ಅ) ಹಿಂದೂ ಆ) ಕ್ರಿಶ್ಚಿಯನ್ ಇ) ಮುಸ್ಲಿಂ ಈ) ಇತರ

೧.೫ ಜಾತಿ: ಅ) ಉನ್ನತ ಜಾತಿ, ಆ) ಹಿಂದುಳಿದ ಜಾತಿ ಇ) ಪರಿಶಿಷ್ಟ ಜಾತಿ ಈ) ಪರಿಶಿಷ್ಟ ವರ್ಗ.

೧.೬ ಶಿಕ್ಷಣ: ಅ) ಅನಕ್ಷರಸ್ಥ ಆ) ಪ್ರಾಥಮಿಕ ಶಿಕ್ಷಣ ಇ) ಪ್ರೌಢ ಶಿಕ್ಷಣ

ಈ) ಪದವೀ ಪೂರ್ವ ಉ) ಪದವಿ ಸ್ನಾತಕೋತರ

೧.೭ ವೈವಾಹಿಕ ಸ್ಥಿತಿ: ಅ) ವಿವಾಹಿತ ಆ) ಅವಿವಾಹಿತ ಇ) ವಿಚ್ಛೇದಿತ ಈ) ದೂರವಾಗು

೧.೮ ಉದ್ಯೋಗ ಸ್ಥಿತಿ: ಅ) ಪ್ರಸ್ತುತ ನಿರುದ್ಯೋಗಸ್ಥ ಆ) ಪೂರ್ಣಾವಧಿ ಉದ್ಯೋಗಸ್ಥ

ಇ) ಭಾಗಶಃ ಉದ್ಯೋಗಸ್ಥ ಈ) ವಿದ್ಯಾರ್ಥಿ ಉ) ಇತರ

೧.೯ ಕೌಟುಂಬಿಕ ವಿವರ

ಅ.ನಂ	ಸಂಬಂಧ	ವಯಸ್ಸು	ಶಿಕ್ಷಣ	ವೃತ್ತಿ	ತಿಂಗಳ ಆದಾಯ	ಷರಾ
೧						
೨						
೩						
೪						
೫						

II. ಸಾಮಾಜಿಕ ಸ್ಥಿತಿ

೨.೧ ಕೌಟುಂಬಿಕ ಹಿನ್ನಲೆ:

ಅ) ಕೂಡು ಕುಟುಂಬ ಆ) ಕೇಂದ್ರೀಕೃತ ಕುಟುಂಬ ಇ) ವಿಸ್ತೃತ ಕುಟುಂಬ

೨.೨ ಕೌಟುಂಬಿಕ ಸಂಬಂಧಗಳು:

ಅ) ಅತ್ಯುತ್ತಮ ಆ) ಉತ್ತಮ ಇ) ಸಾಧಾರಣ/ತೃಪ್ತಿಕರ ಈ) ನಿಕೃಷ್ಟ

೨.೩ ಕುಟುಂಬದ ಸದಸ್ಯರೊಂದಿಗೆ ಹೆಚ್ಚು ಒಡನಾಟ:

ಅ) ತಂದೆ ಆ) ತಾಯಿ ಇ) ಸಹೋದರ ಈ) ಸಹೋದರಿ

೨.೪ ಮನೆಕೆಲಸಗಳಲ್ಲಿ ಆಸಕ್ತಿ:

ಅ) ಹೆಚ್ಚು ಆ) ಸಾಧಾರಣ ಇ) ಕಡಿಮೆ ಅ.೧) ಹೆಚ್ಚು ಯಾಕೆ

೨.೫ ಕೌಟುಂಬಿಕ ಘರ್ಷಣೆ: ಅ) ಹೆಚ್ಚು ಆ) ಸಾಧಾರಣ ಇ) ಕಡಿಮೆ

ಅ.೧) ಹೆಚ್ಚು ಯಾಕೆ

೨.೬ ಬಾಲ್ಯದಲ್ಲಿ ನೆರೆಹೊರೆಯರೊಂದಿಗೆ ಹೆಚ್ಚಿನ ಒಡನಾಟ:

ಅ) ಹುಡುಗರು ಆ) ಹುಡುಗಿಯರು

೨.೭ ಶಾಲೆಯ ವಿಧ: ಅ) ಸಂಯುಕ್ತ ಶಾಲೆ ಆ) ಗಂಡು ಮಕ್ಕಳ ಶಾಲೆ

೨.೮ ಉಡುಗೆ ತೊಡುಗೆ ವಿಚಾರದಲ್ಲಿ ಆಸಕ್ತಿ: ಅ) ಹೆಣ್ಣಿನ ಆ) ಗಂಡಿನ ಇ) ಎರಡು

ಅ.೧) ಹೆಚ್ಚು ಯಾಕೆ

೨.೯ ಹಾವ ಭಾವ ವ್ಯಕ್ತಪಡಿಸುವಲ್ಲಿ ಆಸಕ್ತಿ:

ಅ) ಗಂಡಿನ ಆ) ಹೆಣ್ಣಿನ ಇ) ಸಂದರ್ಭಕ್ಕನುಸಾರ

೨.೧೦ ಸಾಮಾಜಿಕ ಸಮಾರಂಭಗಳಲ್ಲಿ ಗುರುತಿಸಿಕೊಳ್ಳುವಿಕೆ:

ಅ) ಪುರುಷ ಆ) ಮಹಿಳೆ ಇ) ಮಾಮೂಲಿ ಆ.೧) ಯಾಕೆ

೨.೧೧ ಕುಟುಂಬದ ಸಾಮಾಜಿಕ ಸಮಾರಂಭಗಳಲ್ಲಿ ಭಾಗವಹಿಸಲು ಇಚ್ಛೆ ಪಡುತ್ತೀರಾ :

ಅ) ಹೌದು ಆ)ಇಲ್ಲ ಇ) ಇಲ್ಲವಾದಲ್ಲಿ ಕಾರಣ:

೨.೧೨ ಸಾಮಾಜಿಕ ಸಮಾರಂಭಗಳಲ್ಲಿ ಹೆಚ್ಚು ಇಷ್ಟ ಪಟ್ಟು ಕುಣಿಯುವ ವೇಷ:

ಅ) ಪುರುಷ ಆ) ಮಹಿಳೆ ಇ) ಇತರ ಆ.೧) ಮಹಿಳೆ ಯಾಕೆ

೨.೧೩ ನೀವು ಹೆಚ್ಚು ಇಷ್ಟ ಪಡುವ ಮನೋರಂಜನಾ ಕಾರ್ಯಕ್ರಮ :

ಅ) ನೃತ್ಯ ಆ) ಸಂಗೀತ ರಸಮಂಜರಿ

೨.೧೪ ನಿಮ್ಮ ಜೀವನದ ಸಂಗಾತಿ ಆಯ್ಕೆ: ಅ) ಪುರುಷ ಆ) ಮಹಿಳೆ ಆ) ಪುರುಷ ಯಾಕೆ

೨.೧೫ ಒಬ್ಬಳು ಮಹಿಳೆಯನ್ನು ಜೀವನ ಸಂಗಾತಿಯಾಗಿ ಪಡೆದರೆ ಅವಳನ್ನು ತೃಪ್ತಿಪಡಿಸಲು ಸಾಧ್ಯವೇ ?

ಅ) ಹೌದು ಆ) ಅಲ್ಲ ಆ) ಅಲ್ಲ ಯಾಕೆ

III. ಆರ್ಥಿಕಸ್ಥಿತಿ

೩.೧ ನಿಮಗೆ ಸ್ವಂತ ಭೂಮಿ ಇದೆಯೇ: ಅ) ಹೌದು ಆ) ಅಲ್ಲ

೩.೨ ಸ್ವಂತ ಭೂಮಿಯ ವಿವರ: ಅ) ನೀರಾವರಿ ಭೂಮಿ ಆ) ವಾಣಿಜ್ಯ ಬೆಳೆಗಳ ಭೂಮಿ

ಇ) ವಾಣಿಜ್ಯ ಸಂಕೀರ್ಣ ನಿರ್ಮಾಣ ಯೋಗ್ಯ ಭೂಮಿ.

೩.೩ ಮನೆಯ ಪರಿಸ್ಥಿತಿ: ಅ) ತಾರಸಿ ಮನೆ ಆ) ಕಚ್ಚಾ ಮನೆ ಇ) ಪಕ್ಕಾಮನೆ

೩.೪ ಮನೆಯ ಸ್ವರೂಪ: ಅ) ಮನೆಯ ಮಾಲಿಕತ್ವ ಆ) ಸ್ವಂತ ಇ) ಬಾಡಿಗೆ

ಈ) ಬಾಡಿಗೆ ಯಾಗಿದ್ದರೆ ತಿಂಗಳ ಬಾಡಿಗೆ ರೂ.

೩.೫ ದುಡಿಯುವವರ ಸಂಖ್ಯೆ ಕುಟುಂಬದಲ್ಲಿ

ಅ) ೧ ರಿಂದ ೨ ಆ) ೩ರಿಂದ ೪ ಇ) ೫ರಿಂದ ಮೇಲ್ ಪಟ್ಟು

೩.೬ ನೀವು ಉಳಿತಾಯ ಮಾಡುತ್ತೀರಾ? ಅ) ಹೌದು ಆ) ಇಲ್ಲ

ಹೌದಾದರೆ ಎಲ್ಲಿ ಉಳಿತಾಯ ಮಾಡುತ್ತೀರಿ? ಇಲ್ಲದಿದ್ದರೆ ಯಾಕೆ?

೩.೭ ನೀವು ಯಾರಿಂದಲಾದರೂ ಸಾಲದಲ್ಲಿ ಇದ್ದೀರಾ? ಅ) ಹೌದು ಆ) ಇಲ್ಲ

ಹೌದಾದರೆ ಸ್ಪಷ್ಟಪಡಿಸಿ ಯಾರಿಂದ ಎಷ್ಟು

ಅ) ಬ್ಯಾಂಕ್ ಆ) ಲೇವಾದೇವಿಗಾರರು ಇ) ಫೈನಾನ್ಸ್ ಈ) ಇತರೆ ಸ್ಪಷ್ಟಪಡಿಸಿ

IV. ಪುರುಷ ಸಲಿಂಗ ಕಾಮಿಗಳ ಲೈಂಗಿಕತೆ ಬಗ್ಗೆ

೪.೧ ಪುರುಷ ಸಲಿಂಗಕಾಮದ ಭಾವನೆ ನಿಮಗೆ ಯಾವ ವಯಸ್ಸಿನಲ್ಲಿ ಪ್ರಾರಂಭವಾಯಿತು.

೪.೨ ಪ್ರಥಮವಾಗಿ ಯಾವ ವಯಸ್ಸಿನಲ್ಲಿ ಸಲಿಂಗ ಲೈಂಗಿಕ ಸಂಪರ್ಕವನ್ನು ಇಟ್ಟುಕೊಂಡಿರಿ

೪.೩ ಯಾರ ಜೊತೆ

೪.೪ ಸಲಿಂಗ ಲೈಂಗಿಕ ಸಂಪರ್ಕಕ್ಕೆ ಒಳಗಾದ ಸಂದರ್ಭ ಅ) ಇಷ್ಟಪಟ್ಟು ಆ) ಬಲವಂತದಿಂದ

ಆ) ಬಲವಂತದಿಂದ ಆದರೆ ಯಾರಿಂದ

೪.೫ ಲೈಂಗಿಕವಾಗಿ ನಿಮ್ಮನ್ನು ನೀವು ಗುರುತಿಸಿ ಕೊಳ್ಳುವಿಕೆ

ಅ) ಕೋಥಿ ಆ) ಡಿ.ಡಿ. ಇ) ಪಂಥಿ ಈ) ದ್ವಿಲಿಂಗ ಕಾಮಿ ಉ) ಇತರ

೪.೬ ನೀವು ಹೆಚ್ಚು ಲೈಂಗಿಕ ಸಂಪರ್ಕವನ್ನು ಯಾವ ದೃಷ್ಟಿಯಿಂದ ಮಾಡುತ್ತೀರಿ :

ಅ) ತೃಪ್ತಿಗಾಗಿ ಆ) ಹಣಕ್ಕಾಗಿ ಇ) ಚಟಕ್ಕಾಗಿ

೪.೭ ನೀವು ಯಾವ ವಿಧದ ಲೈಂಗಿಕ ಆಯಾಮವನ್ನು ಇಷ್ಟ ಪಡುತ್ತೀರಾ?

ಅ) ಗುದ ಸಂಭೋಗ ಆ) ಬಾಯಿ ಸಂಭೋಗ ಇ) ತೊಡೆ ಸಂಭೋಗ

೪.೮ ನೀವು ಸಂಗಾತಿಯನ್ನು ಯಾವ ಯಾವ ಸ್ಥಳಗಳಲ್ಲಿ ಆಯ್ಕೆ ಮಾಡುತ್ತೀರಿ?

ಅ) ಉದ್ಯಾನ ಆ) ಶೌಚಾಲಯ ಇ) ಬಸ್ಸು ನಿಲ್ದಾಣ

ಈ) ಸಿನೆಮಾ ಮಂದಿರ ಉ) ಮೈದಾನ ಊ) ವಾಣಿಜ್ಯ ವ್ಯಾಪಾರಿ ಮಳಿಗೆ ಪಕ್ಕ

೪.೯ ಸಂಗಾತಿಯ ಆಯ್ಕೆ: ಅ) ಹುಡುಗರು ಆ) ಯುವಕರು

ಇ) ಮಧ್ಯ ವಯಸ್ಸಿನವರು ಈ) ಮುದುಕರು ಯಾಕೆ

೪.೧೦ ಲೈಂಗಿಕ ಚಟುವಟಿಕೆಗಳ: ಅ) ಉದ್ಯಾನ ಆ) ಶೌಚಾಲಯ ಇ) ಪೊದೆ

ಈ) ವಸತಿಗೃಹ ಉ) ಮನೆ

೪.೧೧ ಲೈಂಗಿಕ ಸಂದರ್ಭದಲ್ಲಿ ತಪ್ಪದೆ ಕಾಂಡೋಮ್ ಬಳಕೆ ಬಗ್ಗೆ ತಿಳಿದಿದ್ದೀರಾ ?

ಅ) ಹೌದು ಆ) ಇಲ್ಲ

೪.೧೨ ಲೈಂಗಿಕ ಸಂಪರ್ಕದಲ್ಲಿ ಕಾಡೋಮ್ ಬಳಕೆಯಿಂದಾಗುವ ಪ್ರಯೋಜನ

ಅ) ಲೈಂಗಿಕ ಸೋಂಕು ಹಾಗೂ ಎಚ್.ಐ.ವಿ. ಸೋಂಕನ್ನು ತಡೆಯಬಹುದು

ಆ) ಘರ್ಷಣೆ ರಕ್ತಸ್ರಾಯ ಪಡೆಯಬಹುದು ಇ) ಲೈಂಗಿಕ ಸ್ವಚ್ಚತೆ ಕಾಪಾಡಬಹುದು.

೪.೧೩ ಲೈಂಗಿಕ ಸಂಪರ್ಕದಲ್ಲಿ ಕಾಂಡೋಮ್ ಬಳಕೆಯಿಂದ ತೃಪ್ತಿ ಸಿಗುವುದಿಲ್ಲ ಎಂಬ ಮಾತು ಒಪ್ಪಿವಿರಾ?

ಅ) ಹೌದು ಆ) ಇಲ್ಲ

೪.೧೪ ಲೈಂಗಿಕ ಸೋಂಕುಗಳ ಬಗ್ಗೆ ಮಾಹಿತಿ ಹೊಂದಿದ್ದೀರಾ? ಅ) ಹೌದು ಆ) ಇಲ್ಲ

೪.೧೫ ಲೈಂಗಿಕ ಸಂಪರ್ಕದ ಸಂಧರ್ಭದ ಸಮಯದಲ್ಲಿ ಉಂಟಾಗುವ ತೊಂದರೆಗಳು.

ಅ) ಪೋಲೀಸರಿಂದ ಆ) ಗೂಂಡಾಗಳಿಂದ ಇ) ಸಾರ್ವಜನಿಕರಿಂದ

ಈ) ಇತರರು ಸ್ಪಷ್ಟಪಡಿಸಿ

೪.೧೬ ಲೈಂಗಿಕ ಸಂಗಾತಿಗಳೊಡನೆ ಅಪಮಾನ, ಘರ್ಷಣೆ ಸಂಬವಿಸುತ್ತಿದೆಯೇ? ಅ) ಹೌದು ಆ) ಇಲ್ಲ

೪.೧೭ ದಿನಕ್ಕೆ ಎಷ್ಟು ಲೈಂಗಿಕ ಸಂಪರ್ಕವನ್ನಿಟ್ಟುಕೊಳ್ಳುತ್ತೀರಿ. ಅ) ಒಂದು ಬಾರಿ ಆ) ಎರಡು

ಇ) ಮೂರು ಈ) ನಾಲ್ಕು ಮತ್ತು ಅದಕ್ಕಿಂತ ಹೆಚ್ಚು

೪.೧೮ ನೀವು ಹಣಕ್ಕಾಗಿ ಲೈಂಗಿಕ ಸಂಪರ್ಕ ಇಟ್ಟುಕೊಳ್ಳುತ್ತೀರಾ: ಅ) ಹೌದು ಆ) ಇಲ್ಲ

ಹೌದಾದರೆ ಪ್ರತಿ ಒಂದು ಸಂಪರ್ಕಕ್ಕೆ ಎಷ್ಟು : ಅ) ೧೦೦ ಆ) ೨೦೦ ಇ) ೩೦೦

ಈ) ೫೦೦ ಕ್ಕಿಂತ ಮೇಲೆ

೪.೧೯ ಲೈಂಗಿಕ ಸಂಪರ್ಕ ಸಂದರ್ಭದಲ್ಲಿ ಅಮಲು ಪದಾರ್ಥ ಸೇವನೆ ಅಭ್ಯಾಸ ಬೆಳೆಸಿಕೊಂಡಿದ್ದೀರಾ?

ಅ) ಹೌದು ಆ) ಇಲ್ಲ

ಯಾಕೆ

೪.೨೦ ಕಾಂಡೋಮ್ ಬಳಕೆಗೆ ವಿರೋಧವಿರುವ ಗಿರಾಕಿಯೊಂದಿಗೆ ಕಾಂಡೋಮ್ ಬಳಕೆಯ ಮನವರಿಕೆಯ ತಂತ್ರ ಹೊಂದಿದ್ದೀರಾ ಅ) ಹೌದು ಆ) ಇಲ್ಲ

೪.೨೧ ಬಾಯಿ ಸಂಭೋಗದಲ್ಲಿ ಕಾಂಡೋಮ್ ಬಳಕೆ ಮಾಡುತ್ತೀರಾ? ಅ) ಹೌದು ಆ) ಇಲ್ಲ

೪.೨೨ ಲೈಂಗಿಕ ಸಂಪರ್ಕದಲ್ಲಿ ಬಳಸಲ್ಪಡುವ ಕಾಂಡೋಮ್:

ಅ) ಉಚಿತ ವಿತರಣೆಯ ಆ) ಸಾಮಾಜಿಕ ಮಾರುಕಟ್ಟೆ

ಇ) ವಾಣಿಜ್ಜಿಕ ವಿತರಣೆ ಕಾಂಡೋಮ್

೪.೨೩ ಕಾಂಡೋಮ್ ಬಳಕೆಯ ಸರಿಯಾದ ವಿಧಾನ ನಿಮಗೆ ತಿಳಿದಿದೆಯೇ?

ಅ) ಹೌದು ಆ) ಇಲ್ಲ

೪.೨೪ ಗುದ ಸಂಭೋಗದಲ್ಲಿ ಯಾವ ನುಣಿಪುಕಾರಕ ಬಳಸುತ್ತೀರಿ ?

ಅ) ಲೂಬ್ ಜೆಲ್ ಆ) ತೆಂಗಿನ ಎಣ್ಣೆ ಇ) ಉಗುಳು

೪.೨೫ ಗೂಂಡಗಳಿಂದ / ಪುರುಷರಿಂದ ಬಲವಂತಾದ ಲೈಂಗಿಕತೆಗೆ ಒಳಗಾಗಿದ್ದೀರಾ ?

ಅ) ಹೌದು ಆ) ಇಲ್ಲ

V. ಅವರ ಕುಟುಂಬ ಮತ್ತು ಸಮಾಜದಲ್ಲಿ ಅವರ ಪಾತ್ರದ ಬಗ್ಗೆ

೫.೧ ಕುಟುಂಬದಲ್ಲಿ ತಮ್ಮ ಲಿಂಗತ್ವದ ಬಗ್ಗೆ ಹೇಳಿಕೊಂಡಿದಿದ್ದೀರಾ ?

ಅ) ಹೌದು ಆ) ಇಲ್ಲ ಯಾಕೆ ಇಲ್ಲವಾದರೆ ಕಾರಣ

೫.೨ ಮನೆಯವರಿಗೆ ನಿಮ್ಮ ಲಿಂಗತ್ವದ ಬಗ್ಗೆ ಸಂಶಯ ಮಾಡಿದಲ್ಲಿ ಪರಾಗುವ ಕೌಶಲ್ಯ ಹೊಂದಿದ್ದೀರಾ?

ಅ) ಹೌದು ಆ) ಇಲ್ಲ ಹೌದಾದರೆ ಹೇಗೆ

೫.೩ ಸಮಾಜದಲ್ಲಿ ನಿಮ್ಮ ಲಿಂಗತ್ವದ ಬಗ್ಗೆ ಗುರುತಿಸಿಕೊಳ್ಳುವಿರಾ ? ಅ) ಹೌದು ಆ) ಇಲ್ಲ ಇಲ್ಲವಾದರೆ ಕಾರಣ

೫.೪ ಸಾರ್ವಜನಿಕವಾಗಿ ನಿಮಗೆ ಇಷ್ಟವಾದ ಸ್ತ್ರೀ ಉಡುಪನ್ನು ಧರಿಸಲು ಸಿದ್ದರಿದ್ದೀರಾ ?

ಅ) ಹೌದು ಆ)ಇಲ್ಲ ಇಲ್ಲವಾದರೆ ಕಾರಣ

೫.೫ ನಿಮ್ಮ ಲಿಂಗತ್ವ ಮನೋಭಾವನೆಗಳನ್ನು ಯಾವ ಸಂಧರ್ಭದಲ್ಲಿ ಹೆಚ್ಚು ವ್ಯಕ್ತಪಡಿಸುತ್ತೀರಿ ?

ಅ) ಸಹವರ್ತಿಗಳೊಂದಿಗೆ ಗುಂಪಿನಲ್ಲಿ ಇದ್ದಾಗ

ಆ) ಸಾಮಾಜಿಕ ಮನೋರಂಜನಾ ಕಾರ್ಯಕ್ರಮಗಳಲ್ಲಿ

ಇ) ಕೆಲವು ಪ್ರಮುಖ ಸಮಾರಂಭಗಳಲ್ಲಿ

೫.೬ ಮಂಗಳೂರಿನ ಯಾವ ಸಂದರ್ಭಗಳಲ್ಲಿ ಸ್ತ್ರೀ ವೇಷ ಧರಿಸಲು ಅವಕಾಶ ಮುಕ್ತವಾಗಿರುತ್ತದೆ.

ಅ) ಗಣೇಶ ಚತುರ್ಥಿ ಆಚರಣೆ ಆ) ದಸರಾ ಉತ್ಸವ

ಇ) ಜನ್ಮಾಷ್ಟಿಮಿ ಉತ್ಸವ ಈ) ಜಾತ್ರೆ

೫.೭ ನಿಮಗೆ ಮದುವೆಯಾಗಿದ್ದಲ್ಲಿ ನಿಮ್ಮ ಲಿಂಗತ್ವವನ್ನು ನಿಮ್ಮ ಸಂಗಾತಿಗೆ ತಿಳಿಸಲು ಇಷ್ಟಪಡುತ್ತೀರಾ?

ಅ) ಹೌದು ಆ) ಇಲ್ಲ ಇಲ್ಲವಾದರೆ ಕಾರಣ

೫.೮ ನೀವು ಮದುವೆಯಾಗಿ ಒಬ್ಬಲು ಸ್ತ್ರೀ ಸಂಗಾತಿಯೊಂದಿಗೆ ಭಾಳ್ವೆ ನಡೆಸಲು ಇಚ್ಚಿಸುತ್ತೀರಾ ?

ಅ) ಹೌದು / ಇಲ್ಲ ಇಲ್ಲವಾದರೆ ಕಾರಣ

೫.೯ ಕುಟುಂಬದ ಒತ್ತಾಯಕ್ಕೆ ನೀವು ಮದುವೆಯಾಗಲು ತಯಾರಿದ್ದೀರಾ ? ಹೌದು / ಇಲ್ಲ ಇಲ್ಲವಾದಲ್ಲಿ ಏಕೆ ?

೫.೧೦ ಸಮಾಜದಿಂದ ನಿಮಗೆ ತೊಂದರೆವಾಗುತ್ತಿದೆ ಎಂದ ಭಾವನೆ ಇದೆಯೇ. ಅ) ಹೌದು ಆ) ಇಲ್ಲ

ಹೌದಾಗಿದ್ದರೆ ಯಾವ ರೀತಿಯ ತೊಂದರೆ.

VI. ಹೆಚ್.ಐ.ವಿ ಮತ್ತು ಅಪಾಯದ ಬಗ್ಗೆ ಮಾಹಿತಿ ಅರಿಯಲು

೬.೧ ಪುರುಷ ಸಲಿಂಗಕಾಮಿಗಳು ಹೆಚ್ಚು ಆಪಾಯ ಸಾಧ್ಯ ಗುಂಪೆಂದು ನಂಬಿಪಿರಾ ? ಹೌದು / ಇಲ್ಲ

ಹೌದಾದರೆ ಯಾಕೆ

೬.೨ ಪುರುಷ ಕಾಮದಿಂದ ಹೆಚ್.ಐ.ವಿ. ಸೋಂಕು ಹರಡಬದುದೆಂಬುದನ್ನು ಒಪ್ಪಿವಿರಾ? ಹೌದು/ಇಲ್ಲ

೬.೩ ಹೆಚ್.ಐ.ವಿ. ಹರಡಲು ಇರುವ ಪ್ರಮುಖ ಕಾರಣಗಳು ಯಾವುವು

೬.೪ ಸಲಿಂಗಕಾಮಿವಾದಲ್ಲಿ ಯಾವ ಲೈಂಗಿಕ ವಿಧ ಹೆಚ್ಚು ಅಪಾಯವೆಂದು ತಿಳಿದಿದ್ದೀರಿ

೬.೫ ಸಲಿಂಗಕಾಮಿಗಳು ಹೆಚ್.ಐ.ವಿ ಸೊಂಕಿಗೆ ತುತ್ತಾಗುವ ಅಪಾಯ ಜಾಸ್ತಿ ಎಂಬುದನ್ನು ಒಪ್ಪಿವಿರಾ?

ಅ) ಹೌದು ಆ) ಇಲ್ಲ

೬.೬ ಹೆಚ್.ಐ.ವಿ ಗೆ ಔಷಧಿ ಇದೆ ಎಂಬುದನ್ನು ನಂಬುವಿರಾ ? ಹೌದು / ಇಲ್ಲ

೬.೭ ಹೆಚ್.ಐ.ವಿ ಇವೆ ಎಂಬುದನ್ನು ಹೇಗೆ ಪತ್ತೆ ಹಚ್ಚಬಹುದು.

೬.೮ ಲೈಂಗಿಕ ಸಂಪರ್ಕದಲ್ಲಿ ಹೆಚ್.ಐ.ವಿ ಏಡ್ಸನ್ನು ಹೇಗೆ ತಡೆಗಟ್ಟಬಹುದು?

೬.೯ ಹೆಚ್.ಐ.ವಿ. ಪರೀಕ್ಷೆಯನ್ನು ಎಲ್ಲಿ ಮಾಡಿಸಿದರೆ ಸೂಕ್ತವೆಂದು ಭಾವಿಸಿದ್ದೀರಿ?

೬.೧೦ ನೀವು ಹೆಚ್.ಐ.ವಿ ಪರೀಕ್ಷೆ ಮಾಡಿಸಕೊಂಡಿದ್ದೀರಾ? ಹೌದು / ಇಲ್ಲ

ಹೌದಾದರೆ ಎಲ್ಲಿ ಮಾಡಿಸಿಕೊಂಡಿದ್ದೀರಾ?

೬.೧೧ ಹೆಚ್.ಐ.ವಿ ಪರೀಕ್ಷೆಗೆ ಮೊದಲು ಮತ್ತು ಕೊನೆಯ ಸಮಾಲೋಚನೆ ಅಗತ್ಯವೆಂದು ಹೇಳುವಿರಾ?

ಹೌದು / ಇಲ್ಲ

ಹೌದಾದರೆ ಏಕೆ?

ಅನುಬಂಧ ೨

ಕೆಲವು ಪದಗಳ ಅರ್ಥ

- ಪರಲಿಂಗ ಕಾಮತ್ವ (ಹಿಟಿರೋಸೆಕ್ಸುವಲ್): ಒಬ್ಬ ವ್ಯಕ್ತಿ, ಹೆಣ್ಣು ಅಥವಾ ಗಂಡು, ತನ್ನ ವಿರುದ್ಧ ಲಿಂಗವುಳ್ಳ ವ್ಯಕ್ತಿಯೊಡನೆ ದೈಹಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ಆಕರ್ಷಣೆ ಹೊಂದುವುದು.
- ಸಲಿಂಗ ಕಾಮತ್ವ (ಹೋಮೋಸೆಕ್ಸುವಲ್): ಒಬ್ಬ ವ್ಯಕ್ತಿ, ಹೆಣ್ಣು ಅಥವಾ ಗಂಡು, ತನ್ನದೇ ಆದ ಲಿಂಗವುಳ್ಳ ವ್ಯಕ್ತಿಯೊಡನೆ ದೈಹಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ಆಕರ್ಷಣೆ ಹೊಂದುವುದು.
- ದ್ವಿಲಿಂಗ ಕಾಮತ್ವ (ಬೈಸೆಕ್ಸುವಲ್): ಒಬ್ಬ ವ್ಯಕ್ತಿ ದೈಹಿಕವಾಗಿ ಮಾನಸಿಕವಾಗಿ, ಭಾವನಾತ್ಮಕವಾಗಿ ಹೆಣ್ಣು ಮತ್ತು ಗಂಡು ಇಬ್ಬರಲ್ಲೂ ಆಕರ್ಷಣೆಗೊಳಪಡುವುದು.
- ಸಮಲಿಂಗಿಗಳ ಭೀತಿ (ಬೈ ಫೋಬಿಯಾ): ದ್ವಿಲಿಂಗ ಕಾಮತ್ವದ ಬಗ್ಗೆ ಅವ್ಯಕ್ತ ಭಯ.
- ಟ್ರಾನ್ಸ್‌ವೆಸ್ಟೈಟ್ : ಬದಲುಡುಗೆ ಅಥವಾ ಭಿನ್ನ ಲಿಂಗದ ಉಡುಪನ್ನು ತೊಡಲು ಇಚ್ಛಿಸುವ ವ್ಯಕ್ತಿ.
- ಟ್ರಾನ್ಸ್ ಜೆಂಡರ್: ಲಿಂಗ ಬದಲಾಯಿಸಿಕೊಳ್ಳುವುದು.
- ನಿರ್ವಾಣ (ಕ್ಯಾಸ್ಟ್ರೇಶನ್): ಬೀಜ ಅಥವಾ ವೃಷಣಗಳ ಛೇದನ.
- ಇಗೋಸಿನ್ಟೋನಿಕ್: ಲೈಂಗಿಕತೆಯನ್ನು ಇದ್ದಂತೆಯೇ ಒಪ್ಪಿಕೊಂಡಿರುವುದು.
- ಇಗೋಡಿಸ್ಟೋನಿಕ್: ಲೈಂಗಿಕತೆಯ ಬಗ್ಗೆ ಗೊಂದಲ, ದ್ವಂದ್ವ ಇರುವುದು.
- ಲೈಂಗಿಕತೆಯ ಶೋಷಿತರ ಸಂಘಟನೆಗಳು: ಸಂಗಮ, ಸ್ವಭಾವ, ಸಬ್ ರಂಗ್, ಪಿಯುಸಿಎಲ್, ಗುಡ್ ಎಸ್ ಯೂ, ಆಲ್ಟರ್ನೇಟಿವ್ ಲಾ ಪೋರಮ್, ಸ್ನೇಹಾಶ್ರಯ,ಇತ್ಯಾದಿ